ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 25 ಸೋಮವಾರ 2022

ಸಂಪುಟ: 43 | ಸಂಚಿಕೆ: 100 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೊಡಗಲ್ಲಿ ಪದೇಪದೆ ಭೂ ಕುಸಿತ, ಭೂ ಕಂಪನ
ಸರ್ಕಾರಕ್ಕೆ ಹೈ ನೋಟಿಸ್

ಅಧ್ಯಯನಕ್ಕೆ ವಿಶೇಷ ತಂಡ ರಚಿಸಲು ನಿರ್ದೇಶನ ನೀಡುವಂತೆ ಸಾಮಾಜಿಕ ಕಾರ್ಯಕರ್ತೆಯಿಂದ ಪಿಐಎಲ್





ಬೆಂಗಳೂರು: ಕೊಡಗಿನಲ್ಲಿ ಪದೇಪದೆ ಸಂಭವಿಸುತ್ತಿರುವ ಭೂ ಕುಸಿತ ಮತ್ತು ಭೂ ಕಂಪನ ಸಂಬಂಧ ಅಧ್ಯಯನಕ್ಕೆ ವಿಶೇಷ ತಂಡ ರಚಿಸುವ ಸಲುವಾಗಿ ವಿವರ ನೀಡುವಂತೆ ಕೊಡಗು ಜಿಲ್ಲಾಧಿಕಾರಿ ಮತ್ತು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಕೊಡಗಿನಲ್ಲಿ ಪದೇಪದೆ ಸಂಭವಿಸುತ್ತಿರುವ ಭೂ ಕುಸಿತ ಮತ್ತು ಭೂ ಕಂಪನಕ್ಕೆ ನಿಖರ ಕಾರಣ ಪತ್ತೆ ಹಚ್ಚಲು ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ನಡೆಸಲು ವಿಶೇಷ ತಂಡ ರಚನೆಗೆ ಆದೇಶಿಸಬೇಕೆಂದು ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತೆ ಗೀತಾ ಮಿಶ್ರಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ಕೈಗೆತ್ತಿಕೊಂಡ ಹಂಗಾಮಿ ಸಿಜೆ ಅಲೋಕ್ ಅರಾಧೆ ಹಾಗೂ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ಪೀಠವು ಜಿಲ್ಲಾಧಿಕಾರಿ ಮತ್ತು ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ವಾದ ಮಂಡಿಸಿದ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 2018ರಲ್ಲಿ ಕೊಡಗಿನಲ್ಲಿ ಭಾರಿ ಮಳೆಯಿಂದಾಗಿ ಪ್ರಾಣ ಮತ್ತು ಅಪಾರ ಆಸ್ತಿ–ಪಾಸ್ತಿ ನಷ್ಟವಾಯಿತು. ಅದಾದ ನಂತರ ಪ್ರತಿ ವರ್ಷವೂ ಜಿಲ್ಲೆಯಾದ್ಯಂತ ಭೂ ಕುಸಿತ ಮತ್ತು ಭೂ ಕಂಪನಗಳು ಹೆಚ್ಚಾಗುತ್ತಿದ್ದು, ಜೀವ ಹಾಗೂ ಆಸ್ತಿ–ಪಾಸ್ತಿ ಹಾನಿ ಪ್ರತಿ ವರ್ಷವೂ ಜಾಸ್ತಿಯಾಗುತ್ತಿದೆ. ಇದಕ್ಕೆ ಜಿಲ್ಲಾಡಳಿತದ ನಿರ್ಲಕ್ಷ್ಯವೇ ಕಾರಣ, ಕೊಡಗು ಜಿಲ್ಲೆಯಲ್ಲಿ ಹಾನಿ ತಡೆಗೆ ಶಾಶ್ವತ ಕ್ರಮ ಕೈಗೊಳ್ಳುವಂತೆ 2020ರಲ್ಲಿಯೇ ಸರಕಾರಕ್ಕೆ ಮನವಿ ಸಲ್ಲಿಸಿದ್ದರೂ ಏನೂ ಕ್ರಮ ಕೈಗೊಂಡಿಲ್ಲ ಎಂದರು. ಸರಕಾರ ವೈಜ್ಞಾನಿಕ ರೀತಿಯಲ್ಲಿ ಭೂ ಕಂಪನ ಮತ್ತು ಭೂ ಕುಸಿತಕ್ಕೆ ▶ 8ನೇ ಪುಟಕ್ಕೆ

ನೂತನ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಇಂದು ಪ್ರಮಾಣ ವಚನ

ನವದೆಹಲಿ, ಜು.24– ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ದೇಶದ ನೂತನ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸೋಮವಾರ ಬೆಳಗ್ಗೆ 10.15ಕ್ಕೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.


ದ್ರೌಪದಿ ಮುರ್ಮು

ಸೇನಾ ಸಿಬ್ಬಂದಿ 21 ಬಾರಿ ಕುಶಾಲ ತೋಪು ಸಿಡಿಸಿದ ನಂತರ ರಾಷ್ಟ್ರಪತಿಯಾಗಿ ಆಯ್ಕೆಯಾದವರು ಪ್ರಮಾಣ ವಚನ ಸ್ವೀಕರಿಸಲಿದ್ದು, ನಂತರ ಭಾಷಣ ಮಾಡಲಿದ್ದಾರೆ. ಸಮಾರಂಭಕ್ಕೂ ಮುನ್ನ, ನಿರ್ಗಮಿಸುವ ಅಧ್ಯಕ್ಷರು ಮತ್ತು ಅಧ್ಯಕ್ಷರಾಗಿ ಆಯ್ಕೆಯಾದವರು ವಿಧ್ಯುಕ್ತ ಮೆರವಣಿಗೆಯಲ್ಲಿ ಸಂಸತ್ತಿಗೆ ಆಗಮಿಸುತ್ತಾರೆ. ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಸಚಿವರು, ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಂಸದರು, ರಾಜತಾಂತ್ರಿಕ ಕಾರ್ಯಗಳ ಮುಖ್ಯಸ್ಥರು, ಸಂಸದರು ಮತ್ತು ಸರ್ಕಾರದ ಪ್ರಧಾನ ನಾಗರಿಕ ಮತ್ತು ಮಿಲಿಟರಿ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸಮಾರಂಭದ ಮುಕ್ತಾಯದ ನಂತರ ರಾಷ್ಟ್ರಪತಿಗಳು ರಾಷ್ಟ್ರಪತಿ ಭವನಕ್ಕೆ ತೆರಳುತ್ತಾರೆ. ಅಲ್ಲಿ ಅವರಿಗೆ ಸೇನಾ ಗೌರವ ನೀಡಲಾಗುತ್ತದೆ ಮತ್ತು ನಿರ್ಗಮಿತ ರಾಷ್ಟ್ರಪತಿಗೂ ಗೌರವ ಸಲ್ಲಿಸಲಾಗುತ್ತದೆ. ಮುರ್ಮು ರಾಷ್ಟ್ರಪತಿ ಹುದ್ದೆ ಅಲಂಕರಿಸುತ್ತಿರುವ ಬುಡಕಟ್ಟು ಸಮುದಾಯದ ಮೊದಲನೆಯ ಹಾಗೂ ದೇಶದ 2ನೇ ಮಹಿಳೆಯಾಗಿದ್ದಾರೆ.

ಅಗ್ನಿಪಥ್: ನೇಮಕಾತಿ ಪರೀಕ್ಷೆ ಪ್ರಾರಂಭ



ನವದೆಹಲಿ, ಜು.24– ಭಾರತೀಯ ವಾಯು ಪಡೆಗೆ ಅಗ್ನಿಪಥ್ ಯೋಜನೆಯಡಿ ಮೊದಲ ನೇಮಕಕ್ಕೆ ಭಾನುವಾರ ಬಿಗಿ ಭದ್ರತೆ ನಡುವೆ ಪರೀಕ್ಷೆ ದೇಶಾದ್ಯಂತ ಪ್ರಾರಂಭವಾಗಿದೆ. ದೆಹಲಿ, ಕಾನ್ಪುರ, ಪಾಟ್ನಾ ಸೇರಿದಂತೆ ಹಲವು ಪ್ರದೇಶಗಳಲ್ಲಿ ಪರೀಕ್ಷೆ ಪ್ರಾರಂಭಗೊಂಡಿದೆ. ▶ 8ನೇ ಪುಟಕ್ಕೆ

ಕೇಂದ್ರದ ಯೋಜನೆ ಜನರಿಗೆ ತಲುಪಿಸಿ
ಬಿಜೆಪಿ ಸಿಎಂಗಳಿಗೆ ಪ್ರಧಾನಿ ಮೋದಿ ಸೂಚನೆ


ನವದೆಹಲಿ, ಜು.24– ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರಿಗೆ ಸಮರ್ಥವಾಗಿ ತಲುಪಿಸುವಂತೆ ಬಿಜೆಪಿ ಆಡಳಿತವಿರುವ ರಾಜ್ಯಗಳ ಸಿಎಂಗಳಿಗೆ ಪ್ರಧಾನಿ ಮೋದಿ ಸೂಚನೆ ನೀಡಿದ್ದಾರೆ. ಬಿಜೆಪಿ ಆಡಳಿತವಿರುವ ರಾಜ್ಯಗಳ 12 ಮುಖ್ಯಮಂತ್ರಿಗಳು ಹಾಗೂ 8 ಉಪಮುಖ್ಯಮಂತ್ರಿಗಳ ಜೊತೆ ದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸಭೆ ನಡೆಸಿದರು. ಈ ವೇಳೆ 'ಕೇಂದ್ರದ ಎಲ್ಲಾ ಯೋಜನೆಗಳನ್ನು ಗರಿಷ್ಠ ಮಟ್ಟದಲ್ಲಿ ಜನರಿಗೆ ತಲುಪಿಸುವಂತೆ ಮಾಡಬೇಕು. ಈ ವಿಚಾರದಲ್ಲಿ ಬಿಜೆಪಿ ಆಡಳಿತವಿರುವ ರಾಜ್ಯಗಳು ಮುಂಚೂಣಿಯಲ್ಲಿರಬೇಕು ಎಂದು ಸೂಚಿಸಿದ್ದಾರೆ.



ದೇಶದಲ್ಲಿ ಉದ್ಯಮ ವಾತಾವರಣಕ್ಕೆ ಇನ್ನಷ್ಟು ಉತ್ತೇಜನ ನೀಡಲು ಬಿಜೆಪಿ ಹಾಗೂ ಎನ್‌ಡಿಎ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ. ಗತಿಶಕ್ತಿ, ಹರ್ ಘರ್ ಜಲ್ ಮತ್ತು ಇತರ ಪ್ರಮುಖ ಸರ್ಕಾರಿ ಯೋಜನೆಗಳ ಅನುಷ್ಠಾನಕ್ಕೆ ಪ್ರಧಾನಿ ಮೋದಿ ಒತ್ತು ನೀಡಿದರು ಮತ್ತು ಶುದ್ಧತ್ವ ಮಟ್ಟದ ವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳುವತ್ತ ಸಾಗುವಂತೆ ▶ 8ನೇ ಪುಟಕ್ಕೆ

ಸಂಕಟದಲ್ಲಿ ಪ್ರಕೃತಿ ಮಾತೆ, ಹವಾಮಾನ ಬಿಕ್ಕಟ್ಟು ಭೂಮಿಯ ಭವಿಷ್ಯ ಅಪಾಯಕ್ಕೆ ದೂಡಬಹುದು
ವಿದಾಯ ಭಾಷಣದಲ್ಲಿ ರಾಮನಾಥ್ ಕೋವಿಂದ್

ನವದೆಹಲಿ, ಜು.24– ಪ್ರಕೃತಿ ಮಾತೆ ತೀವ್ರ ಸಂಕಟದಲ್ಲಿದ್ದು, ಹವಾಮಾನ ಬಿಕ್ಕಟ್ಟು ಭೂಮಿಯ ಭವಿಷ್ಯವನ್ನು ಅಪಾಯಕ್ಕೆ ದೂಡಬಹುದು ಎಂದು ತಮ್ಮ ವಿದಾಯ ಭಾಷಣದಲ್ಲಿ ನಿರ್ಗಮಿತ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹೇಳಿದ್ದಾರೆ.


ರಾಮನಾಥ ಕೋವಿಂದ್

ಭಾರತದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಧಿಕಾರವಧಿ ನಾಳೆ ಮುಗಿಯಲಿದ್ದು ಭಾನುವಾರ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ್ದಾರೆ. '5 ವರ್ಷಗಳ ಹಿಂದೆ ಚುನಾಯಿತ ಜನಪ್ರತಿನಿಧಿಗಳ ಮೂಲಕ ನಾನು ರಾಷ್ಟ್ರಪತಿಯಾಗಿ ಆಯ್ಕೆಯಾಗಿದ್ದೆ. ರಾಷ್ಟ್ರಪತಿಯಾಗಿ ನನ್ನ ಅವಧಿ ಇಂದಿಗೆ ಮುಕ್ತಾಯವಾಗುತ್ತಿದೆ. ನಿಮ್ಮೆಲ್ಲರಿಗೂ ಮತ್ತು ನಿಮ್ಮ ಸಾರ್ವಜನಿಕ ಪ್ರತಿನಿಧಿಗಳಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಾನು ಬಯಸುತ್ತೇನೆ ಎಂದು ಕೋವಿಂದ್ ಹೇಳಿದ್ದಾರೆ. ತಾಯಿ ಪ್ರಕೃತಿಯು ಆಳವಾದ ಸಂಕಟದಲ್ಲಿದೆ ಮತ್ತು ಹವಾಮಾನ ಬಿಕ್ಕಟ್ಟು ಈ ಗ್ರಹದ ಭವಿಷ್ಯವನ್ನು ಅಪಾಯಕ್ಕೆ ತರಬಹುದು. ನಮ್ಮ ಮಕ್ಕಳಿಗಾಗಿ ▶ 8ನೇ ಪುಟಕ್ಕೆ

ದೇಶದಲ್ಲಿ 4ನೇ ಮಂಕಿಪಾಕ್ಸ್ ಪ್ರಕರಣ
ಕೇಂದ್ರದಿಂದ ಉನ್ನತ ಮಟ್ಟದ ಸಭೆ



ನವದೆಹಲಿ,ಜು.24–ದೇಶದಲ್ಲಿ ಮಂಕಿಪಾಕ್ಸ್‌ನ 4ನೇ ಪ್ರಕರಣ ವರದಿಯಾಗಿದ್ದು, ಕೇಂದ್ರ ಸರ್ಕಾರ ಉನ್ನತ ಮಟ್ಟದ ಸಭೆ ನಡೆಸಿದೆ. ಭಾನುವಾರದಂದು ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶನಾಲಯದಿಂದ ಈ ಉನ್ನತ ಮಟ್ಟದ ಸಭೆ ನಡೆದಿದೆ ಎಂದು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ ಮಾಹಿತಿ ನೀಡಿದೆ. ರಾಷ್ಟ್ರ ರಾಜಧಾನಿಗೂ ಮಂಕಿಪಾಕ್ಸ್ ಸೋಂಕು ಹರಡಿದ್ದು, ಯಾವುದೇ ▶ 8ನೇ ಪುಟಕ್ಕೆ

ಮೈಸೂರು ಹೊರ ವಲಯದಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕ ಪತ್ತೆ

- ಅಲ್ಪ ಪ್ರಮಾಣದ ಅಸಲಿ ರಸಗೊಬ್ಬರದ ಜೊತೆ ರೆಡ್ ಆಕ್ಸೈಡ್ ಲೇಪಿಸಿದ ಜೇಡಿ ಮಣ್ಣನ್ನು ಬೆರೆಸಲಾಗುತ್ತಿತ್ತು
- ಮಿಕ್ಸರ್ ಯೂನಿಟ್, ವಿವಿಧ ಕಂಪನಿಗಳ ಚೀಲಗಳು, ಹೊಲಿಗೆ ಯಂತ್ರ, ತೂಕದ ಯಂತ್ರ ಪತ್ತೆ
- ಕೃಷಿ ಅಧಿಕಾರಿಗಳಿಂದ ದಾಳಿ, ಮೈಸೂರು ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲು
- ಖಾಲಿ ಕೋಳಿಫಾರಂ ಬಾಡಿಗೆಗೆ ಪಡೆದು ಘಟಕ ಸ್ಥಾಪನೆ



ಇಂತಹ ನಕಲಿ ರಸಗೊಬ್ಬರ ಘಟಕಗಳು ಸಾಕಷ್ಟಿದ್ದು, ಬಡ ರೈತರು ವಂಚನೆಗೊಳಗಾಗುತ್ತಿದ್ದಾರೆ. ಕಡಿಮೆ ಬೆಲೆಯ ಆಮಿಷ ತೋರಿ ಅಮಾಯಕ ರೈತರಿಗೆ ನಕಲಿ ಗೊಬ್ಬರ ನೀಡಲಾಗುತ್ತಿದೆ. ಇದನ್ನು ಬಳಸಿದ ರೈತರು ಬೆಳೆಯನ್ನೂ ಕಳೆದುಕೊಂಡು ಕಂಗಾಲಾಗಿದ್ದಾರೆ. ಅಸಲಿ–ನಕಲಿ ರಸಗೊಬ್ಬರದ ಬಗ್ಗೆ ತಿಳಿಯದವರನ್ನು ವಂಚಿಸಲಾಗುತ್ತಿದೆ. ಯಾರಾದರೂ ದೂರು ನೀಡಿದರೆ ಮಾತ್ರ ದಾಳಿ ನಡೆಸುವ ಕೃಷಿ ಅಧಿಕಾರಿಗಳು ಕ್ಷೇತ್ರದಲ್ಲಿ ಪರಿಶೀಲನೆ ನಡೆಸಿ ನಕಲಿ ಗೊಬ್ಬರ ತಯಾರಿಕಾ ಘಟಕಗಳನ್ನು ಪತ್ತೆ ಹಚ್ಚಿ ಆರೋಪಿಗಳ ವಿರುದ್ಧ ಕ್ರಮ ಕೈಗೊಂಡರೆ ರೈತರು ನಷ್ಟ ಅನುಭವಿಸುವುದು ತಪ್ಪುತ್ತದೆ.

ಮೈಸೂರು, ಜು.24–ಮೈಸೂರು ತಾಲೂಕು ಮಂಡಕಳ್ಳಿ ಗ್ರಾಮದ ಹೊರ ವಲಯದಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕ ಪತ್ತೆಯಾಗಿದೆ.

ಮಂಡಕಳ್ಳಿ ಗ್ರಾಮದ ಹೊಂಬಾಳೆಗೌಡ ಎಂಬುವರಿಗೆ ಸೇರಿದ ಸರ್ವೆ ನಂ.5/2ರ ಜಮೀನಿನಲ್ಲಿ ನಿರ್ಮಿಸಿದ್ದ ಖಾಲಿ ಕೋಳಿ ಫಾರಂನಲ್ಲಿ ನಕಲಿ ರಸಗೊಬ್ಬರವನ್ನು ವ್ಯವಸ್ಥಿತವಾಗಿ ತಯಾರಿಸಿ, ಅಸಲಿ ರಸಗೊಬ್ಬರವೆಂಬಂತೆ ವಿವಿಧ ಕಂಪನಿಗಳ ಚೀಲಗಳಲ್ಲಿ ತುಂಬಿ ರೈತರಿಗೆ ಮಾರಾಟ ಮಾಡಲಾಗುತ್ತಿತ್ತು ಎಂದು ಹೇಳಲಾಗಿದೆ.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್ ಸಹಾಯಕ ನಿರ್ದೇಶಕಿ ಮಧುಲತಾ ಅವರು ಮೈಸೂರು ದಕ್ಷಿಣ ಠಾಣೆ ಪೊಲೀಸರ ಸಹಕಾರದೊಂದಿಗೆ ಈ ಘಟಕದ ಮೇಲೆ ಭಾನುವಾರ ಮಧ್ಯಾಹ್ನ ದಾಳಿ ನಡೆಸಿದರು. ಈ ವೇಳೆ ಘಟಕದಲ್ಲಿ ಮಾಲೀಕನಾಗಲೀ, ಕಾರ್ಮಿಕರಾಗಲೀ ಇರಲಿಲ್ಲ ಎಂದು ತಿಳಿದು ಬಂದಿದೆ.

ಅಲ್ಪ ಪ್ರಮಾಣದ ರಸಗೊಬ್ಬರದ ಜೊತೆ ಜೇಡಿ ಮಣ್ಣನ್ನು ಕಾಳಿನ ಮಾದರಿಯಲ್ಲಿ ತಯಾರಿಸಿ ಅದಕ್ಕೆ ರೆಡ್ ಆಕ್ಸೈಡ್ ಬಣ್ಣವನ್ನು ತುಂಬಿ ಮಿಕ್ಸರ್ ಮಿಷನ್‌ನಲ್ಲಿ ಅಸಲಿ ರಸಗೊಬ್ಬರದೊಂದಿಗೆ ಬೆರಸಿ ವಿವಿಧ ಕಂಪನಿಗಳ ಹೆಸರಿರುವ ಚೀಲಗಳಲ್ಲಿ ತುಂಬಿ ಅಸಲಿ ರಸಗೊಬ್ಬರ ಚೀಲ ಇರುವಂತೆಯೇ ಹೊಲೆಯಲಾಗುತ್ತಿತ್ತು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ತಿಳಿಸಿದ್ದಾರೆ.

ಈ ಘಟಕದಲ್ಲಿ ಅಸಲಿ ರಸಗೊಬ್ಬರ, ಜೇಡಿ ಮಣ್ಣು ತುಂಬಿರುವ ಚೀಲಗಳು, ಮಿಕ್ಸಿಂಗ್ ಯೂನಿಟ್, ತೂಕದ ಯಂತ್ರ ಹಾಗೂ ಹೊಲಿಗೆ ಯಂತ್ರ ಮಾತ್ರವಲ್ಲದೇ ಐಪಿಎಲ್ ಎಂಓಪಿ ಪೊಟ್ಯಾಸಿಯಂ, ಐಪಿಎಲ್ ಡಿಓಪಿ, ಸ್ಪಿಕ್ ಡಿಐಪಿ ಯೂರಿಯಾ ಚೀಲಗಳು ಕಂಡು ಬಂದಿದೆ. ಇವೆಲ್ಲದರ ಸಮೇತ ಕೋಳಿಫಾರಂ ಅನ್ನು ಸೀಜ್ ಮಾಡಿರುವ ಕೃಷಿ ಇಲಾಖೆ ಅಧಿಕಾರಿಗಳು ಮೈಸೂರು ದಕ್ಷಿಣ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಖಾಲಿ ಇದ್ದ ಈ ಕೋಳಿಫಾರಂ ಅನ್ನು ಮಹೇಶ್ ಎಂಬಾತ ಬಾಡಿಗೆಗೆ ಪಡೆದು ನಕಲಿ ರಸಗೊಬ್ಬರ ತಯಾರಿಕಾ ಘಟಕ ನಡೆಸುತ್ತಿದ್ದ ಎಂಬುದು ಪ್ರಾಥಮಿಕ ತನಿಖೆ ವೇಳೆ ದೃಢಪಟ್ಟಿದೆ. ಆತನ ಮೊಬೈಲ್ ನಂಬರ್ ಮತ್ತು ▶ 8ನೇ ಪುಟಕ್ಕೆ

ಮಹಿಷನಿಲ್ಲದ ಮೈಸೂರು ದಸರಾ ಅರ್ಥಹೀನ

'ಮಹಿಷ ಮಾಧ್ಯಮ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಭಿಮತ

ಮೈಸೂರು,ಜು.24(ಪಿಎಂ)– ಮಹಿಷನಿಲ್ಲದ ಮೈಸೂರು ದಸರಾ ಅರ್ಥಹೀನ. ನಮ್ಮ ಬಹುಜನರ ನೈಜ ಇತಿಹಾಸ ಹೊರತರಲು ಸಾಂಸ್ಕೃತಿಕ ಪ್ರತಿರೋಧ ಒಡ್ಡಬೇಕಿದ್ದು, ಆ ಪ್ರತಿರೋಧದ ಸಂಕೇತವೇ ಮಹಿಷ ಎಂದು ಕನ್ನಡ ಸಿನಿಮಾ ನಾಯಕ ನಟರೂ ಆದ ಸಾಮಾಜಿಕ ಹೋರಾಟಗಾರ ಚೇತನ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಅಶೋಕಪುರಂ ಅಭಿಮಾನಿಗಳ ಬಳಗ, ಮಹಿಷ ಮಂಡಲ ಅಂತಾರಾಷ್ಟ್ರೀಯ ಬುದ್ಧಿಸ್ಟ್ ಕಲ್ಚರಲ್ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಲೇಖಕ ಸಿದ್ದಸ್ವಾಮಿ ಅವರ 'ಮಹಿಷ ಮಾಧ್ಯಮ' ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.



ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮಹಿಷ ಮಾಧ್ಯಮ ಪುಸ್ತಕ ಬಿಡುಗಡೆ ಮಾಡಲಾಯಿತು.

ನಮ್ಮ ಬಹುಜನರ ನೈಜ ಇತಿಹಾಸ ಹೊರತರಲು ಸಾಂಸ್ಕೃತಿಕ ಪ್ರತಿರೋಧ ಅಗತ್ಯ. ಅಸಮಾನತೆ ಆರಂಭವಾದಾಗಿನಿಂದಲೇ ನಮ್ಮಲ್ಲಿ ಪ್ರತಿರೋಧದ ಕಿಚ್ಚು ಇದ್ದೇ ಇದೆ. ಪ್ರತಿರೋಧ ನಮ್ಮ ಬಹುಜನರ ಸಾಂಸ್ಕೃತಿಕ ಡಿಎನ್ಎಯಲ್ಲೇ ಇದೆ. ಆ ಪ್ರತಿರೋಧದ ಸಂಕೇತವೇ ಮಹಿಷ. ಮಹಿಷನಿಲ್ಲದ ಮೈಸೂರು ದಸರಾ ಅರ್ಥಹೀನ ಎಂದು ಹೇಳಿದರೆ ಸುಳ್ಳಲ್ಲ ಹೇಳಿದರು.

ಮಹಿಷ ಇಲ್ಲದೆ ಮೈಸೂರನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಬಾಬಾ ಸಾಹೇಬರು ಹೇಳಿದಂತೆ ಭಾರತದ ಇತಿಹಾಸ ಎನ್ನುವುದು, ಬ್ರಾಹ್ಮಣ್ಯ ಮತ್ತು ಬೌದ್ಧ ಧರ್ಮದ ನಡುವೆ ನಡೆದ ಘರ್ಷಣೆಯಾಗಿದೆ. ನಮ್ಮ ಬಹುಜನರ ಇತಿಹಾಸವನ್ನು ತಿರುಚುವ ಪ್ರಯತ್ನ ನಿರಂತರವಾಗಿ ನಡೆದಿದೆ. ಅದೇ ರೀತಿ ಮಹಿಷನ ನೈಜ ಇತಿಹಾಸವನ್ನೂ ಮರೆಮಾಚಲಾಗಿದೆ. ಇಂದಿಗೂ ಅತೀ ಬ್ರಾಹ್ಮಣ್ಯ ಎಂಬ ಕೋಮುವಾದ ನಮ್ಮ ಇತಿಹಾಸ ತಿರುಚುತ್ತಿದೆ ಎಂದು ದೂರಿದರು.

ಕಲೆ ಮತ್ತು ಸಾಂಸ್ಕೃತಿಕತೆಯನ್ನು ಮನರಂಜನೆಗೂ ಮೀರಿ ಪರಿವರ್ತನೆಗೆ ನಾವು ಬಳಸಬೇಕು. ಬುದ್ಧ, ಬಸವ, ಅಂಬೇಡ್ಕರ್, ಪೆರಿಯಾರ್, ಕುವೆಂಪು ಮೊದಲಾದ ಮಹನೀಯರ ಸಿದ್ಧಾಂತಗಳಲ್ಲಿ ಸತ್ಯ-ಸಮಾನತೆ ಇದೆ. ಬಲ, ಎಡ ಮತ್ತು ಮಧ್ಯ ಪಂಥಗಳ ಬದಲಿಗೆ ಸತ್ಯಪಂಥ ಪಸರಿಸಬೇಕಿದೆ. ಈ ನಿಟ್ಟಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯ. ಆದರೆ ಇಂದು ಅಭಿವ್ಯಕ್ತಿ ಸ್ವಾತಂತ್ರ್ಯ ಕಿತ್ತುಕೊಳ್ಳುವ ದೊಡ್ಡ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಸಾಂಕೇತಿಕವಾಗಿ ಸ್ಥಾನ ಕೊಟ್ಟರೇನು ಪ್ರಯೋಜನ?: ಇಂದು ಸಾಂಕೇತಿಕವಾಗಿ ಆದಿವಾಸಿ ಮಹಿಳೆಗೆ ರಾಷ್ಟ್ರಪತಿ ಸ್ಥಾನ ಕೊಟ್ಟಿರಬಹುದು. ಆದರೆ ನಿಜವಾಗಲೂ ನಮ್ಮ ಇಡೀ ಬಹುಜನ ಸಮಾಜಕ್ಕೆ ಸರಿಸಮನಾದ ಪಾಲು ದೊರೆಯಲು ಅವರು ಬಿಡುವುದಿಲ್ಲ. ಜನಜಾಗೃತಿ, ಸಮಾಜ ಸೇವೆ ಮತ್ತು ಹೋರಾಟದ ಮೂಲಕ ನಾವು ಮುಂದುವರೆಯಬೇಕು ಎಂದು ಚೇತನ್ ಹೇಳಿದರು.

ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಮಹಿಷ ರಾಕ್ಷಸ ಆಗಿದ್ದರೆ ಮೈಸೂರಿಗೆ ಆ ಹೆಸರು ಏಕೆ ಇಡುತ್ತಿದ್ದರು. ಆದ್ದರಿಂದ ಮಹಿಷ ಒಳ್ಳೆಯ ವ್ಯಕ್ತಿ. ಮಹಿಷ ಬೌದ್ಧನಾಗಿದ್ದ ಕಾರಣ ಬುದ್ಧನ ಚಿಂತನೆ ಒಪ್ಪದ ಜನ ಮಹಿಷನನ್ನು ರಾಕ್ಷಸ ಎಂದು ಕರೆದಿದ್ದಾರೆ. ರಾಮಾಯಣದಲ್ಲಿ ಬರುವ ಎಲ್ಲಾ ರಾಕ್ಷಸರೂ ಬೌದ್ಧರು. ಕುವೆಂಪು ಅವರು 1936ರಲ್ಲಿ 'ಕಾನೂರು ಹೆಗ್ಗಡತಿ' ಎಂಬ ಮಹಾ ಕಾದಂಬರಿ ಬರೆದಿದ್ದಾರೆ. ಬುದ್ಧ ಜಯಂತಿಯಲ್ಲಿ ಈ ಕಾದಂಬರಿ ಮುಕ್ತಾಯ ಕಾಣುತ್ತದೆ. 'ನಾನು ಹಿಂದೂ ಧರ್ಮ ಯಾವತ್ತೂ ಬಿಟ್ಟಿದ್ದೇನೆ' ಎಂದು ಕುವೆಂಪು ಅವರೇ ಹೇಳಿಕೊಂಡಿದ್ದಾರೆ. ಆದರೆ ಇದು ಅವರ ಅನುಯಾಯಿಗಳಿಗೆ ಅರ್ಥವಾಗಿಲ್ಲ ಎಂದು ಹೇಳಿದರು.

ಪುಸ್ತಕ ಕುರಿತು ಮಾತನಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿದ್ದಸ್ವಾಮಿ ಅವರು 600 ಪುಟಗಳ ಬೃಹತ್ ಗ್ರಂಥ ನೀಡಿದ್ದಾರೆ. ಯಾವುದೇ ಅಡ್ಡಿ ಆತಂಕಗಳಿಲ್ಲದೆ ಚೆನ್ನಾಗಿಯೇ ನಡೆದುಕೊಂಡು ಹೋಗುತ್ತಿದ್ದ ಮಹಿಷ ದಸರಾಗೆ ಇತ್ತೀಚಿನ ವರ್ಷಗಳಲ್ಲಿ ಅಡೆತಡೆಗಳು ಎದುರಾಯಿತು. 2015ರಿಂದ 2019ರವರೆಗೆ ಮಹಿಷ ದಸರಾ ಸುತ್ತಮುತ್ತ ನಡೆದ ವಿದ್ಯಮಾನಗಳ ಕುರಿತು ಕನ್ನಡ, ಇಂಗ್ಲಿಷ್ ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮಗಳ ವರದಿ ಆಧಾರದಲ್ಲಿ ಪುಸ್ತಕ ಸಿದ್ಧಪಡಿಸಿದ್ದಾರೆ. ಸುಮಾರು 495 ಅಧ್ಯಾಯಗಳು ಈ ಕೃತಿಯಲ್ಲಿವೆ ಎಂದು ತಿಳಿಸಿದರು.

ಖಾಸಗಿ ಸುದ್ದಿ ವಾಹಿನಿಯ ಕಾರ್ಯನಿರ್ವಾಹಕ ಸಂಪಾದಕ ಎ.ಎಸ್.ರಮಾಕಾಂತ್ ಪುಸ್ತಕ ಬಿಡುಗಡೆ ಮಾಡಿದರು. ಸಿದ್ಧಾರ್ಥನಗರದ ಅಷ್ಟಾಂಗ ಮಾರ್ಗ ಧ್ಯಾನ ಕೇಂದ್ರದ ಪೂಜ್ಯ ಭಂತೆ ಬೋಧಿದತ್ತ ಸಾನಿಧ್ಯ ವಹಿಸಿದ್ದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಿವೃತ್ತ ಕೆಎಎಸ್ ಅಧಿಕಾರಿ ಲಿಂಗಪ್ಪ, ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜ ಅರಸ್, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ ಅಹಿಂದ, ಲೇಖಕ ಸಿದ್ದಸ್ವಾಮಿ ಮತ್ತಿತರರು ಹಾಜರಿದ್ದರು.

> "ಮಹಿಷ ರಾಕ್ಷಸನಲ್ಲ ಎಂಬ ಬಗೆಗಿನ ಅಧ್ಯಯನ ನಾಡಿನ ಮೂಲೆ ಮೂಲೆಗೆ ತಲುಪಿರುವುದು ಕಡಿಮೆ. ಮಹಿಷನ ಇತಿಹಾಸ ಏನಿದೆ? ಸಂಶೋಧನೆ ಏನು ಹೇಳುತ್ತದೆ ಎಂಬುದನ್ನು ಅವಲೋಕನ ಮಾಡಲಿಕ್ಕೂ ಅವಕಾಶ ನೀಡದಿರುವುದು ಅಕ್ಷಮ್ಯ. ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಪುರಾಣವನ್ನು ನಂಬುವುದಾದರೆ ಇತಿಹಾಸವಿದೆ ಎಂದು ಸಾಕ್ಷ್ಯ ನೀಡಿದಾಗ ಕನಿಷ್ಠ ಪಕ್ಷ ಅವಲೋಕನವಾದರೂ ಆಗಬೇಕು. ಅದಕ್ಕೂ ಅವಕಾಶ ನೀಡದೇ ಇರುವುದು ಏಕೆ?
> **–ಎ.ಎಸ್.ರಮಾಕಾಂತ್, ಖಾಸಗಿ ಸುದ್ದಿ ವಾಹಿನಿಯ ಕಾರ್ಯನಿರ್ವಾಹಕ ಸಂಪಾದಕ**

> "'ಅಶೋಕಪುರಂ' ಎನ್ನುವ ಬದಲು 'ಅಶೋಕಪುರ' ಎಂದು ಕರೆಯುವುದೇ ಸೂಕ್ತ. ತಮಿಳಲ್ಲಿ 'ಅಂ' ಎನ್ನುವುದು ಸಾಧಾರಣ. ನಮ್ಮ ಮಹಾರಾಜರ ಕಾಲದಲ್ಲಿ ದಿವಾನರಾಗಿದ್ದವರು ತಮಿಳುನಾಡು ಮೂಲದವರು. ಹಾಗಾಗಿ ಅವರು ಮೈಸೂರಿನ ಕೆಲ ಬಡಾವಣೆಗಳಿಗೆ 'ಅಂ' ಸೇರ್ಪಡೆ ಮಾಡಿದರು. 'ಅಂ' ಎನ್ನುವುದನ್ನು ಬಿಡಬೇಕು. 'ಅಶೋಕಪುರಂ' ಎನ್ನುವುದನ್ನು 'ಅಶೋಕಪುರ' ಆಗಿ ತಿದ್ದುಪಡಿ ಮಾಡಲು ಪಾಲಿಕೆಗೆ ಮನವಿ ಸಲ್ಲಿಸಬೇಕು. ಅಲ್ಲದೆ, ಚಾಮುಂಡಿಬೆಟ್ಟದಲ್ಲಿರುವ ರಾಕ್ಷಸ ರೂಪದ ಪ್ರತಿಮೆಗೆ ಬದಲು ಸೌಮ್ಯ ಸ್ವರೂಪದ ಬೌದ್ಧ ಬಿಕ್ಕು ರೂಪದ ಮಹಿಷನ ಪ್ರತಿಮೆ ಪ್ರತಿಷ್ಠಾಪನೆಕ್ಕೆ ಹೋರಾಟ ಮಾಡಬೇಕಿದೆ.
> **–ಪ್ರೊ.ಕೆ.ಎಸ್.ಭಗವಾನ್**

ಸಿದ್ದರಾಮೋತ್ಸವಕ್ಕೆ ಮೈಸೂರು, ಚಾ.ನಗರದಿಂದ ಲಕ್ಷಕ್ಕೂ ಹೆಚ್ಚು ಮಂದಿ ತೆರಳಲು ನಿರ್ಧಾರ

ಮೈಸೂರಿನ ಕನಕ ಭವನದಲ್ಲಿ ಸಿದ್ದು ಅಭಿಮಾನಿಗಳ ಸಭೆ



ಮೈಸೂರು,ಜು.24(ಆರ್‌ಕೆಬಿ)–ದಾವಣಗೆರೆಯಲ್ಲಿ ಆ.3ರಂದು ನಡೆಯುವ 'ಸಿದ್ದರಾಮಯ್ಯ–75' ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಿನ ಸಿದ್ಧಾರ್ಥ ನಗರದ ಕನಕ ಭವನದಲ್ಲಿ ಭಾನುವಾರ ಸಿದ್ದರಾಮಯ್ಯ ಅಭಿಮಾನಿಗಳು ಸಭೆ ನಡೆಸಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಿಂದ ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲು ತೀರ್ಮಾನಿಸಿದರು.

ಎರಡೂ ಜಿಲ್ಲೆಗಳ 15 ವಿಧಾನಸಭಾ ಕ್ಷೇತ್ರಗಳಿಗೆ ತಲಾ 10 ಬಸ್ಸುಗಳ ವ್ಯವಸ್ಥೆ ಮಾಡಲಾಗುತ್ತದೆ. ಪ್ರತಿ ಗ್ರಾಮದಿಂದಲೂ ತಲಾ ಒಂದೊಂದು ಬಸ್‌ಗಳಲ್ಲಿ ಜನರು ದಾವಣಗೆರೆಗೆ ತೆರಳಲಿದ್ದಾರೆ. ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಅವರೇ 15 ಬಸ್‌ಗಳನ್ನು ಕಳುಹಿಸುವುದಾಗಿ ಭರವಸೆ ನೀಡಿದರು. ಮಾಜಿ ಶಾಸಕ ವಾಸು ಅವರ ಪುತ್ರ ಕವೀಶ್‌ಗೌಡ ಅವರು 10 ಬಸ್‌ಗಳನ್ನು ನಿಯೋಜಿಸುವುದಾಗಿ ಸಭೆಗೆ ತಿಳಿಸಿದರು. ಹೀಗಾಗಿ ಎರಡೂ ಜಿಲ್ಲೆಗಳಿಂದ 700 ಬಸ್‌ಗಳು ದಾವಣಗೆರೆಯತ್ತ ತೆರಳಲಿವೆ ಎಂದು ಸಭೆಗೆ ಮುಖಂಡರು ತಿಳಿಸಿದರು.

ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ರಾಮಚಂದ್ರಪ್ಪ, ರಾಮಕೃಷ್ಣ, ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡ ಜೆ.ಜೆ.ಆನಂದ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ, ಸವಿತಾ ಸಮಾಜದ ಎನ್.ಆರ್.ನಾಗೇಶ್, ಉಪ್ಪಾರ ಸಮಾಜದ ನಾಗೇಶ್ ಉಪ್ಪಾರ್, ಕೋಟೆ ಆನಂದ್, ಕೋಟೆ ಶಿವಪ್ಪ, ಜಿಪಂ ಮಾಜಿ ಸದಸ್ಯ ಅಮಿತ್ ದೇವರಹಟ್ಟಿ, ವಿದ್ಯಾ, ಚಲನಚಿತ್ರ ವಾಣಿಜ್ಯ ಮಂಡಳಿಯ ವರುಣ ಮಹೇಶ್, ಬಿಳಿಕೆರೆ ಸೋಮಣ್ಣ, ಕೆ.ಆರ್.ನಗರ ಕೋಳಿ ಪ್ರಕಾಶ್, ನಂಜನಗೂಡು ಕೆಂಪಣ್ಣ, ಪಾಲಿಕೆ ಸದಸ್ಯ ಜೆ.ಗೋಪಿ, ಕುಪ್ಯ ಭಾಗ್ಯಮ್ಮ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಎಂ.ಶಿವಣ್ಣ, ಚೌಹಳ್ಳಿ ಪುಟ್ಟಸ್ವಾಮಿ, ಡಾ.ಸಿ.ಡಿ.ಪರಶುರಾಮ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಕಮಲ ಇನ್ನಿತರರು ಉಪಸ್ಥಿತರಿದ್ದರು.

ವನಮಹೋತ್ಸವಕ್ಕೆ ಶಾಸಕ ಜಿಟಿಡಿ ಚಾಲನೆ




ಮೈಸೂರು, ಜು.24(ಎಂಕೆ)– ಪ್ರತಿಯೊಬ್ಬರು ಗಿಡಗಳನ್ನು ನೆಡುವ ಜೊತೆಗೆ ಅವುಗಳನ್ನು ಉಳಿಸಿ ಬೆಳೆಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಕರೆ ನೀಡಿದರು.

ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಇಐ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವತಿಯಿಂದ 'ನಾಳಿನ ಹಸಿರಿಗೆ ಸಸಿಗಳೇ ಉಸಿರು' ಎಂಬ ಶೀರ್ಷಿಕೆಯಡಿ ಆಯೋಜಿಸಿದ್ದ 'ವನಮಹೋತ್ಸವ' ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಹೂಟಗಳ್ಳಿಯಿಂದ ಬಸ್ತಿಪುರದವರೆಗಿನ ರಸ್ತೆ ವಿಭಜಕದಲ್ಲಿ ಅಲಂಕಾರಿಕ ಹೂವಿನ ಗಿಡಗಳನ್ನು ನೆಟ್ಟು ಬೆಳೆಸಲು ಕೈಗೊಂಡಿರುವ ಕಾರ್ಯ ಶ್ಲಾಘನೀಯ ಎಂದರು.

ಪರಿಸರದಿಂದ ನಮಗೆ ಶುದ್ಧ ಗಾಳಿ ದೊರೆಯುತ್ತದೆ. ಪರಿಸರದಲ್ಲಿ ಕಾರ್ಬನ್ ಡೈಆಕ್ಸೈಡ್ ಅಂಶ ಹೆಚ್ಚಾದರೆ ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾಗಲಿದೆ. ಕಳೆದ ವರ್ಷ ವಿಶ್ವದ ತಾಪಮಾನ ಶೇ.1ರಷ್ಟು ಹೆಚ್ಚಾಗಿದ್ದು, ಹಿಮಬಂಡೆಗಳು ಕರಗುತ್ತಿವೆ. ಇದರಿಂದ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾಗುವುದನ್ನು ತಡೆಗಟ್ಟಲು ಅರಣ್ಯೀಕರಣ ಬಹಳ ಮುಖ್ಯ ಎಂದರು. ಸಮಾರಂಭದಲ್ಲಿ ಕಾಲೇಜಿನ ಖಜಾಂಚಿ ದತ್ತಕುಮಾರ್, ಬಿಇಎಂಎಲ್‌ನ ಕಾರ್ಯನಿರ್ವಾಹಕ ರಾಧಾಕೃಷ್ಣ, ಪ್ರಾಂಶುಪಾಲರಾದ ಅರ್ಚನ, ಡಾ.ಲೋಕೇಶ್, ಶ್ರೀನಿಧಿ, ಪ್ರಸಾದ್, ಸಂದೀಪ್, ಹರ್ಷಿತ, ಸತೀಶ್, ನಂಜುಂಡೇಗೌಡ ಸೇರಿದಂತೆ ಇತರರಿದ್ದರು.

ನಾಳೆ ಶಿವಶರಣ ಹಡಪದ ಅಪ್ಪಣ್ಣ ಜಯಂತಿ



ಮೈಸೂರು, ಜು.24(ಎಂಟಿವೈ)–ಮೈಸೂರಿನ ಕಲಾಮಂದಿರದಲ್ಲಿ ಜು.26ರ ಮಧ್ಯಾಹ್ನ 12ಕ್ಕೆ ಜಿಲ್ಲಾಡಳಿತ ಹಾಗೂ ರಾಜ್ಯ ಸವಿತಾ ಸಮಾಜ ಸೇರಿದಂತೆ ಇನ್ನಿತರ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಂಚೂರ ಸವಿತಾ ಮಹಾಸಂಸ್ಥಾನ ಪೀಠದ ಶ್ರೀ ಸವಿತಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 10 ಗಂಟೆಗೆ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿಯಿಂದ ಹಡಪದ ಅಪ್ಪಣ್ಣ ಭಾವಚಿತ್ರದ ಮೆರವಣಿಗೆ ಆಯೋಜಿಸಲಾಗಿದ್ದು, ನಾದಸ್ವರ, ಡೋಲು, ಸ್ಯಾಕ್ಸೋಫೋನ್, ಡೊಳ್ಳು ಕುಣಿತ, ವೀರಗಾಸೆ ಸೇರಿದಂತೆ ಇನ್ನಿತರ ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಸಾಗಲಿವೆ. ಕಲಾಮಂದಿರದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಸಮುದಾಯದ 100ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತೋತ್ಸವ ಸಮಿತಿ ಪದಾಧಿಕಾರಿಗಳಾದ ಹರೀಶ್‌ರೆಡ್ಡಿ, ಲೋಕೇಶ್ ನಾಗಪ್ಪ, ಮಹೇಶ್, ಶ್ರೀನಿವಾಸ್, ರಾಮಣ್ಣ, ಇದ್ದರು.

ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜಿನ ರಿಯಾಗೆ ಸ್ಕೇಟರ್‌ನಲ್ಲಿ ಮೂರು ಚಿನ್ನದ ಪದಕ



ಮೈಸೂರು, ಜು. 24– ರಾಜ್ಯದ ಯುವ ಸ್ಕೇಟರ್ ಕು.ರಿಯಾ ಅಚ್ಚಯ್ಯ ಇತ್ತೀಚೆಗೆ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ನಡೆದ ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯಗಳ ರೋಲರ್ ಸ್ಕೇಟರ್ ಚಾಂಪಿಯನ್‌ಶಿಪ್ 2021–22 ಕ್ರೀಡಾಕೂಟದಲ್ಲಿ 3 ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡು ಮೊದಲ ಸ್ಥಾನ ಗಳಿಸಿದ್ದಾರೆ. ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ 6ನೇ ಸೆಮಿಸ್ಟರ್ ಇಂಜಿನಿಯರಿಂಗ್ ಓದುತ್ತಿರುವ ರಿಯಾ, ಈಗಾಗಲೇ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿಯೂ ಹತ್ತಾರು ಪದಕಗಳನ್ನು ಹಾಗೂ ಕಳೆದ ಋತುವಿನ ದಕ್ಷಿಣ ಕೊರಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿ ಕಂಚಿನ ಪದಕ ಗೆದ್ದಿದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು "ವರ್ಷದ ಅತ್ಯುತ್ತಮ ಮಹಿಳಾ ಕ್ರೀಡಾಪಟು" ಎಂದು ಪ್ರಶಸ್ತಿ ಪ್ರದಾನ ಮಾಡಿದೆ ಎಂದು ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಬಿ.ಸದಾಶಿವೇಗೌಡ ತಮ್ಮ ವಿದ್ಯಾರ್ಥಿನಿಯ ಸಾಧನೆ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ

ಮೈಸೂರು, ಜು. 24– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜು. 25ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9741513392, ದೂ.0821–2548231, 2548433 ಸಂಪರ್ಕಿಸಬಹುದು.

ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ: ಜು.25ರಿಂದ ಆ.10ರವರೆಗೆ ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ ನಡೆಯಲಿದೆ. ಮೊ.9886485005 ಸಂಪರ್ಕಿಸಬಹುದು.

ರಾಜೀವ್ ಅವರನ್ನೇ ಮತ್ತೆ ಮುಡಾ ಅಧ್ಯಕ್ಷರಾಗಿ ಮಾಡಿ

● ಸರ್ಕಾರಕ್ಕೆ ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮನವಿ ● ಒಂದು ವೇಳೆ ಸಾಧ್ಯವಾಗದೇ ಇದ್ದರೆ ಅವರ ಕಾರ್ಯ ಮುಂದುವರೆಸಲು ಕೋರಿಕೆ



ಬಿ.ಎಲ್.ಭೈರಪ್ಪ



ಹೆಚ್.ವಿ.ರಾಜೀವ್

ಮೈಸೂರು,ಜು.24(ಪಿಎಂ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಬಿಜೆಪಿ ಮುಖಂಡ ಹೆಚ್.ವಿ.ರಾಜೀವ್, ನಗರದ ಅಭಿವೃದ್ಧಿಗೆ ಹಲವು ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ. ಹಾಗಾಗಿ ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀವ್ ಅವರನ್ನೇ ಮತ್ತೆ ನಾಮನಿರ್ದೇಶನ ಮಾಡಬೇಕು ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಸರ್ಕಾರವನ್ನು ಕೋರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 12 ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರ ನಾಮನಿರ್ದೇಶನವನ್ನು ರಾಜ್ಯ ಸರ್ಕಾರ ಇತ್ತೀಚೆಗೆ ರದ್ದುಪಡಿಸಿದೆ. ಇದರಲ್ಲಿ ಮೈಸೂರು ಮುಡಾ ಅಧ್ಯಕ್ಷ ಸ್ಥಾನವೂ ಸೇರಿದೆ. ಮುಡಾ ಅಧ್ಯಕ್ಷರಾಗಿದ್ದ ಹೆಚ್.ವಿ.ರಾಜೀವ್ ಅನೇಕ ರಚನಾತ್ಮಕ ಕಾರ್ಯ ಮಾಡಿದ್ದಾರೆ. ಆ ಮೂಲಕ ಹತ್ತು ಹಲವು ಸುಧಾರಣೆ ಅವರಿಂದ ಸಾಧ್ಯವಾಗಿದೆ ಎಂದರು.

ಕಟ್ಟಡಕ್ಕೆ ಎನ್‌ಓಸಿ, ಖಾತೆ ಮಾಡಿಕೊಡುವ ಪದ್ಧತಿ ಸರಳೀಕರಣ, ನಕ್ಷೆ ಮಂಜೂರಾತಿಗೆ ಏಕಗವಾಕ್ಷಿ ವ್ಯವಸ್ಥೆಯಂತಹ ಸುಧಾರಣೆ ತಂದಿದ್ದಾರೆ. ರಿಂಗ್ ರಸ್ತೆ ಭಾಗದ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸರ್ಕಾರದಿಂದ 150 ಕೋಟಿ ರೂ. ಅನುದಾನಕ್ಕೆ ಮಂಜೂರಾತಿ ಸಿಕ್ಕಿದ್ದು, ಈ ಪೈಕಿ 60 ಕೋಟಿ ರೂ. ಮಂಜೂರಾಗಿ ಕಾರ್ಯಾದೇಶವನ್ನೂ ನೀಡಲಾಗಿದೆ. ಮುಡಾದಲ್ಲಿ 300 ಕೋಟಿ ರೂ. ಮೊತ್ತದ ಕಾಮಗಾರಿಗಳು ನನೆಗುದಿಗೆ ಬಿದ್ದಿದ್ದವು. ಅವುಗಳಿಗೆ ಸರ್ಕಾರದ ಅನುಮೋದನೆ ಪಡೆದಿದ್ದು, ಕೆಲಸಗಳು ನಡೆಯುತ್ತಿವೆ. ಇವು ರಾಜೀವ್ ಅವರ ಮುತುವರ್ಜಿಯಿಂದ ಆದ ಕಾರ್ಯಗಳು ಎಂದು ಹೇಳಿದರು.

ಒಂದು ವೇಳೆ ರಾಜೀವ್ ಅವರಿಗೆ ಮತ್ತೆ ಮುಡಾ ಅಧ್ಯಕ್ಷ ಸ್ಥಾನ ಕಲ್ಪಿಸದೇ ಇದ್ದರೆ, ಮುಂದೆ ಮುಡಾ ಅಧ್ಯಕ್ಷರಾಗುವವರು ರಾಜೀವ್ ಅವರ ಕಾರ್ಯಗಳನ್ನೇ ಮುಂದುವರಿಸಬೇಕೆಂದು ಮನವಿ ಮಾಡಿದರು. ಮೈಸೂರಿನ ಜೆಪಿ ನಗರದ ಮುಖಂಡರಾದ ನಾಗೇಶ್, ವಾಸು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶ್ರೀ ಕೃಷ್ಣ ಜಯಂತಿ ಉತ್ಸವ ಸಂಗೀತ ಸ್ಪರ್ಧೆಗಳು

ಮೈಸೂರು,ಜು.24–ಶ್ರೀ ಕೃಷ್ಣ ಜಯಂತಿ ಅಂಗವಾಗಿ ಆ.7ರಂದು ಬೆಳಗ್ಗೆ 9 ಗಂಟೆಗೆ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ವಿದ್ವತ್ ಅಥವಾ ಅದಕ್ಕೆ ಸಮಾನವಾದ ಸಂಗೀತ ಪರೀಕ್ಷೆಯನ್ನು ಮುಗಿಸದಿರುವ ಕರ್ನಾಟಕ ರಾಜ್ಯದ ಹವ್ಯಾಸಿ ಕಲಾವಿದರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕರ್ನಾಟಕ ಶಾಸ್ತ್ರೀಯ ಸಂಗೀತ, ಕರ್ನಾಟಕ ವಾದ್ಯ ಸಂಗೀತ, ದಾಸರ ರಚನೆಗಳು, ಲಯವಾದ್ಯ, ಪ್ರಬಂಧ, ವಚನ ಗಯನ, ಮಂಕುತಿಮ್ಮನ ಕಗ್ಗ ಹಾಗೂ ಸುಗಮ ಸಂಗೀತ ಗಾಯನ ಮತ್ತು ಸಂಗೀತಕ್ಕೆ ಸಂಬಂಧಿಸಿದಂತೆ ರಸಪ್ರಶ್ನೆ ಈ ವಿಭಾಗಗಳಲ್ಲಿ ಕಿರಿಯರ (6–10, 11–16), ಹಿರಿಯರ ವಿಭಾಗದಲ್ಲಿ (17–25, 26–40, 41ರ ಮೇಲ್ಪಟ್ಟ) ವರ್ಗಗಳಲ್ಲಿ ಸ್ಪರ್ಧೆಗಳು ನಡೆಯಲಿದೆ. ಅಧಿಕೃತ ಅರ್ಜಿ ನಮೂನೆಯನ್ನು ಗಾನಭಾರತಿಯ ಕಚೇರಿಯಲ್ಲಿ ಸಂಜೆ 5–7 ಗಂಟೆಯವರೆಗೆ ಜು.26ರಿಂದ ಆ. 2ರವರೆಗೆ ಪಡೆದುಕೊಳ್ಳಬಹುದು. ಮಾಹಿತಿಗೆ ದೂ. 0821–2560313 ಸಂಪರ್ಕಿಸಬಹುದು.

ಗೃಹಿಣಿ ಮಾಂಗಲ್ಯ ಸರ ಕಳವು

ಮೈಸೂರು, ಜು.24– ದೇವಸ್ಥಾನಕ್ಕೆ ತೆರಳುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಅಪಹರಿಸಿದ ಘಟನೆ ಮೈಸೂರಿನ ತಿಲಕ್‌ನಗರದಿಂದ ವರದಿಯಾಗಿದೆ. ಅಲ್ಲಿನ 4ನೇ ಮುಖ್ಯ ರಸ್ತೆ ನಿವಾಸಿ ಶ್ರೀಮತಿ ಗೌರಮ್ಮ (52) ಜುಲೈ 20ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ದೇವಸ್ಥಾನಕ್ಕೆ ಹೋಗಲು 3ನೇ ಮುಖ್ಯ ರಸ್ತೆಯಲ್ಲಿ ತೆರಳುತ್ತಿದ್ದಾಗ ಸ್ಕೂಟರ್‌ನಲ್ಲಿ ಬಂದ ಇಬ್ಬರು ಖದೀಮರು ಅವರ 30 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ನಡೆಸುತ್ತಿದ್ದಾರೆ.

ಕ್ರೀಡೆಯಲ್ಲಿ ಆತ್ಮವಿಶ್ವಾಸ, ದೇಶಾಭಿಮಾನ ಹೆಚ್ಚಿರುತ್ತದೆ

ಮೈಸೂರು, ಜು.24(ಎಂಕೆ)– ಕ್ರೀಡೆ ಕ್ರೀಡಾಪಟುಗಳಲ್ಲಿ ಅತ್ಮವಿಶ್ವಾಸದ ಜೊತೆಗೆ ದೇಶಾಭಿಮಾನ ಹೆಚ್ಚಿಸುತ್ತದೆ. ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆಗಳು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಲೇಖಕ ರಾಜದೀಪ್ ಸರ್ದೇಸಾಯಿ ಹಾಗೂ ಖ್ಯಾತ ನಿರೂಪಕ ಚಾರು ಶರ್ಮ ಅಭಿಪ್ರಾಯಪಟ್ಟರು.

'6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಕ್ರಿಕೆಟ್ ಕುರಿತು ನಡೆದ ಸಂವಾದದಲ್ಲಿ ಭಾರತೀಯ ಕ್ರಿಕೆಟ್ ತಂಡದಲ್ಲಿ ಗ್ರಾಮೀಣ ಪ್ರತಿಭೆಗಳು ಸಾಕಷ್ಟು ಹೆಸರು ಗಳಿಸಿದ್ದಾರೆ. ಹಣ ಇದ್ದವರಷ್ಟೇ ಅಲ್ಲ ಇಲ್ಲದವರಿಗೂ ಕ್ರಿಕೆಟ್‌ನಲ್ಲಿ ಅವಕಾಶ ದೊರೆತಿದೆ. ಇದರ ಜೊತೆಗೆ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಲೇಖಕ ರಾಜದೀಪ್ ಸರ್ದೇಸಾಯಿ ಮಾತನಾಡಿ, ರಾಜಕಾರಣಿಗಳ ಮಕ್ಕಳು ಸುಲಭವಾಗಿ ರಾಜಕಾರಣಿಗಳಾಗುತ್ತಾರೆ. ಇದಕ್ಕೆ ದೇಶದ ರಾಜಕೀಯದಲ್ಲಿ ಸಾಕಷ್ಟು ಇತಿಹಾಸವಿದೆ. ಆದರೆ ಕ್ರಿಕೆಟರ್ ಮಕ್ಕಳು ಕ್ರಿಕೆಟರ್ ಅಥವಾ ಇನ್ನಿತರೆ ಕ್ರೀಡೆಯಲ್ಲಿದ್ದವರ ಮಕ್ಕಳು ಕ್ರೀಡಾ ಪಟುಗಳಾಗುವುದು ವಿರಳ. ಕ್ರೀಡಾಪಟುಗಳಲ್ಲಿ ಸಾಮಾನ್ಯರಿಗಿಂತ ದೇಶಪ್ರೇಮ ಹೆಚ್ಚಾಗಿರುವುದಕ್ಕೆ ಕ್ರೀಡೆಯಲ್ಲಿರುವ ಶಿಸ್ತು ಕಾರಣ ಎಂದರು.



'6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಗ್ರಾಮ್ಮೀ ಅವಾರ್ಡ್ ವಿಜೇತ ರಿಕ್ಕಿ ಕೇಜ್ ಅವರ ಸುಗಮ ಸಂಗೀತ.

ನಾಯಕನ ಜವಾಬ್ದಾರಿ: ಸಾಮಾನ್ಯವಾಗಿ ಕ್ರಿಕೆಟ್ ಪಂದ್ಯ ಸೋತರು ಜನರು ನಾಯಕನನ್ನೇ ಹೆಚ್ಚು ತೆಗಳುತ್ತಾರೆ. ಕ್ಯಾಪ್ಟನ್ ಸರಿಯಿಲ್ಲ ಎನ್ನುತ್ತಾರೆ. ಇದಕ್ಕೆ ಸಚಿನ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಸಚಿನ್ ಕ್ರಿಕೆಟ್ ತಂಡದ ನಾಯಕರಾಗಿದ್ದ ವೇಳೆ ಇತರೆ ಆಟಗಾರರು ಉತ್ತಮ ಪ್ರದರ್ಶನ ನೀಡಲಿಲ್ಲ. ನಂತರ ಕ್ಯಾಪ್ಟನ್ ಬದಲಾದ ಬಳಿಕ ಉತ್ತಮ ಪ್ರದರ್ಶನ ನೀಡಿದರು. ಈ ವೇಳೆ ಜನರು ಹೊಗಳುವುದು–ತೆಗಳುವುದು ತಂಡದ ನಾಯಕರನ್ನು ಎಂದ ಅವರು, ನಾಯಕನ ಜವಾಬ್ದಾರಿ ಹೆಚ್ಚಾಗಿರುತ್ತದೆ ಎಂದು ಹೇಳಿದರು.

ಸಮಾನತೆ: ಕ್ರಿಕೆಟ್ ಪ್ರಾರಂಭದ ದಿನಗಳಲ್ಲಿಯೂ ಸಮಾಜದಲ್ಲಿರುವಂತೆ ಜಾತಿ ವ್ಯವಸ್ಥೆ ಕಾಣುತ್ತಿತ್ತು. ಬದಲಾದಂತೆ ಇಂದು ಜಾತಿಗಿಂತ ಪ್ರತಿಭೆ ಮುಖ್ಯವಾಗಿದೆ. ಉತ್ತಮ ಕೌಶಲ್ಯತೆ ಇದ್ದವರಿಗೆ ಆದ್ಯತೆ ನೀಡಲಾಗುತ್ತಿದೆ. ಅದರಂತೆ ಸಾಕಷ್ಟು ಕಷ್ಟಗಳನ್ನು ಅನುಭವಿಸಿ ಕ್ರಿಕೆಟ್‌ಗೆ ಆಯ್ಕೆಯಾದವರು ಇದ್ದಾರೆ. ಅದಕ್ಕೆ ಎಂ.ಎಸ್.ಧೋನಿ, ವಿರಾಟ್ ಕೊಹ್ಲಿ ಇನ್ನಿತರರು ಪ್ರಮುಖ ಉದಾಹರಣೆಯಾಗಿದ್ದಾರೆ. ಹಾಗೆಯೇ ರೇಡಿಯೋ ನಂತರ ಟಿವಿ ಹೆಚ್ಚು ಪರಿಣಾಮಕಾರಿಯಾಗಿದ್ದು, ಯುವಕರು ಕ್ರೀಡೆಗಳನ್ನು ನೋಡುವುದರಿಂದ ಹೆಚ್ಚು ಪ್ರಭಾವಿತರಾಗುತ್ತಾರೆ ಎಂದರು.

ಕಬಡ್ಡಿ ಪವರ್‌ಫುಲ್ ಆಟ: ಕ್ರಿಕೆಟ್ ಬಳಿಕ ಕಬಡ್ಡಿ ನಿರೂಪಕನಾದ ಬಗ್ಗೆ ತಿಳಿಸಿದ ಖ್ಯಾತ ನಿರೂಪಕ ಚಾರು ಶರ್ಮ, ಕಬಡ್ಡಿ ನಿಜಕ್ಕೂ ಪವರ್‌ಫುಲ್ ಆಟ. ಕಬಡ್ಡಿ ನಿರೂಪಕನಾಗುವ ಮುನ್ನ ಕಬಡ್ಡಿ ಆಟ ಗಮನಿಸುವುದು, ಬೇರೆಯವರಿಂದ ಮಾಹಿತಿ ಸಂಗ್ರಹಿಸುವ ಕೆಲಸ ಮಾಡಿದ್ದೆ ಎಂದರು.

'6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಗ್ರಾಮ್ಮೀ ಅವಾರ್ಡ್ ವಿಜೇತ ರಿಕ್ಕಿ ಕೇಜ್ ಅವರ ಸುಗಮ ಸಂಗೀತ ಕಾರ್ಯಕ್ರಮ ಎಲ್ಲರ ಮನತಣಿಸಿತು. ಇದಕ್ಕೂ ಮುನ್ನ ಅಭಿಜ್ಞಾ ಹೆಗಡೆ ತಂಡದಿಂದ 'ಹರಿಣಾಬಿಸರಣ' ಯಕ್ಷಗಾನ ಪ್ರದರ್ಶನವಾಯಿತು.

ಉಚಿತ ಕೌಶಲ್ಯ ತರಬೇತಿ

ಮೈಸೂರು,ಜು.24–ಪರಿವರ್ತನ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ನಗರ ಹಾಗೂ ಗ್ರಾಮೀಣ ಭಾಗದ ಯುವಕ, ಯುವತಿಯರಿಗಾಗಿ ಉಚಿತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಜುಲೈ 28ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಆಸಕ್ತ ಅಭ್ಯರ್ಥಿಗಳು ಸೇವಿಂಗ್ ಮಿಷನ್ ಆಪರೇಟರ್, ಟೈಲರಿಂಗ್ ತರಬೇತಿ, ಹ್ಯಾಂಡ್ ಎಂಬ್ರಾಯಿಡರಿ ತರಬೇತಿ, ಸ್ಪೋಕನ್ ಇಂಗ್ಲೀಷ್ ತರಬೇತಿ, ಉಚಿತ ಕಂಪ್ಯೂಟರ್ ತರಬೇತಿ, ಡೊಮೆಸ್ಟಿಕ್ ಡೇಟಾ ಎಂಟ್ರಿ ಆಪರೇಟರ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು. ಆಸಕ್ತರು ಆಧಾರ್ ಕಾರ್ಡ್ ಪ್ರತಿ, 7ನೇ ತರಗತಿ ಅಥವಾ ಎಸ್‌ಎಸ್‌ಎಲ್‌ಸಿ, ಪಿಯುಸಿ ಯಾವುದೇ ಪದವಿ ತೇರ್ಗಡೆ ಹೊಂದಿರಬೇಕು. ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ ಹಾಗೂ ಇತ್ತೀಚಿನ 4 ಭಾವಚಿತ್ರವನ್ನು ಲಗತ್ತಿಸ ಬೇಕು. ಮಾಹಿತಿಗಾಗಿ ಮೊ.ಸಂ: 9964487523, 7259232055 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.07.2022 ಸೋಮವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ರೋಹಿಣಿ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಅವರಿಂದ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಸಿಷ್ಟ ಕುರಿತು ಪ್ರವಚನ, ಬೆಳಗ್ಗೆ 8.00 ಗಂಟೆಗೆ, ವಿಶೇಷ ಕಾರ್ಯಕ್ರಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ, ನಂಜನಗೂಡು ರಸ್ತೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ಪತ್ರಕರ್ತರ ಕ್ರೀಡಾಕೂಟ, ಷಟಲ್ ಬ್ಯಾಡ್ಮಿಂಟನ್ ಹಾಗೂ ಕ್ರಿಕೆಟ್ ಪಂದ್ಯಾವಳಿ, ಚಾಲನೆ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಜಿ.ಟಿ.ದಿನೇಶ್‌ಕುಮಾರ್, ಬೆಳಗ್ಗೆ 8 ಗಂಟೆಗೆ, ಸಮಾರೋಪ ಸಮಾರಂಭ, ಮುಖ್ಯ ಅತಿಥಿ: ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸಂಜೆ 4 ಗಂಟೆಗೆ, ಸ್ಥಳ: ಸ್ಪೋರ್ಟ್ಸ್ ಪೆವಿಲಿಯನ್, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿವಿ.

■ **ಕಡಾಂಬಿ ಪದ್ಮ ಮೆಮೋರಿಯಲ್ ಟ್ರಸ್ಟ್:** ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಪ್ರವಚನ, ದೇವರನಾಮಗಳು ಸಂಜೆ 6ರಿಂದ 8ರವರೆಗೆ, ಡಾ. ಸುಷ್ಮಾ ಅರುಣ್‌ರಿಂದ ಪ್ರವಚನ, ಸಂಜೆ 6.30ರಿಂದ 8 ರವರೆಗೆ, ಸ್ಥಳ: ಗಣಪತಿ ದೇವಸ್ಥಾನ 'ಐ' ಬ್ಲಾಕ್, ರಾಮಕೃಷ್ಣನಗರ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಶ್ರೀ ನಟರಾಜ ಮಹಿಳಾ ಪದವಿ ಪೂರ್ವ ಕಾಲೇಜು, ಕನ್ನಡ ಸಾಹಿತ್ಯ ಕಲಾ ಕೂಟ, ಮೈಸೂರು ಆರ್ಟ್ ಗ್ಯಾಲರಿ :** ಹಿರಿಯ ಕಲಾವಿದರು, ಲೇಖಕರು ಆದ ಎಲ್.ಶಿವಲಿಂಗಪ್ಪ ರಚಿಸಿರುವ ಅರಮನೆ ದೃಶ್ಯ ಕಲೆ ಮತ್ತು ಕಲಾವಿದರು ಹಾಗೂ ಕನ್ನಡ ನಾಡಿನ ವಚನಕಾರರು ಸಚಿತ್ರ ಕಥಾಮಾಲಿಕೆ–1 ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಶ್ರೀ ಹೊಸಮಠದ ಅಧ್ಯಕ್ಷರಾದ ಶ್ರೀ ಚಿದಾನಂದ ಮಹಾಸ್ವಾಮಿಗಳು, ಕೃತಿಗಳ ಬಿಡುಗಡೆ: ರಾಜವಂಶಸ್ಥರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶಂಕರ ಮಠ ರಸ್ತೆ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ– ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಶಾಂತಲಾ ವಟ್ಟಂ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಚಿತ್ರಗೀತೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 9.45 ವಚನಗಳಲ್ಲಿ ಸ್ತ್ರೀ ಸಂವೇದನೆ, ಮಾಯೆ, ಮೌಲ್ಯಪ್ರಜ್ಞೆ ಈ ಕುರಿತು ಡಾ. ಸರ್ವಮಂಗಳ ಸಕ್ರಿ ಅವರಿಂದ ಭಾಷಣ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್. ಸುಬ್ರಹ್ಮಣ್ಯ, ಭಾಗವಹಿಸುವವರು ರಂಗಕರ್ಮಿ ಗುರುರಾಜ ಮಾರ್ಪಳ್ಳಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ಭಕ್ತಿಗೀತೆಗಳು– ಶಿವಾನಂದ ಪಾಟೀಲ್, ಪದ್ಮ ಅಡಿಗ, 12.45 ನಮ್ಮ ಆರೋಗ್ಯ: ಇನ್ಟೆಕನ್ಸಿವ್ ಕೇರ್ ಅಂಡ್ ಗೋಲ್ಡನ್ ಅವರ್ ಕುರಿತು, ಡಾ. ಸಂತೋಶ್ ಎಂ.ಓ. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ಹೆಚ್.ಕೆ. ನಾರಾಯಣ, 3.00 ಕೆ.ಎಸ್. ಹೇರಂಬ ಮತ್ತು ಕೆ.ಎಸ್. ಹೇಮಂತ, ಯುಗಳ ವೇಣುವಾದನ, 4.00 ಮಹಿಳಾರಂಗ– 'ಡಾಕ್ಟರ್ ಸಮಯ' ಭಾಗವಹಿಸುವವರು– ಡಾ. ವೀಣಾ ಕೆ., 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ.

ಸಂಜೆ: 6.50 ಕೃಷಿರಂಗ: ಇತ್ತೀಚೆಗೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಭಾರತದ ರಾಜ್ಯಗಳ ಕೃಷಿ ಹಾಗೂ ತೋಟಗಾರಿಕಾ ಚಿವರ ರಾಷ್ಟ್ರೀಯ ಸಮ್ಮೇಳನದ ಬಾನುಲಿ ವರದಿ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ.

ಮೈಸೂರು ಸಾಹಿತ್ಯ ಸಂಭ್ರಮದ 6ನೇ ಆವೃತ್ತಿ

1983ರ ವಿಶ್ವಕಪ್ ಗೆಲುವಿನ ನೆನಪುಗಳನ್ನು ಮೆಲುಕು ಹಾಕಿದ ಕ್ರಿಕೆಟ್ ದಿಗ್ಗಜ ಕೆ.ಶ್ರೀಕಾಂತ್



ಮೈಸೂರು, ಜು.24 (ಆರ್‌ಕೆಬಿ)– ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನ ದರ್ಬಾರ್ ಸಭಾಂಗಣದಲ್ಲಿ ಆಯೋಜಿಸಿದ್ದ 6ನೇ 'ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಭಾರತದ ಕ್ರಿಕೆಟ್ ದಿಗ್ಗಜ ಕೃಷ್ಣಮಾಚಾರಿ ಶ್ರೀಕಾಂತ್ ಅವರು '1983ರ ವಿಶ್ವಕಪ್ ವಿಜಯದಿಂದ ಜೀವನದ ಪಾಠ' ಕುರಿತು ಒಂದೂವರೆ ಗಂಟೆಗಳ ಕಾಲ ಆಕರ್ಷಕ ರೀತಿಯಲ್ಲಿ ವಿವರಿಸುವ ಮೂಲಕ ಪ್ರೇಕ್ಷಕರ ಮನ ಗೆದ್ದರು.

ಎರಡು ದಿನಗಳ ಈ ಸಾಹಿತ್ಯ ಸಂಭ್ರಮದಲ್ಲಿ ಕ್ರಿಕೆಟಿಗ ಕೆ.ಶ್ರೀಕಾಂತ್ ಅವರು 1983ರ ವಿಶ್ವಕಪ್ ವಿಜಯವು ಭಾರತೀಯ ಕ್ರಿಕೆಟ್‌ನಲ್ಲಿ ಮಹತ್ವದ ಫಲಿತಾಂಶವಾಗಿತ್ತು. ಆ ವಿಜಯವು ನಮಗೆ ಭಾರತವು ಜಗತ್ತನ್ನು ಗೆಲ್ಲಬಹುದು ಎಂಬ ನಂಬಿಕೆಯನ್ನು ಹುಟ್ಟು ಹಾಕಿತು. ವೆಸ್ಟ್ ಇಂಡೀಸ್ ವಿರುದ್ಧ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದ ಮೊದಲ ಪಂದ್ಯ ನಮ್ಮಲ್ಲಿ ಆತ್ಮವಿಶ್ವಾಸ ಮೂಡಿಸಿತು ಎಂದರು.

ತಮ್ಮ ಮಾತಿನ ಉದ್ದಕ್ಕೂ ಬುದ್ಧಿವಂತಿಕೆಯಿಂದ ಹಾಸ್ಯ ಮಿಶ್ರಿತ ಧಾಟಿಯಲ್ಲಿ ಪ್ರೇಕ್ಷಕರನ್ನು ಆಕರ್ಷಿಸಿ, ನಗೆಗಡಲಲ್ಲಿ ಮುಳುಗುವಂತೆ ಮಾಡಿದರು. ಅವರಿಗೆ ನೀಡಿದ್ದ ಒಂದೂವರೆ ಗಂಟೆ ಅವಧಿ ಕಳೆದದ್ದೇ ಗೊತ್ತಾಗದ ಹಾಗೆ ಪ್ರೇಕ್ಷಕರನ್ನು ಹಿಡಿದಿಟ್ಟಿದ್ದರು. ತಮ್ಮ ಮಾತಿನ ನಡು ನಡುವೆ ಪ್ರೇಕ್ಷಕರ ಪ್ರಶ್ನೆಗಳಿಗೂ ಸರಾಗವಾಗಿ ಉತ್ತರ ನೀಡುತ್ತಿದ್ದದ್ದು ಅವರ ಬುದ್ಧಿವಂತಿಕೆಗೆ ನಿದರ್ಶನವಾಗಿತ್ತು.

ಇಡೀ ಕಾರ್ಯಕ್ರಮದಲ್ಲಿ ಸಾಹಿತ್ಯ ಪ್ರೇಮಿಗಳು, ಬರಹಗಾರರೇ ತುಂಬಿದ್ದರು. ಕ್ರಿಕೆಟ್ ದಿಗ್ಗಜನನ್ನು ಕಂಡು, ಅವರ ಮಾತುಗಳನ್ನು ಆಲಿಸಲು ಅನೇಕ ಕ್ರಿಕೆಟ್ ಪ್ರಿಯರೂ ಆಗಮಿಸಿದ್ದರು. ಅವರೆಲ್ಲರನ್ನು ಉದ್ದೇಶಿಸಿ ಮಾತನಾಡಿದ ಶ್ರೀಕಾಂತ್, ಜೀವನದಲ್ಲಿ ಏನನ್ನಾದರೂ ಸಾಧಿಸಲು ಬಯಸುವವರಿಗೆ ಉತ್ಸಾಹ ಇರಬೇಕಾದ್ದು ಬಹು ಮುಖ್ಯ. ನಿಮ್ಮಲ್ಲಿ ಉತ್ಸಾಹ ಇಲ್ಲದಿದ್ದರೆ, ನೀವು ಬರೆಯಲು ಸಾಧ್ಯವಿಲ್ಲ, ಉತ್ಸಾಹವಿಲ್ಲದಿದ್ದರೆ ಕ್ರಿಕೆಟ್‌ನಲ್ಲೂ ಸಾಧನೆ ಮಾಡಲು ಸಾಧ್ಯವಿಲ್ಲ. ಕಪಿಲ್ ದೇವ್ ನೇತೃತ್ವದ ಭಾರತ ತಂಡವು ಪ್ರಬಲ ವೆಸ್ಟ್ ಇಂಡೀಸ್ ಅನ್ನು 43 ರನ್‌ಗಳಿಂದ ಸೋಲಿಸಿ, ಇತಿಹಾಸ ನಿರ್ಮಿಸಿತು ಎಂದು ಅಂದಿನ ಕ್ರಿಕೆಟ್ ಪಂದ್ಯಾವಳಿಯ ಘಟನಾವಳಿಗಳನ್ನು ವಿವರಿಸಿದರು.



ಕ್ರಿಕೆಟ್ ದಿಗ್ಗಜ ಕೃಷ್ಣಮಾಚಾರಿ ಶ್ರೀಕಾಂತ್ ಅವರು 1983ರ ವಿಶ್ವಕಪ್ ಗೆಲುವಿನ ನೆನಪುಗಳನ್ನು ಪ್ರೇಕ್ಷಕರೊಂದಿಗೆ ಹಂಚಿಕೊಂಡ ಕ್ಷಣ

43 ವರ್ಷಗಳ ಹಿಂದಿನ ವಿಶ್ವಕಪ್ ಗೆಲುವು ಅದೊಂದು ದೊಡ್ಡ ಸಾಧನೆ. 1947ರಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕಿದರೆ, ಕ್ರಿಕೆಟ್‌ನಲ್ಲಿ ಗೆಲುವು ನಮಗೆ ಎರಡನೇ ಸ್ವಾತಂತ್ರ್ಯ ಸಿಕ್ಕಿದಷ್ಟು ಸಂತೋಷವಾಯಿತು. ನನ್ನ ಅಭಿಪ್ರಾಯದಲ್ಲಿ ಭಾರತೀಯ ಕ್ರಿಕೆಟ್‌ನ ಮುಖವನ್ನೇ ಅದು ಬದಲಿಸಿತು ಎಂಬುದನ್ನು ನೀವೆಲ್ಲರೂ ಒಪ್ಪುತ್ತೀರೆಂಬ ವಿಶ್ವಾಸ ನನಗಿದೆ ಎಂದು ಶ್ರೀಕಾಂತ್ ಪ್ರೇಕ್ಷಕರತ್ತ ನೋಟ ಬೀರಿದಾಗ, ಅದಕ್ಕೆ ಪ್ರೇಕ್ಷಕರು ಹೌದು ಎಂದು ಪ್ರತಿಕ್ರಿಯಿಸಿದರು.

ಕಪಿಲ್‌ದೇವ್‌ನನ್ನು ಹುಚ್ಚನೆಂದು ಕರೆದಿದ್ದವು: **ವೆಸ್ಟ್ ಇಂಡೀಸ್ ವಿರುದ್ಧದ ವಿಶ್ವಕಪ್ ಪಂದ್ಯಾವಳಿಯ** ಮೊದಲ ಪಂದ್ಯವನ್ನೇ ಕಪಿಲ್ ಗೆಲ್ಲುತ್ತೇವೆಂದು ಹೇಳಿದಾಗ ನಾವೆಲ್ಲ ಅವರನ್ನು ಹುಚ್ಚನೆಂದು ಕರೆದಿದ್ದೆವು. ಆದರೆ, ಆ ಗೆಲುವಿನಿಂದ ಸಿಕ್ಕಿದ ಆತ್ಮವಿಶ್ವಾಸ ಭಾರತದ ಕ್ರಿಕೆಟ್ ದಿಕ್ಕನ್ನೇ ಬದಲಿಸಿತು ಎಂದರು.

ಗುರಿಯನ್ನು ಬೆಂಬತ್ತುವ ಛಲವನ್ನು ಕಪಿಲ್‌ದೇವ್, ವಿರಾಟ್ ಕೊಹ್ಲಿ ಅವರಿಂದ ಕಲಿಯಬೇಕು. ಕ್ರಿಕೆಟ್ ದಿಗ್ಗಜರೆಲ್ಲ ಮೊದಲ ದಿನಗಳಲ್ಲಿ ಜನಸಾಮಾನ್ಯರಂತೆ ಬಸ್, ರೈಲುಗಳಲ್ಲಿ ಓಡಾಡಿದ್ದಾರೆ. ಉಚಿತವಾಗಿ ಊಟ ಸಿಗುತ್ತದೆಂದರೆ ಆಗೆಲ್ಲ ನಾವೂ ದೌಡಾಯಿಸಿದ್ದೇವೆ ಗಿಲ್ಲಿದಾಂಡು, ಬುಗುರಿ ಆಡಿದ್ದೇವೆ. ನಡೆದು ಬಂದ ದಾರಿಯನ್ನು ಮರೆಯಬಾರದು ಎಂದು ಶ್ರೀಕಾಂತ್ ಹೇಳಿದರು.

ನಿಮ್ಮ ಜೀವನದಲ್ಲಿ ಮತ್ತೊಬ್ಬ ಕಪಿಲ್ ದೇವ್ ಸಿಗುವುದಿಲ್ಲ. ಅವರು ಎಂದಿಗೂ ಬಿಟ್ಟುಕೊಡದ ವ್ಯಕ್ತಿ. ಅವರೊಬ್ಬ ವಿಶಿಷ್ಟ ಪಂಜಾಬಿ. ಅದನ್ನು ಬಿಡಬೇಡ ಹುಡುಗರೇ ಎನ್ನುವ ಮನೋಭಾವ, ಆಕ್ರಮಣಕಾರಿ ಧೋರಣೆ ಅವರದ್ದು. ಅವನು ತನ್ನ ವಿರೋಧಿಗಳನ್ನು ಎದುರಿಸಲು ಇಷ್ಟಪಡುವುದು ಆತನ ಧೋರಣೆ ಎಂದು ಕಪಿಲ್‌ದೇವ್ ಬಗ್ಗೆ ನೆನಪಿಸಿಕೊಂಡರು.

ನಂತರ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ಅವರು, ಉತ್ಸಾಹ, ಲವಲವಿಕೆ ಎದ್ದು ಕಾಣುತ್ತಿತ್ತು. ನನ್ನ ಬಾಯಿ ನನ್ನ ದೊಡ್ಡ ಶಕ್ತಿ ಮತ್ತು ಅದೇ ಸಮಯದಲ್ಲಿ ಅದು ನನ್ನ ದೊಡ್ಡ ಶತ್ರುವೂ ಹೌದು ಎಂದು ಹೇಳಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಸಂಸ್ಥಾಪಕ–ವ್ಯವಸ್ಥಾಪಕ ಟ್ರಸ್ಟಿ ಶುಭಾ ಸಂಜಯ್ ಅರಸ್, ಉಪಾಧ್ಯಕ್ಷ ಚೆರಿಯನ್ ಕುಂಬುಕಟ್ಟು ಖಜಾಂಚಿ ರಾಯನ್ ಇರಾನಿ, ಜಂಟಿ ಕಾರ್ಯದರ್ಶಿ ಸಿ.ಆರ್.ಹನುಮಂತ್, ಕಾರ್ಯದರ್ಶಿ ತಂಕಂ ಪಾಣಕಲ್, ಉದ್ಯಮಿ ಅರೂನ್ ರಾಮನ್ ಇನ್ನಿತರರು ಉಪಸ್ಥಿತರಿದ್ದರು.

ಮಾಸ್ ಲೀಡರ್‌ಗಳ ಮಾಸ್ ಲೀಡರ್ ಹೆಚ್.ಡಿ.ದೇವೇಗೌಡ



'ಯೆಸ್ ಪ್ರೈಮ್ ಮಿನಿಸ್ಟರ್' ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿದ್ದ ಪತ್ರಕರ್ತರಾದ ಸುಗತ ಶ್ರೀನಿವಾಸರಾಜು, ಸಾಗರಿಕ ಘೋಷ್, ರವಿ ಜೋಶಿ.

ಮೈಸೂರು, ಜು.24– ನಂತರ ನಡೆದ 'ಯೆಸ್ ಪ್ರೈಮ್ ಮಿನಿಸ್ಟರ್' ಸಂವಾದದಲ್ಲಿ ಅಂಕಣಗಾರ್ತಿ ಸಾಗರಿಕಾ ಘೋಷ್, 50 ವರ್ಷ ಸಂಸತ್ ಸದಸ್ಯರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಆರ್‌ಎಸ್‌ಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ರಾಜಕಾರಣಿ. ಗುಜರಾತ್ ಗಲಭೆಯಾದಾಗ ಮೋದಿ ಅವರಿಗೆ ರಾಜಧರ್ಮ ಪಾಲಿಸಲು ಸೂಚಿಸಿದ್ದರು. ಪಿ.ವಿ.ನರಸಿಂಹರಾವ್ ಆರ್ಥಿಕ ನೀತಿಗಳನ್ನು ಮುಂದುವರಿಸಿದ್ದರು. ಹೀಗಾಗಿಯೇ ಆರ್‌ಎಸ್‌ಎಸ್ ಅಂಗಸಂಸ್ಥೆಗಳು ಅವರನ್ನು ವಿರೋಧಿಸುತ್ತಿದ್ದವು ಎಂದು ಹೇಳಿದರು.

ಇದಕ್ಕೆ ಪತ್ರಕರ್ತ ಸುಗತ ಶ್ರೀನಿವಾಸರಾಜು ಪ್ರತಿಕ್ರಿಯಿಸಿ, ಮಾನವೀಯತೆ, ಭಾಷಣ ಚಾತುರ್ಯವೆಲ್ಲವೂ ವಾಜಪೇಯಿ ವ್ಯಕ್ತಿತ್ವ. ಆದರೆ, ಆರ್‌ಎಸ್‌ಎಸ್ ಸಿದ್ಧಾಂತದಿಂದ ಪ್ರೇರಿತವಾಗಿದ್ದ ಅವರು ಎಂದಿಗೂ ಮಾತೃಸಂಸ್ಥೆಯನ್ನು ಬಿಟ್ಟುಕೊಟ್ಟಿರಲಿಲ್ಲ' ಎಂದರು.

ಚರಣ್‌ಸಿಂಗ್, ಚಂದ್ರಶೇಖರ್, ವಿ.ಪಿ.ಸಿಂಗ್, ಎಚ್.ಡಿ.ದೇವೇಗೌಡ ಸೂಕ್ಷ್ಮ ಅರ್ಥಶಾಸ್ತ್ರ ತಜ್ಞರು. ಅವರ ಕೊಡುಗೆಗಳನ್ನು ಯಾರೂ ಸ್ಮರಿಸದಿರುವುದೇ ವಿಪರ್ಯಾಸ. ಟಿಪ್ಪು ಸುಲ್ತಾನ್‌ನಂತೆ ದೇವೇಗೌಡರ ಕುರಿತೂ ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ. ತಮ್ಮ ಧಾರ್ಮಿಕ ಶ್ರದ್ಧೆಯನ್ನು ರಾಜಕಾರಣಕ್ಕೆ ಅವರೆಂದೂ ಬಳಸಿಕೊಂಡಿಲ್ಲ' ಎಂದು ಪ್ರತಿಪಾದಿಸಿದರು.

ದೇವೇಗೌಡರನ್ನು ಬಾಂಗ್ಲಾದೇಶ, ಪಂಜಾಬ್, ಕಾಶ್ಮೀರದ ಜನರು ನೆನೆಯುತ್ತಾರೆ. ದೇವೇಗೌಡ ಅಧಿಕಾರದಲ್ಲಿದ್ದದ್ದು ಕೆಲವೇ ವರ್ಷಗಳಷ್ಟೇ. ಆದರೆ, ಬಾಂಗ್ಲಾದೇಶ, ಕಾಶ್ಮೀರ, ಪಂಜಾಬ್‌ನ ಜನರು ನೆನೆಯುತ್ತಾರೆ. ದೇವೇಗೌಡರು ಮಾಸ್ ಲೀಡರ್‌ಗಳ ಮಾಸ್ ಲೀಡರ್. ಹೀಗಾಗಿಯೇ ಅವರನ್ನು ಮುಖ್ಯಮಂತ್ರಿ, ಪ್ರಧಾನಿ ಹುದ್ದೆಗಳಿಗೆ ಬಿಜು ಪಟ್ನಾಯಕ್ ಸೂಚಿಸಿದ್ದರು' ಎಂದರು. ರವಿ ಜೋಶಿ ಸಂವಾದ ನಡೆಸಿಕೊಟ್ಟರು.

'ನೆನಪು ಅನಂತ' ಪುಸ್ತಕ ಬಿಡುಗಡೆ

ಸಂತೆಯಂತಿದ್ದ ಮನೆ; ನೆನಪಿಸಿಕೊಂಡ ಎಸ್ತರ್ ಅನಂತಮೂರ್ತಿ



ಮೈಸೂರು, ಜು.24– ಇದಕ್ಕೂ ಮುನ್ನ ನಡೆದ ಗೋಷ್ಠಿಯಲ್ಲಿ ಎಸ್ತರ್ ಅನಂತಮೂರ್ತಿ ಅವರ 'ನೆನಪು ಅನಂತ' ಪುಸ್ತಕವನ್ನು ಪ್ರೊ.ವಿ.ಕೆ.ನಟರಾಜ್ ಬಿಡುಗಡೆಗೊಳಿಸಿದರು. ಬಳಿಕ ಎಸ್ತರ್ ಅನಂತಮೂರ್ತಿ ಅವರು ತಮ್ಮ ಕೃತಿ 'ನೆನಪು ಅನಂತ'ದ ಕೆಲವು ಭಾಗಗಳನ್ನು ಓದಿದರು.

ಅನಂತಮೂರ್ತಿ ಇದ್ದಾಗಿನ ದಿನಗಳು ಮನೆಯು ಸಂತೆಯಂತಿತ್ತು. ಆಗೆಲ್ಲ ಬೈಯ್ದುಕೊಳ್ಳುತ್ತಿದ್ದೆ. ಈಗ ಒಬ್ಬಳೇ ಇದ್ದೇನೆ. ಮನೆ ಸಂತೆಯಂತಿಲ್ಲ. ಆ ಗಳಿಗೆಗಳು, ಅವರ ಒಡನಾಟದ ಹಿತವೇ ಚೆನ್ನಾಗಿತ್ತು ಎಂದು ಅನಂತಮೂರ್ತಿ ಅವರನ್ನು ಸ್ಮರಿಸಿದರು.

'ಹಾಸನದಲ್ಲಿ ಕಾಲೇಜಿನಲ್ಲಿ ಅನಂತಮೂರ್ತಿ ಹೃದಯದಲ್ಲಿ ಸ್ಥಾನ ಪಡೆದೆ. ಮೈಸೂರಿಗೆ ಬಂದಾಗ ಸಮತೆಂತೋ ರಂಗ ತಂಡದಲ್ಲಿ ನಾಟಕಗಳನ್ನು ಮಾಡುತ್ತಿದ್ದೆ. ಮೂರ್ತಿ ಅವರೂ ಬಣ್ಣ ಹಚ್ಚಿದ್ದರು. ರಂಗದ ಮೇಲೆ ಬಂದಾಗ ವೇಷ ನೋಡಿ ನಗುತ್ತಿದ್ದೆ' ಎಂದರು.

ಮೈಸೂರು ವಿಶ್ವ ವಿದ್ಯಾನಿಲಯದ ಗಂಗೋತ್ರಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದನ್ನು ಸ್ಮರಿಸಿದ ಅವರು, ಶಾಲೆಗೆ ಸುತ್ತಮುತ್ತಲಿನ ಎಲ್ಲ ಮಕ್ಕಳು ಓದಲು ಬರುತ್ತಿದ್ದರು. ಸಮಾನ ಶಿಕ್ಷಣಕ್ಕೆ ಶಾಲೆ ದೇಶಕ್ಕೆ ಮಾದರಿಯಾಗಿತ್ತು ಎಂದು ತಿಳಿಸಿದರು.

ಇದಕ್ಕೆ ಇತಿಹಾಸಕಾರ ಪೃಥ್ವಿದತ್ತ ಚಂದ್ರಶೋಭಿ ಪ್ರತಿಕ್ರಿಯಿಸಿ, ತೊಣಚಿಕೊಪ್ಪಲು, ಬೋಗಾದಿ, ಹಿನಕಲ್ ಸೇರಿದಂತೆ ಹಲವು ಕಡೆಗಳಿಂದ ಮಕ್ಕಳು ಬರುತ್ತಿದ್ದರು. ನಾನೂ ಕೂಡ ಎರಡು ಎಮ್ಮೆಗಳೊಂದಿಗೆ ಶಾಲೆಗೆ ಹೋಗುತ್ತಿದ್ದೆ. ದಾರಿಯಲ್ಲಿ ಕಟ್ಟಿ ಹಾಕಿ ಶಾಲೆಗೆ ಹೋಗುತ್ತಿದ್ದೆ. ಇದನ್ನು ನೋಡಿದ ಮೇಡಂ ಕಾಯಕದ ಮಹತ್ವವನ್ನು ಮಕ್ಕಳಿಗೆ ತಿಳಿಸುತ್ತಿದ್ದರು. ನನ್ನ ಬೆಟ್ಟು ತಟ್ಟುತ್ತಿದ್ದರು ಎಂದರು.

ಸೂಫಿ ಗಾಯನ, ಚಿಣ್ಣರ ಆಟ-ಪಾಠಗಳೊಂದಿಗೆ


'6ನೇ ಮೈಸೂರು ಸಾಹಿತ್ಯ ಸಂಭ್ರಮ'ಕ್ಕೆ ತೆರೆ



ಮೈಸೂರು, ಜು.24(ಎಂಕೆ)– ಸೂಫಿ ಗಾಯನ, ಚಿಣ್ಣರ ಆಟ–ಪಾಠಗಳೊಂದಿಗೆ '6ನೇ ಮೈಸೂರು ಸಾಹಿತ್ಯ ಸಂಭ್ರಮ'ಕ್ಕೆ ತೆರೆ ಬಿದ್ದಿತು. ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿದ್ದ '6ನೇ ಮೈಸೂರು ಸಾಹಿತ್ಯ ಸಂಭ್ರಮ' ಮೈಸೂರಿನ ಅಪರ್ಯಾಪ್ತ ತಂಡದ ಸೂಫಿ ಗಾಯನ ಹಾಗೂ ಪುಟಾಣಿಗಳ ಆಟ–ಪಾಠದೊಂದಿಗೆ ತೆರೆ ಕಂಡಿತು.

ನಾಡಿನ ಖ್ಯಾತ ಸಾಹಿತಿಗಳು, ಕ್ರೀಡಾಪಟುಗಳು, ವಿಮರ್ಶಕರು, ಕಲಾವಿದರು ಭಾಗವಹಿಸಿ ಸಾಹಿತ್ಯ, ಸಿನಿಮಾ, ಯಕ್ಷಗಾನ, ಪತ್ರಿಕೋದ್ಯಮ, ಕ್ರಿಕೆಟ್, ನಾಟಕ, ಅಧಿಕಾರ ವರ್ಗ, ವನ್ಯಜೀವಿ, ಜೀವನಕಲೆ ಇನ್ನಿತರ ಪ್ರಮುಖ ಅಂಶಗಳನ್ನು ತಿಳಿಸಿಕೊಟ್ಟರಲ್ಲದೆ ತಾವು ಬರೆದ ಪುಸ್ತಕಗಳ ಕಿರುಪರಿಚಯದ ಮೂಲಕ ಓದುಗರಲ್ಲಿ ಆಸಕ್ತಿ ಮೂಡಿಸಿದರು. ಅಲ್ಲದೆ 'ಸಾಹಿತ್ಯ ಸಂಭ್ರಮ'ದಲ್ಲಿ ಪುಸ್ತಕಗಳ ಮಾರಾಟ ಭಾರೀ ಜೋರಾಗಿತ್ತು.

'ಅಗ್ನಿಪಥ್' ಉತ್ತಮ ಯೋಜನೆ, ಸೇನೆ ಸೇರಿ ಚಾರಿತ್ರ್ಯ ನಿರ್ಮಿಸಿ



ಮೈಸೂರು, ಜು.24(ಎಂಕೆ)– ಕೇಂದ್ರ ಸರ್ಕಾರದ ನೂತನ 'ಅಗ್ನಿಪಥ್ ಯೋಜನೆ' ಉತ್ತಮವಾಗಿದ್ದು, ಯುವಕರ ಚಾರಿತ್ರ್ಯ ನಿರ್ಮಾಣಕ್ಕೆ ಸಹಕಾರಿಯಾಗಲಿದೆ ಎಂದು ಪುಣೆಯ ಸಶಸ್ತ್ರ ಪಡೆಗಳ ವೈದ್ಯಕೀಯ ಕಾಲೇಜಿನ ಪೀಡಿಯಾಟ್ರಿಕ್ ಹೆಮಟಾಲಜಿಸ್ಟ್ ಅಂಡ್ ಆಂಕೊಲಾಜಿಸ್ಟ್ ಡಾ.ಕೃಷ್ಣರಾವ್ ಅಭಿಪ್ರಾಯಪಟ್ಟರು.

'6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ 'ಸಾಹಸ ಕಥೆ'ಗಳನ್ನು ಪರಿಚಯಿಸಿದ ಅವರು, 'ಅಗ್ನಿಪಥ್ ಯೋಜನೆ'ಯಲ್ಲಿ 4 ವರ್ಷ ಅವಧಿಗೆ ಸೀಮಿತಗೊಳಿಸಲಾಗಿದೆ. 4 ವರ್ಷದಲ್ಲಿ ಒಂದೂವರೆ ವರ್ಷ ತರಬೇತಿ ನೀಡಿ, ಉಳಿದ ಎರಡೂವರೆ ವರ್ಷ ಸೇನೆಯಲ್ಲಿ ಕೆಲಸ ಮಾಡಬೇಕು ಎಂದಿದೆ. ಒಂದೂವರೆ ವರ್ಷ ನೀಡಿದ ಉನ್ನತ ತರಬೇತಿಯ ಪ್ರತಿಫಲಕ್ಕಾದರೂ 6 ವರ್ಷಗಳ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಚಿಕ್ಕ ವಯಸ್ಸಿಯಲ್ಲಿಯೇ ಸೇನೆಗೆ ಸೇರುವುದರಿಂದ ಒಳ್ಳೆಯ ಚಾರಿತ್ರ್ಯ ನಿರ್ಮಾಣವಾಗುತ್ತದೆ. ಕಠಿಣ ಪರಿಸ್ಥಿತಿಯಲ್ಲಿ ದೇಶ ಕಾಯುವ ಕೆಲಸದಲ್ಲಿ ತೊಡಗಿಕೊಳ್ಳುವುದರಿಂದ ದೇಶಾಭಿಮಾನದ ಜೊತೆಗೆ ಸರ್ಕಾರದ ಕಾರ್ಯಕ್ರಮಗಳನ್ನು ಅರಿಯದೆ ವಿರೋಧಿಸುವ ಗುಣ ದೂರವಾಗುತ್ತದೆ. ಈ ನಿಟ್ಟಿನಲ್ಲಿ ನೂತನ 'ಅಗ್ನಿಪಥ್ ಯೋಜನೆ' ಉತ್ತಮವಾಗಿದೆ ಎಂದು ತಿಳಿಸಿದರು.

ನಾಯಕತ್ವ ಮುಖ್ಯ: ನಾಯಕತ್ವ ಎಂಬುದು ಅಕಾಡೆಮಿ ವಿಷಯವಾಗಿ ಸಿಮೀತವಾಗಿದ್ದು, ತರಗತಿಯಲ್ಲಿ ಮಾತ್ರ ಚರ್ಚಿಸುತ್ತಿದ್ದೇವೆ. ರಸ್ತೆ ಮಧ್ಯದಲ್ಲಿನ ವ್ಯಾಪಾರಿಯಲ್ಲಿಯೂ ಕೆಲ ನಾಯಕತ್ವದ ಗುಣಗಳಿರುತ್ತವೆ. ವ್ಯಕ್ತಿಗಳು ಬೆಳೆದರಷ್ಟೇ ದೇಶ ಬೆಳೆಯುವುದು. ಯಾರೋ ಬಂದು ಬದಲಾಯಿಸುತ್ತಾರೆ ಎಂದು ಕಾಯುವ ಬದಲು ನಮ್ಮಿಂದ ಏನಾದರೂ ಸಾಧ್ಯವಾಗುತ್ತಾ ಎಂದು ಯೋಜಿಸಿಬೇಕು ಹಾಗೂ ಪ್ರಯತ್ನಿಸಬೇಕು ಎಂದರು ಹೇಳಿದರು. ಅವರೊಂದಿಗೆ ಭಾಗವಹಿಸಿದ್ದ ಲೇಖಕ ಡಾ.ಚಂದ್ರಶೇಖರ್, ಲೇಖಕ ಶಂಕರ್ ಬೆಲ್ಲೂರು, ಡಾ.ಕೃಷ್ಣ ರಾವ್ ಹಾಗೂ ಡಾ.ಚಂದ್ರಶೇಖರ್ ಅವರ ಕೃತಿಗಳಲ್ಲಿರುವ ಸಾಹಸ ಕಥೆಗಳ ಪರಿಚಯ ಮಾಡಿಕೊಟ್ಟರು.

ವಿರೋಧಿಸುವುದೇ ಕ್ರಿಯಾಶೀಲತೆ ಅಲ್ಲ, ವ್ಯವಸ್ಥೆ ಬಲಪಡಿಸುವುದು ಕ್ರಿಯಾಶೀಲತೆ

ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಅಭಿವೃದ್ಧಿ ತಜ್ಞ ಡಾ.ಆರ್.ಬಾಲಸುಬ್ರಹ್ಮಣ್ಯಂ ಅಭಿಮತ



ಮೈಸೂರು, ಜು.24(ಎಂಕೆ)– ನಾವುಗಳು ಕೇವಲ ಸರ್ಕಾರವನ್ನು ಪ್ರಶ್ನಿಸುವುದೇ ನಮ್ಮ ಹಕ್ಕು ಎಂದು ಭಾವಿಸಿದ್ದೇವೆ. ಆದರೆ, ಮುಖ್ಯವಾಗಿ ಸರ್ಕಾರದ ಭಾಗೀದಾರನಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಅಭಿವೃದ್ಧಿ ತಜ್ಞ ಡಾ.ಆರ್. ಬಾಲಸುಬ್ರಮಣ್ಯಂ ಹೇಳಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿದ್ದ '6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ 'ಸಮುದಾಯ ಬುದ್ಧಿವಂತಿಕೆಯೊಂದಿಗೆ ರಾಜ್ಯದ ಸಾಮರ್ಥ್ಯವನ್ನು ಹುದುಗಿಸುವುದು' (Embedding state capacity with community wisdom) ಕುರಿತು ಮಾತನಾಡಿದ ಅವರು, ವಿರೊಧಿಸುವುದೇ ನಮ್ಮ ಕ್ರಿಯಾಶೀಲತೆ ಎಂದುಕೊಂಡಿದ್ದೇವೆ. ವ್ಯವಸ್ಥೆಯನ್ನು ಬಲಪಡಿಸುವುದು ಅಥವಾ ಸರಿಪಡಿಸುವುದು ನಿಜವಾದ ಕ್ರಿಯಾಶೀಲತೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರದ ಪ್ರತಿಯೊಂದು ಚಟುವಟಿಕೆಗಳಲ್ಲಿಯೂ ಜನರು ಭಾಗಿಯಾಗಬೇಕು ಎಂದು ಪ್ರಧಾನಿಗಳು ಕರೆ ನೀಡಿದ್ದಾರೆ. ಪರಿವರ್ತನೆಯಾಗಬೇಕಾದರೆ ಭಾಗಿಯಾಗುವುದು ಅತ್ಯಂತ ಮುಖ್ಯ. ಸರ್ಕಾರದಲ್ಲಿಯೂ ಶಾಶ್ವತ ಕಲಿಕೆ ಇರಬೇಕು. ಬರೀ ಟೀಕೆ–ಟಿಪ್ಪಣಿಗಳನ್ನು ಮಾಡುವ ಬದಲು ಅಭಿವೃದ್ಧಿ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಪ್ರತಿಯೊಬ್ಬರು ಕೈಜೋಡಿಸಬೇಕು. ಕರ್ಮಚಾರಿಯಾಗಿ ಕೆಲಸ ಮಾಡದೇ ಕರ್ಮಯೋಗಿಯಾಗಿ ಕೆಲಸ ಮಾಡಿ ಎಂದು ಪ್ರಧಾನಿ ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ರಾಷ್ಟ್ರಸೇವೆಯೆ ನಮ್ಮ ದೋರಣೆಯಾಗಿರಬೇಕೆ ಹೊರತು ಕೇವಲ ಸಂಬಳಕ್ಕಾಗಿ ಕೆಲಸ ಮಾಡಬಾರದು ಎಂದರು.

ದೇಶದಲ್ಲಿ ಡಿಜಿಟಲ್ ಬಳಕೆ ಹೆಚ್ಚಾಗಿದ್ದು, ಹಳ್ಳಿ ಹಳ್ಳಿಯಲ್ಲೂ ಡಿಜಿಟಲ್ ಬಳಕೆಯಾಗುತ್ತಿದೆ. ಕೇವಲ ಫೇಸ್‌ಬುಕ್, ವಾಟ್ಸಾಪ್‌ಗಳನ್ನು ನೋಡಲಷ್ಟೇ ಇಂಟರ್‌ನೆಟ್ ಬಳಸುವ ಬದಲು ಸರ್ಕಾರದ ಕಾರ್ಯಕ್ರಮಗಳನ್ನು ತಿಳಿದುಕೊಂಡು ಸದುಪಯೋಗಪಡಿಸಿಕೊಳ್ಳಲು ಹೆಚ್ಚಾಗಿ ಬಳಸಬೇಕು. ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಾಗುತ್ತಿರುವ ಖರ್ಚು ಕಡಿಮೆ. ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡುತ್ತಿರುವುದರಿಂದ ಕೇಂದ್ರ ಸರ್ಕಾರಕ್ಕೆ ಸುಮಾರು 1 ಲಕ್ಷದ 60 ಸಾವಿರ ಕೋಟಿ ರೂ. ಉಳಿತಾಯವಾಗಿದೆ ಎಂದು ತಿಳಿಸಿದರು.

ಪರಿಹಾರ ಪಡೆಯಿರಿ: ಕೇಂದ್ರ ಸರ್ಕಾರದ ಯಾವುದೇ ಸಾಲ–ಸೌಲಭ್ಯಗಳಲ್ಲಿ ಅಥವಾ ಇನ್ನಿತರೆ ಯೋಜನೆಗಳಲ್ಲಿ ಕುಂದು–ಕೊರತೆ ಉಂಟಾದಲ್ಲಿ 'ಸಿಪಿಗ್ರಾಂ(CPGRAMS)' ಪೋರ್ಟಲ್ ಮೂಲಕ ನೇರವಾಗಿ ದೂರು ಸಲ್ಲಿಸಬಹುದಾಗಿದೆ. ದೂರು ಸಲ್ಲಿಕೆಯಾದ ತಕ್ಷಣವೇ ಸಂಬಂಧಪಟ್ಟ ಇಲಾಖೆಯ ಕಡೆಯಿಂದ ಇದ್ದಂತಹ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಹೇಳಿದರಲ್ಲದೆ ದೇಶದ ಅಭಿವೃದ್ಧಿಗೆ ಕೈ ಜೋಡಿಸುವಂತೆ ಕರೆ ನೀಡಿದರು. ಯುವಾನ್ನಾ ಹರಿ ಸಿಂಗ್ ಕಾರ್ಯಕ್ರಮ ನಡೆಸಿಕೊಟ್ಟರು.

ಸಂಸ್ಕೃತಿ ಕಲಿಸದೆ, ಅಕ್ಷರ ಕಲಿಸುತ್ತಿರುವ ಶಿಕ್ಷಣ

ಶಿಕ್ಷಣ ತಜ್ಞ ಡಾ. ಗುರುರಾಜ್ ಕರಜಗಿ ಕಳವಳ



ಮೈಸೂರು, ಜು.23(ಜಿಎ)– ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಬರೀ ಅಕ್ಷರವನ್ನು ಮಾತ್ರ ಕಲಿಸುತ್ತಿದೆ. ಸಂಸ್ಕೃತಿಯನ್ನು ಕಲಿಸುತ್ತಿಲ್ಲ. ಎಂದು ಶಿಕ್ಷಣ ತಜ್ಞರೂ ಆದ ಖ್ಯಾತ ವಾಗ್ಮಿ ಡಾ. ಗುರುರಾಜ್ ಕರಜಗಿ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'6ನೇ ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ 'ಶಿಕ್ಷಣ– ಧನಾತ್ಮಕ ಚಿಂತನೆಗಳು, ಮಾನವೀಯ ಮೌಲ್ಯಗಳು' ಎಂಬ ವಿಷಯಗಳ ಕುರಿತು ಮಾತನಾಡಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಫೇಲ್ ಆದವರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಶಿಕ್ಷಣ ಪಡೆದವರಲ್ಲಿ ಆತ್ಮವಿಶ್ವಾಸವೇ ಇಲ್ಲವಾಗಿದ್ದು, ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸೋಲುತ್ತಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ನಾವೇಲ್ಲರೂ ಮಾರ್ಕ್ಸ್‌ವಾದಿಗಳಾಗುತ್ತಿರುವುದು ಎಂದು ಅವರು ಆತಂಕ ವ್ಯಕ್ತಪಡಿಸಿದರು.

ರೇಸ್‌ನಲ್ಲಿ ಕುದುರೆಗಳು ಓಡದಿದ್ದರೆ ಅದರ ಜೀವನ ಹೇಗೆ ಬದಲಾಗುತ್ತದೆ ಹಾಗೇ ಮಕ್ಕಳ ಜೀವನವನ್ನು ಪೋಷಕರು ಮಾಡುತ್ತಿದ್ದಾರೆ. ಕೆಲವರಂತೂ ಪ್ರತಿಷ್ಠಿತ ಕಾಲೇಜಿನಲ್ಲಿ ಓದಿದರೆ ಮಾತ್ರ ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ ಎಂದು ತಿಳಿದುಕೊಂಡಿದ್ದಾರೆ. ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಸೇರಿದಂತೆ ದೇಶದ ಅನೇಕ ಸಾಧಕರು ಯಾವುದೇ ಪ್ರತಿಷ್ಠಿತ ಕಾಲೇಜಿನಲ್ಲಿ ವ್ಯಾಸಂಗ ಮಾಡಲಿಲ್ಲ. ಅವರು ಸಾಧನೆ ಮಾಡಲಿಲ್ಲವೆ ಎಂದ ಅವರು, ಪೋಷಕರು ಮಕ್ಕಳ ಫಲಿತಾಂಶವನ್ನು ತೆಗೆದುಕೊಂಡು ಏನು ಮಾಡುತ್ತೀರಾ, ಮಕ್ಕಳಲ್ಲಿ ಸಕಾರಾತ್ಮಕ ಅಂಶಗಳನ್ನು ಕಲ್ಪಿಸಬೇಕು ಎಂದು ತಿಳಿಸಿದರು.

1ನೇ ಶತಮಾನದಲ್ಲಿ ಏಸುವಿನ ಅನುಯಾಯಿ ಸೆಂಟ್ ಜಾನ್ 'ದಯವಿಟ್ಟು ನಿಮ್ಮ ಸುತ್ತಲಿನ ಎಲ್ಲರನ್ನೂ ಪ್ರೀತಿಸಿ' ಎಂಬ ಸಂದೇಶವನ್ನು ನೀಡಿದ್ದರು. ಅದು ಆ ಶತಮಾನದ ಜನತೆಗೆ ಅರ್ಥವಾಗಿ ಹಾಗೆಯೇ ಜೀವನ ನಡೆಸಿದ್ದರು. ಆದರೆ, ಇಂದು ನಾವು ಸಮಾಜವನ್ನು ಜಾತಿ, ಕುಲ, ಧರ್ಮ, ವರ್ಣ, ಭಾಷೆ ಹಾಗೂ ಭೌಗೋಳಿಕವಾಗಿಯೂ ಒಡೆದಿದ್ದೇವೆ. ಈ ಶತಮಾನಲ್ಲಿಯೂ ಶಿಕ್ಷಣದಲ್ಲಿ ಈ ಸಂದೇಶವನ್ನು ಅಳವಡಿಸಿದ್ದರೆ ಸಮಾಜಕ್ಕೆ ಉತ್ತಮ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ಕಾರ್ಯಕ್ರಮಕ್ಕೂ ಮುನ್ನ 'ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ಮತ್ತು ನಿಗೂಢ ವೀರಪ್ಪನ್' ಎಂಬ ವಿಷಯದ ಕುರಿತು ಡಾ.ಡಿ.ವಿ. ಗುರುಪ್ರಸಾದ್ ಅವರು ಬರೆದಿರುವ ದಂತ ಕಥೆಯಾದ ದಂತ ಚೋರ ವೀರಪ್ಪನ್ ಎಂಬ ಕೃತಿ ಬಗ್ಗೆ ಮತ್ತು ಡಾ.ಪ್ರಸನ್ನ ಸಂತೆ ಕಡೂರು ಅವರು ಗರ್ಭ ಕಂಠದ ಕ್ಯಾನ್ಸರ್ ಕುರಿತಾದ 'ಸೂ' ಎಂಬ ವೈಜ್ಞಾನಿಕ ಪುಸ್ತಕದ ಕುರಿತು ಚರ್ಚಿಸಲಾಯಿತು. ಹಾಗೂ ನಂತರ 'ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮಾ ಮನೆ ಮನಗಳನ್ನು ಮುಟ್ಟಿ ಮರುಗಿಸುವ ಸಾಹಿತ್ಯ ಸೇವೆ' ಎಂಬ ವಿಷಯದಡಿ ಗಜಾನನ ಶರ್ಮ ಅವರು ರಾಣಿ ಚೆನ್ನಾ ಬೈರಾ ದೇವಿ ಆಡಳಿತ ಕುರಿತು ಬರೆದಿರುವ ಕೃತಿ ಕುರಿತು ಚರ್ಚಿಸಿ ಅವರ ಸಾಧನೆಗಳನ್ನು ತಿಳಿಸಲಾಯಿತು.

ರೆಕ್ಕೆ ಬಡಿಯುವ ಹಕ್ಕು, ನಾವು ನಮ್ಮಂತೆ ಇರಲು ಹೋರಾಟ ಬೇಕೆ?

ಮೈಸೂರು, ಜು.24(ಆರ್‌ಕೆಬಿ)– ರೆಕ್ಕೆ ಬಡಿಯುವ ಹಕ್ಕು, ನಾವು ನಮ್ಮಂತೆ ಇರಲು ಹೋರಾಟ ಬೇಕೆ? ಎಂಬ ವಿಚಾರಗೋಷ್ಠಿಯಲ್ಲಿ ಮಂಗಳಮುಖಿಯರ ಹೋರಾಟಗಾರ್ತಿ ಡಾ.ಅಕ್ಕೈ ಪದ್ಮಾಶಾಲಿ, ಲೇಖಕ ವಸುಧೇಂದ್ರ, ಕತೆಗಾರ್ತಿ ಮಹುವಾ ಚಿನ್ನಪ್ಪ ಭಾಗವಹಿಸಿ ಮಂಗಳಮುಖಿಯರು ಎದುರಿಸುತ್ತಿರುವ ಸಮಸ್ಯೆಗಳು, ಹೋರಾಟಗಳ ಬಗ್ಗೆ ಚರ್ಚಿಸಿದರು.

'ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಗೋಷ್ಠಿಯಲ್ಲಿ ಮಾತನಾಡಿದ ಮಂಗಳಮುಖಿಯರ ಹೋರಾಟಗಾರ್ತಿ ಡಾ.ಅಕ್ಕೈ ಪದ್ಮಶಾಲಿ, ನನ್ನನ್ನು ನಾನು ಇಷ್ಟಪಡುತ್ತೇನೆ. ಈ ದೇಶದಲ್ಲಿ ನಾವು ಹುಟ್ಟಿದ್ದೇ ಒಂದು ಭಾಗ್ಯ. ನಾನು ಹೆಣ್ಣಾಗಲು ಬಯಸುತ್ತೇನೆ. ನನ್ನ ಐಡೆಂಟಿಟಿ ನೀವು ನಿರ್ಧರಿಸುವುದಲ್ಲ. ಮನೆ ಇಲ್ಲದ, ಋತುಮತಿ ಇಲ್ಲದ ಹೆಣ್ಣು ನಾನು ಎಂದು ಹೇಳಿದರು. ನಾನು ಪುಸ್ತಕ ಬರೆಯಬೇಕೆಂದಿರಲಿಲ್ಲ. ಪ್ರತಿ ಶುಕ್ರವಾರ ಒಂದು ಸಣ್ಣ ಕತೆ ಬರೆಯಲು ಶುರು ಮಾಡಿದೆ. ಜನ ಇಷ್ಟ ಪಟ್ಟರು. ಹಾಗಾಗಿ ಅದನ್ನು ಮುಂದುವರಿಸಿದೆ ಎಂದರು.

ಲೇಖಕ ವಸುಧೇಂದ್ರ ಮಾತನಾಡಿ, ನನ್ನ ಲೈಂಗಿಕ ಮನೋಭಾವಗಳನ್ನು ಹತ್ತಿಕ್ಕಿ ಬದುಕಬಹುದು ಎಂಬ ನಂಬಿಕೆ ಇತ್ತು. ನಾನು 10–15 ಪುಸ್ತಕ ಬರೆದಿದ್ದೇನೆ. ಲೈಂಗಿಕ ಸಂಗತಿಗಳನ್ನು ಕುರಿತು ಬರೆದಿದ್ದೇನೆ. ನಾನು ಏನಾದರೂ ಬರೆಯಬೇಕು ಎಂಬುದನ್ನು ನಿರ್ಧರಿಸಿ, ಕತೆ ಬರೆಯಲು ಶುರು ಮಾಡಿದೆ. ಬರೆದ ಬಳಿಕ ಅದನ್ನು ನನ್ನದೇ ಆಟೋಬಯೋಗ್ರಫಿ ಎಂದು ಹೇಳಿದೆ. ಹಾಗಾಗಿ ಷಣ್ಮುಖ ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಕತೆ ಬಂದ ಮೇಲೆ ಎಲ್ಲೆಡೆ ಅದ್ಭುತ ಕತೆ ಎಂದು ಕೊಂಡಾಡಲು ಶುರುವಾಯಿತು. ಆಗ ಎಲ್ಲ ಕತೆಗಳನ್ನು ಸಂಕಲನವಾಗಿ ವಸುಧೇಂದ್ರ ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾಗಿ ತಿಳಿಸಿದರು.



'ರೆಕ್ಕೆ ಬಡಿಯುವ ಹಕ್ಕು, ನಾವು ನಮ್ಮಂತೆ ಇರಲು ಹೋರಾಟ ಬೇಕೆ?' ಗೋಷ್ಠಿಯಲ್ಲಿ ಮಂಗಳಮುಖಿಯರ ಹೋರಾಟಗಾರ್ತಿ ಡಾ.ಅಕ್ಕೈ ಪದ್ಮಶಾಲಿ, ಲೇಖಕರಾದ ವಸುಧೇಂದ್ರ, ಮಹುವಾ ಚಿನ್ನಪ್ಪ, ಭರತ್ ದಿವಾಕರ್

ನನ್ನ ಕತೆಗಳನ್ನು ಮಹಿಳೆಯರು ಇಷ್ಟಪಡುತ್ತಾರೆ. ಆದರೆ ಪುರುಷರು ಇಷ್ಟಪಡಲಿಲ್ಲ. ಲಿಂಗದ ಕಾರಣಕ್ಕೆ ಶೋಷಣೆ ಅನುಭವಿಸಿದ್ದು ಮಹಿಳೆ. ಹಾಗಾಗಿ ಮಹಿಳೆಯರಿಗೆ ಬೇಗ ಅರ್ಥವಾಗುತ್ತದೆ ಎಂದು ಹೇಳಿದರು.

ಕಾಲೇಜುಗಳಲ್ಲಿ ರ‍್ಯಾಗಿಂಗ್ ವೇಳೆ ಡ್ಯಾನ್ಸ್ ಮಾಡಲು ಹೇಳಿದರು. ನಾನು ಡ್ಯಾನ್ಸ್ ಮಾಡಿದ ತಕ್ಷಣ ಹುಲಿ ರೀತಿ ಮಾಡು ಎಂದರು. ಹಾಗೇ ಮಾಡಿದೆ. ಆಗ ನನ್ನನ್ನು, ಹೆಣ್ಣು ಹುಲಿ ಎಂದು ಛೇಡಿಸಿದರು ಎಂದು ತಮ್ಮ ದಿನಗಳನ್ನು ಮೆಲುಕು ಹಾಕಿದ ವಸುಧೇಂದ್ರ, ಹಾವಭಾವದಲ್ಲಿ ಗಂಡುತನ, ಹೆಣ್ಣುತನ ಇದ್ದರೆ ಅದು ದೇವರು ಕೊಟ್ಟಿದ್ದು ಎಂದರು.

ಒಮ್ಮೆ ಕೊರಿಯರ್ ಹುಡುಗ ನನಗೆ ಫೋನ್ ಮಾಡಿ ಮೇಡಂ ಎಂದಾಗ ದುಃಖವಾಯಿತು. ಆಗ ನಾನು ಹೌದು ಮೇಡಂ ನಿನಗಾಗಿ ಕಾಯುತ್ತಿದ್ದಾರೆ ಬಾ ಎಂದೆ. ಆತ ಬಂದಾಗ ನಾನೇ ನೀನು ಕೇಳಿದ ಮೇಡಂ ಎಂದೆ. ಆತ ಮುಜುಗರಕ್ಕೆ ಒಳಪಟ್ಟ. ನಮ್ಮತನವನ್ನು ನಾವು ಒಪ್ಪಿಕೊಂಡಾಗ ಸಂತೋಷವಾಗುತ್ತದೆ. ಒಪ್ಪದಿದ್ದರೆ ದುಃಖವಾಗುತ್ತದೆ ಎಂದು ಬೇಸರದಿಂದ ಹೇಳಿದರು.

ಮಹಿಳೆಯರ ಶೋಷಣೆ ಅತ್ಯಂತ ಹೆಚ್ಚಾಗಿರುವ ದೇಶ ನಮ್ಮದು. ಆದರೆ ಮಹಿಳೆಯರನ್ನು ಯತ್ರ ನಾರೇಸ್ತು ಪೂಜ್ಯತೆ ಎಂದು ಸುಮ್ಮನೆ ಹೇಳುತ್ತಾರೆ. ಸೂಕ್ಷ್ಮವಾಗಿ ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ನನಗೆ ರಾಜ್ಯೋತ್ಸವ ಪ್ರಶಸ್ತಿ ಬಂದಾಗ ನಾನು ಹೋರಾಟಗಾರ್ತಿ, ನನಗೇಕೆ ಪ್ರಶಸ್ತಿ ಕೊಟ್ಟಿರಿ ಎಂದು ಸಿದ್ದರಾಮಯ್ಯರನ್ನು ಕೇಳಿದೆ. ಅದಕ್ಕವರು ನೀನು ಹೋರಾಟ ಮಾಡಿದ್ದಕ್ಕೆ ನಿನಗೆ ಪ್ರಶಸ್ತಿ ಕೊಟ್ಟಿರುವುದಾಗಿ ಹೇಳಿದರೆಂದು ಅಕ್ಕೈ ತಿಳಿಸಿದರು. ಭರತ್ ದಿವಾಕರ್ ಕಾರ್ಯಕ್ರಮ ನಡೆಸಿಕೊಟ್ಟರು.

ಮಾಧ್ಯಮಗಳಲ್ಲಿ ಭಾಷಾಭಿಮಾನ: 'ನಂತರ ಕಿರುತೆರೆಯಲ್ಲಿ ಕನ್ನಡದ ಕಂಪು, ಮಾಧ್ಯಮಗಳಲ್ಲಿ ಭಾಷಾಭಿಮಾನ' ಕುರಿತ ಘೋಷ್ಠಿಯಲ್ಲಿ ಕಿರುತೆರೆ ನಟಿ ಕನ್ನಡತಿ ರಂಜನಿ ರಾಘವನ್, ಅಂಕಣಗಾರ್ತಿ ಕುಸುಮಾ ಆಯರಹಳ್ಳಿ ಭಾಗವಹಿಸಿ, ಮಾಧ್ಯಮಗಳಲ್ಲಿ ಭಾಷೆಗಳ ಬಳಕೆ ಬಗ್ಗೆ ಚರ್ಚಿಸಿದರು. ಧರ್ಮೇಂದ್ರಕುಮಾರ್ ಕಾರ್ಯಕ್ರಮ ನಡೆಸಿಕೊಟ್ಟರು.



ನಕ್ಕರೆ ಅದೇ ಸ್ವರ್ಗ

ಅವನು : ಹಿಂದೆ ಎಲ್ಲಾ ಶೇಂಗಾ ಎಣ್ಣೆ ಉಪಯೋಗಿಸುತ್ತಿದ್ದರು.
ಇವನು : ಆದರೆ, ಈಗ 'ಎಣ್ಣೆ' ಜೊತೆ ಶೇಂಗಾ ಉಪಯೋಗಿಸ್ತಿದ್ದಾರೆ.

ಮೈಸೂರು ಮಿತ್ರ
ಸೋಮವಾರ, 25 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ತುಕ್ಕು ಹಿಡಿದು ಅಳಿಯುವುದಕ್ಕಿಂತ ದುಡಿದು ಸವೆಯುವುದೇ ಮೇಲು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತಗ್ಗು ಗದ್ದೆಗೆ ಮೂರು ಬೆಳೆ, ಎತ್ತರದ ಗದ್ದೆಗೆ ಒಂದೇ ಬೆಳೆ.

ನಿಮ್ಮ ಪತ್ರಗಳು

ನಿರ್ವಾಹಕರು ಸೌಜನ್ಯದಿಂದ ವರ್ತಿಸಲಿ

ಮಾನ್ಯರೆ,

ಮೈಸೂರು ಬಸ್ ನಿಲ್ದಾಣದಿಂದ ವಿಜಯನಗರ 4ನೇ ಹಂತಕ್ಕೆ ತೆರಳುವ ನಗರ ಸಾರಿಗೆ ಬಸ್ ನಿರ್ವಾಹಕರು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಜು.20ರಂದು ಬೆಳಗ್ಗೆ 9 ಗಂಟೆ ಸಮಯದಲ್ಲಿ ಆ ಬಸ್ಸಿನಲ್ಲಿದ್ದ ನಿರ್ವಾಹಕರು ಓರ್ವ ಪ್ರಯಾಣಿಕರೊಂದಿಗೆ ಒರಟಾಗಿ ವರ್ತಿಸಿ, ಜೋರಾಗಿ ಬೈದಿದ್ದಾರೆ. ಬಸ್ಸಿನಲ್ಲಿ ಈಚಿನ ದಿನಗಳಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಕೆಲಸಕ್ಕೆ ತೆರಳುವ ಸಾರ್ವಜನಿಕರು ಹಾಗೂ ಇತರೆ ಪ್ರಯಾಣಿಕರು ದಿನನಿತ್ಯ ಓಡಾಡುವುದು ಸರ್ವೇ ಸಾಮಾನ್ಯವಾಗಿದೆ. ಬಸ್ ನಿರ್ವಾಹಕರಿಗೆ ಸ್ವಲ್ಪ ತಾಳ್ಮೆ, ಸಹನೆ ಮುಖ್ಯ. ಏಕೆಂದರೆ ಯಾರದೋ ಕೋಪ ಪ್ರಯಾಣಿಕರ ಮೇಲೆ ತೀರಿಸಿದರೆ ಲಾಭವಾದರೂ ಏನು?



ಈ ಬಸ್ಸಿನಲ್ಲಿ ಸಾಮಾನ್ಯವಾಗಿ ಬೆಳಗಿನ ಜಾವ ಪ್ರಯಾಣಿಕರು ತುಂಬಿರುತ್ತಾರೆ. ನಿರ್ವಾಹಕರು ಪ್ರಯಾಣಿಕರನ್ನು ಅದರಲ್ಲೂ ವೃದ್ಧರನ್ನು ತಳ್ಳುವುದು, ಅವಾಚ್ಯ ಶಬ್ದಗಳನ್ನು ಬಳಸುವುದು ಕಾನೂನು ಪ್ರಕಾರ ಅಪರಾಧ. ನಿರ್ವಾಹಕರು ಪಾಸ್ ಇರುವವರನ್ನು ಅಸಡ್ಡೆಯಿಂದ ನೋಡುವುದು, ಟಿಕೆಟ್ ತೆಗೆದುಕೊಳ್ಳುವವರನ್ನು ಗೌರವಿಸುವುದು ಪ್ರಚಲಿತ ವಿದ್ಯಮಾನಗಳಲ್ಲಿ ಒಂದಾಗಿದೆ. ರಸ್ತೆ ಸಾರಿಗೆ ವಿಭಾಗಾಧಿಕಾರಿಗಳು ಇನ್ನು ಮುಂದಾದರೂ ನಿರ್ವಾಹಕರಿಗೆ ಕರೆದು ಬುದ್ಧಿ ಹೇಳಿ ಪ್ರಯಾಣಿಕರೊಂದಿಗೆ ಅನ್ಯೋನ್ಯತೆಯಿಂದ ವರ್ತಿಸುವಂತೆ ತಿಳಿಸಬೇಕಾಗಿ ವಿನಂತಿ.

– ವೈರಮುಡಿಗೌಡ, ವಿನಾಯಕನಗರ, ಮೈಸೂರು

ಮಂಕಿ ಪಾಕ್ಸ್ ಬಗ್ಗೆ ಎಚ್ಚರಿಕೆ ಅಗತ್ಯ

ಮಾನ್ಯರೆ,

ಕೊರೊನಾ ಹಾವಳಿಯಿಂದ ಕಂಗೆಟ್ಟಿದ್ದ ಜನ ಇನ್ನೇನು ಕೊರೊನಾ ಮುಗಿಯಿತು ಎಂದು ನಿಟ್ಟುಸಿರು ಬಿಡುತ್ತಿರುವಾಗ, ಮಂಕಿ ಪಾಕ್ಸ್ ಕಾಯಿಲೆ ಆತಂಕ ಮೂಡಿಸಿದೆ. ಮಂಕಿ ಪಾಕ್ಸ್ ಎಂದರೆ ಅದರ ಹೆಸರೇ ಹೇಳುವಂತೆ ಮಂಗಗಳಿಂದ ಹರಡುವ ಕಾಯಿಲೆಯಾಗಿದೆ.



ಈ ಮಂಕಿ ಪಾಕ್ಸ್ ಕಾಯಿಲೆಯ ಮೂಲ ಆಫ್ರಿಕಾ ಖಂಡ, ಸೋಂಕು ಹೊಂದಿದ ಮಂಗಗಳೊಂದಿಗೆ ನಿಕಟ ಸಂಪರ್ಕ ಹೊಂದಿದ ಮನುಷ್ಯರಿಗೆ ಈ ಕಾಯಿಲೆ ತಗುಲಿದ ಪರಿಣಾಮ ಈ ಕಾಯಿಲೆಗೆ ಮಂಕಿಪಾಕ್ಸ್ ಎಂದು ಹೆಸರು ಬಂದಿದೆ, ಮಂಕಿಪಾಕ್ಸ್ ಒಂದು ಸಾಂಕ್ರಾಮಿಕ ಕಾಯಿಲೆಯಾಗಿದ್ದು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ

ಮಂಕಿಪಾಕ್ಸ್ ಕಾಯಿಲೆಯ ಮುಖ್ಯ ಲಕ್ಷಣಗಳೆಂದರೆ ಸತತ ಜ್ವರ, ಮೈಕೈ ನೋವು, ಕೈ ಮತ್ತು ಬಾಯಿಯಲ್ಲಿ ಗುಳ್ಳೆ ಉಂಟಾಗುವುದು ಪ್ರಮುಖ ಲಕ್ಷಣವಾಗಿದ್ದು, ಸಿಡುಬು ಮತ್ತು ಮಂಕಿಪಾಕ್ಸ್ ಕಾಯಿಲೆಯ ಲಕ್ಷಣಗಳಲ್ಲಿ ಒಂದಾಗಿರುತ್ತದೆ. ಗಾಯಗೊಂಡಿರುವ ವ್ಯಕ್ತಿ ಎಚ್ಚರಿಕೆಯಿಂದ ಇರುವುದು ಅವಶ್ಯಕವಾಗಿರುತ್ತದೆ, ಏಕೆಂದರೆ ಸೋಂಕು ಗಾಯದ ಮೂಲಕ ವ್ಯಕ್ತಿಯ ದೇಹವನ್ನು ಪ್ರವೇಶಿಸುತ್ತದೆ.

ಸೋಂಕು ಹೊಂದಿದ ವ್ಯಕ್ತಿಯನ್ನು ಪ್ರತ್ಯೇಕವಾಗಿಟ್ಟು, ವೈದ್ಯಕೀಯ ತಪಾಸಣೆ ನಡೆಸುವುದು ಅಗತ್ಯವಾಗಿರುತ್ತದೆ, ಮಂಕಿ ಪಾಕ್ಸ್ ಮಾರಣಾಂತಿಕ ಕಾಯಿಲೆ ಅಲ್ಲವಾದರೂ ಎಚ್ಚರಿಕೆ ಅಗತ್ಯವಾಗಿದೆ. ಮಂಕಿಪಾಕ್ಸ್ ಕಾಯಿಲೆ ಕೇರಳದಲ್ಲಿ ಕಾಣಿಸಿಕೊಂಡಿದ್ದು, ಇದೀಗ ದೆಹಲಿಯಲ್ಲೂ ಕಾಣಿಸಿಕೊಂಡು ನಿಧಾನವಾಗಿ ಹರಡುವ ಲಕ್ಷಣ ತೋರುತ್ತಿದೆ. ಕರ್ನಾಟಕದಲ್ಲಿ ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ. ಮಂಕಿಪಾಕ್ಸ್ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದ್ದು ಸರ್ಕಾರ ಈ ಕುರಿತು ಶೀಘ್ರವಾಗಿ ಕಾರ್ಯ ಪ್ರವೃತ್ತವಾಗಬೇಕು.

– ರಾಸುಮ ಭಟ್, ಚಿಕ್ಕಮಗಳೂರು.

ಮರಗಳನ್ನು ಬೆಳೆಸಲು ಪ್ರೇರೇಪಿಸಿ



ಮಾನ್ಯರೆ,

ಬೆಳೆಯುತ್ತಿರುವ ನಗರೀಕರಣದಿಂದ ಪರಿಸರದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತಿದೆ. ದೇಶದಾದ್ಯಂತ ನಗರಗಳ ಹಸರೀಕರಣ ಕಣ್ಮರೆಯಾಗುತ್ತಿದೆ. ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಇದೇ ಸ್ಥಿತಿ.

ಭಾರತೀಯ ಅರಣ್ಯ ಸಮೀಕ್ಷೆಯ ದತ್ತಾಂಶ ವಿಶ್ಲೇಷಣೆಯ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ಪ್ರತಿ ರಾಜ್ಯದ ಮರಗಳ ಹೊದಿಕೆಯು ಕನಿಷ್ಠ 40 ಚದರ ಕಿ.ಮೀ.ಗಳಷ್ಟು ಕಡಿಮೆಯಾಗಿದೆ. ಇನ್ನೊಂದು ಅಪಾಯಕಾರಿ ಸಂಗತಿ ಎಂದರೆ ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣಾ ನಿಯಮಗಳ ಪರಿಣಾಮವಾಗಿ ರಾಷ್ಟ್ರವ್ಯಾಪಿ ಹೆಚ್ಚು ಹೆಚ್ಚು ಮರಗಳನ್ನು ಕಡಿಯಲಾಗುತ್ತಿದೆ.ಜಾರ್ಖಂಡ್ ರಾಜ್ಯ ಸರ್ಕಾರವು ಮರಗಳನ್ನು ಬೆಳೆಸಿದವರಿಗೆ ಉಚಿತ 5 ಯೂನಿಟ್ ವಿದ್ಯುತ್ ಘೋಷಿಸಿದೆ. ಇದೆ ರೀತಿ ನಮ್ಮ ರಾಜ್ಯ ಸರ್ಕಾರವು ಮುಂದಾಗಬೇಕು.ಆಗ ಮಾತ್ರ ಜನರು ಮರಗಳನ್ನು ಬೆಳೆಸಲು ಮುಂದಾಗುತ್ತಾರೆ.

ಭವಿಷ್ಯದ ಪ್ರಕೃತಿ ಸಂರಕ್ಷಣೆಗೆ ಸಹಾಯ ಮಾಡುವವರಿಗೆ ಈ ಕೊಡುಗೆ ಅನ್ವಯಿಸುತ್ತದೆ ಎಂದು ಜಾರ್ಖಂಡ್ ರಾಜ್ಯ ಸರ್ಕಾರ ಹೇಳಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರ ಮರ ಬೆಳಸಲು ಪ್ರೇರೇಪಿಸಲಿ.ಇಲ್ಲವಾದಲ್ಲಿ ನಮ್ಮ ರಾಜ್ಯ ಸರ್ಕಾರವು ರಾಜ್ಯದ ಅರಣ್ಯವನ್ನು ಹೆಚ್ಚಿಸಲು ಪ್ರತಿ ಮಳೆಗಾಲದಲ್ಲಿ ಕೋಟಿಗಟ್ಟಲೆ ಸಸಿಗಳನ್ನು ನೆಡುವ ಗುರಿಯನ್ನು ನಿಗದಿಪಡಿಸಲಿ.

– ಎಚ್.ಕೆ. ವಿಜಯಕುಮಾರ್, ರಾಯಚೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖ

ಎಂದೂ ಬಾಡದ ನಗೆ ಮಲ್ಲಿಗೆ ನರಸಿಂಹರಾಜು



> "ಜನ ಮೆಚ್ಚಿರುವ ಯಾವುದೇ ಶ್ರೇಷ್ಠ ಕಲಾವಿದರಿರಲಿ, ಅಂಥಾ ಕಲಾವಿದರು ಅಭಿನಯಿಸಿರುವ ನೂರಾರು ಚಿತ್ರಗಳು ಇರುತ್ತವೆಂದರೂ ಅವರ ಬೆರಳೆಣಿಕೆಯಷ್ಟು ಪಾತ್ರಗಳು ಮಾತ್ರ ಪ್ರೇಕ್ಷಕರನ್ನು ಸೆಳೆದಿರುತ್ತವೆ. ಕೆಲವೊಂದು ಚಿತ್ರರಸಿಕರು ಅವರ ಅಪಾರ ಅಭಿಮಾನಿಗಳಾಗಿರುತ್ತಾರೆ ಎಂದು ಕೊಂಡರೂ ಆ ಸಂಖ್ಯೆ ಇನ್ನೊಂದಷ್ಟು ಎಂಬಂತಿರಬಹುದು ಅಷ್ಟೇ. ಆದರೆ ನರಸಿಂಹರಾಜು ಅಂತಹ ಕಲಾವಿದರಿಗೆ ಈ ಮಾತು ಅನ್ವಯಿಸುವುದಿಲ್ಲ. ಅವರ ಪ್ರತಿ ಪಾತ್ರವೂ ಪ್ರೇಕ್ಷಕರಿಗೆ ಪ್ರಿಯವಾಗಿತ್ತು" ಈ ಮಾತುಗಳ ಪ್ರತಿಯೊಂದು ಅಕ್ಷರಕ್ಷರವೂ ಮೇರು ಹಾಸ್ಯ ಕಲಾವಿದ ನರಸಿಂಹ ರಾಜು ಅವರಿಗೆ ಸಲ್ಲುವ ಬಹುದೊಡ್ಡ ಗೌರವವೆಂದು ಹೇಳಬಹುದು.

ಸಂಸ್ಕೃತ ಕಾವ್ಯ ಮೀಮಾಂಸೆ ಪ್ರಕಾರ ಹಾಸ್ಯ ಎನ್ನುವುದು ನವರಸಗಳಲ್ಲೊಂದು. ಮೇಲ್ನೋಟಕ್ಕೆ ಹಾಸ್ಯವೆಂಬುದು ನಗೆಯಾಗಿ ಕಂಡರೂ ಇದನ್ನು ಸಮಾಜದ ಮುಖದಲ್ಲಿ ಮೂಡಿಸುವ ಹಾಸ್ಯ ಕಲಾವಿದರ ಎದೆಯಾಳದ ನೋವುಗಳೆಲ್ಲಾ ಇಲ್ಲಿ ನಲಿವುಗಳಾಗಿ ಪಡಿ ಮೂಡಿರುತ್ತವೆ. ಇಂತಹ ಹಾಸ್ಯಕ್ಕೆ ಆಧ್ಯಾತ್ಮಿಕ ಕರುಳು ಮತ್ತು ಮಾನವೀಯ ಹೃದಯವುಂಟು. ಈ ಕರುಳಿನಿಂದಲೇ ಜಗತ್ಪ್ರಸಿದ್ಧರಾದ ಅನೇಕ ಯಶಸ್ವಿ ಹಾಸ್ಯ ಕಲಾವಿದರುಂಟು. ಇಂತಹವರಲ್ಲಿ ಕೇವಲ ಮೂರ್ನಾಲ್ಕು ವರ್ಷದ ಬಾಲಕನಾಗಿದ್ದಾಗಲೇ ಕುಟುಂಬದ ನೊಗ ಹೊತ್ತು ಜೀವನಕ್ಕಾಗಿ ಮುಖಕ್ಕೆ ಬಣ್ಣ ಹಚ್ಚಿ ರಂಗಭೂಮಿಯನ್ನು ಅಪ್ಪಿಕೊಂಡವರು ಟಿ.ಆರ್.ನರಸಿಂಹರಾಜು. ಎಂಥಾ ಕಷ್ಟ ಕಾರ್ಪಣ್ಯಗಳ ಭಯಂಕರ ಬೆಂಕಿಗೆ ಸಿಲುಕಿದರೂ ಇವರಾರೂ ಉರಿದು ಬೂದಿಯಾಗದೆ ಆಧ್ಯಾತ್ಮಿಕ ಚಿಂತನೆಯಲ್ಲಿ ಹಾಸ್ಯವೆಂಬ ಅಗಾಧ ಶಕ್ತಿಯಿಂದ ಬೆಂಕಿಯನ್ನೇ ಬೆಳಕು ಮಾಡಿಕೊಂಡು ಹಾಸ್ಯದ ಹೂಗಳನ್ನು ಅರಳಿಸಿ ಪರಿಮಳವಾದರು. ಇಂತಹ ಹಾಸ್ಯ ಪರಿಮಳಕ್ಕೆ ಪರವಶ ವಾಗದವರಾರು?

ಅರುವತ್ತು, ಎಪ್ಪತ್ತು, ಎಂಬತ್ತರ ದಶಕ ಗಳ ಅವಧಿಯಲ್ಲಿ ಆತ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಂಡರೆ ಸಾಕು ಇಡೀ ಚಿತ್ರಮಂದಿರ ಕೊಚ್ಚಿಕೊಂಡು ಹೋಗುವಂತೆ ನಗುವಿನ ಅಲೆ ಸಮುದ್ರದೋಪಾದಿಯಲ್ಲಿ ನುಗ್ಗಿ ಬರುತ್ತಿತ್ತು. ಎಲ್ಲರ ಮುಖದಲ್ಲೂ ನಗು... ನಗು... ನಗು. ಅದೂ ಎಂಥಾ ನಗು ಅಂತೀರಾ? ಗೊಳ್ಳನೆಯ ನಗು. ಎಷ್ಟೇ ಪ್ರಯತ್ನ ಪಟ್ಟರೂ ಪ್ರೇಕ್ಷಕರ ಮುಖದಲ್ಲಿ ಅರಳಿಕೊಂಡ ನಗುವಿನ ಸ್ನಾಯುಗಳನ್ನು ಬಿಗಿಗೊಳಿಸಲಾಗುತ್ತಿರಲಿಲ್ಲ. ಅಂಥಾ ಮುಕ್ತ ನಗು ಅದು. ಚಿತ್ರಮಂದಿರದ ತುಂಬಾ ಎಲ್ಲರ ಮುಖಗಳು ನಗುವೇ ಮುಕ್ಕಳಿಸುತ್ತಿದ್ದವು. ಎಂತಹ ಗಂಭೀರ ಸ್ವಭಾವದವರಾದರೂ ನಗದೆ ಇರಲಾಗುತ್ತಿರಲಿಲ್ಲ. ಹೀಗೆ ಚಿತ್ರರಸಿಕರಲ್ಲಿ ನಗು ತರುತ್ತಿದ್ದ ಆತ ಕಾಲವಾಗಿ ಈಗ ನಾಲ್ಕು ದಶಕಗಳೇ ಕಳೆದಿವೆ. ಆದರೆ ಇವತ್ತಿಗೂ ಆತ ತನ್ನ ನಟನೆಯ ಚಿತ್ರಗಳ ಮೂಲಕ ಬೆಳ್ಳಿ ತೆರೆಯಲ್ಲಿ, ದೂರ ದರ್ಶನದ ಕಿರುತೆರೆಯಲ್ಲಿ, ಮೊಬೈಲ್‌ಗಳ ಪುಟ್ಟ ಕನ್ನಡಿಯಲ್ಲಿ ಕಂಡರೂ ಸಾಕು, ಅದೇ ನಗು. ಯಾರೋ ಕಚಗುಳಿ ಕೊಟ್ಟಂತೆ ಅದು ಪುಟಿದೆದ್ದು ಬರುತ್ತದೆ. ಯಾರಾ ದರೂ ಏನಾದರೂ ಅಂದುಕೊಂಡಾರೆಂಬ ಭಾವನೆಯಿಂದ ಗಂಭೀರತೆ ತಂದುಕೊಳ್ಳಲು ನಗುವನ್ನು ತಡೆಯಲು ಅಂಗೈಯಲ್ಲಿ ಬಾಯನ್ನು ಒತ್ತಿ ಹಿಡಿದರೂ ಅದನ್ನು ಕಿತ್ತುಕೊಂಡು ನಗು ಬರುತ್ತದೆ. ನಕ್ಕು ನಕ್ಕು ಸುಸ್ತಾಗಿ ಕರುಳು ಉಣ್ಣಾಗುವಂತೆ ಮಾಡುತ್ತದೆ. ಇಂತಹ ಎಂದೂ ಮಾಸದ ಮಹಾ ನಗುವನ್ನು ಮೊಗೆ ಮೊಗೆದು ಕೊಟ್ಟ ಆತನನ್ನು ಚಿತ್ರರಸಿಕರು 'ನಗುವಿನ ಬ್ರಹ್ಮ' ಎಂದರು.

'ಹಾಸ್ಯ ಚಕ್ರವರ್ತಿ' ಎಂದು ಪ್ರೀತಿಯಿಂದ ಕರೆದು ನಕ್ಕು ಸಂಭ್ರಮಿಸಿದರು. 'ಹಾಸ್ಯ ಸಾರ್ವಭೌಮ' ರೆಂದು ಮನದುಂಬಿ ನಕ್ಕರು. ಇಂತಹ ಹಾಸ್ಯ ಚಕ್ರವರ್ತಿಯಾದ ಆತ ಬೇರಾರು ಅಲ್ಲ. ಯುಗ ಯುಗದ ನಗುವಾಗಿ ಕನ್ನಡಿಗರೆದೆ ಯಲ್ಲಿ ಸದಾ ನಗುನಗುತ್ತಲೇ ಎಲ್ಲರನ್ನೂ ನಗಿಸುತ್ತಲೇ ಶಾಶ್ವತವಾಗಿ ಉಳಿದಿರುವ ಟಿ.ಆರ್.ನರಸಿಂಹರಾಜು. ಪೂರ್ಣ ಹೆಸರು ತಿಪಟೂರು ರಾಮರಾಜು ನರಸಿಂಹರಾಜು. ಎಂದೂ ಬಾಡದ ನಗೆ ಮಲ್ಲಿಗೆಯಾದ ಈ ಹೆಸರೇ ಒಂದು ಯುಗದ ಅದ್ಭುತ ವಾದ ಮಾಸದ ನಗು!

ನಾಯಕ ನಟರಾಗಿ ಚರಿತ್ರಾರ್ಹ ಸಾಧನೆ ಮಾಡಿರುವ ನಟಸಾರ್ವಭೌಮ ಡಾ.ರಾಜಕುಮಾರ್‌ರಂತೆಯೇ ಹಾಸ್ಯ ನಟರಾಗಿ ಸಾಧನೆಯ ಮೈಲುಗಲ್ಲನ್ನು ನಿರ್ಮಿಸಿದವರು ಹಾಸ್ಯಸಾರ್ವಭೌಮ ನರಸಿಂಹರಾಜು. ಈ ಮಹಾನ್ ಕಲಾವಿದರಿಬ್ಬರನ್ನೂ ಚಿತ್ರರಂಗ ಯಾವತ್ತೂ ಮರೆಯುವಂತಿಲ್ಲ. ಅಂತಹ ಅಭಿನಯ ಸಾಧಕರಿವರು. ಅಂದ ಹಾಗೆ ಇವೆರಡೂ ಅಪೂರ್ವ ಕಲಾ ರತ್ನಗಳು ಬೆಳ್ಳಿ ತೆರೆಗೆ ಬಂದದ್ದು ಗುಬ್ಬಿ ವೀರಣ್ಣ ನಿರ್ಮಿಸಿ ಎಚ್.ಎಲ್.ಎನ್.ಸಿಂಹ ನಿರ್ದೇಶಿಸಿದ 'ಬೇಡರ ಕಣ್ಣಪ್ಪ' ಚಿತ್ರದಿಂದ ಎಂಬುದೇ ಒಂದು ವಿಶೇಷ.

ಹಾಗೆಯೇ ಈ ಎರಡು ಕಲಾ ನಕ್ಷತ್ರಗಳಿಗೂ ರಂಗಭೂಮಿಯೇ ತಾಯಿಯಾಗಿದ್ದು, ಗುಬ್ಬಿ ಕಂಪನಿಯಂತಹ ರಂಗಶಾಲೆಯ ತಾಯ್ತನ ಸಿಕ್ಕಿದ್ದು ಉಭಯ ಕಲಾವಿದರೂ ಭುವಿಯಿಂದ ಗಗನದೆತ್ತರಕ್ಕೆ ಬೆಳೆಯಲು ಸಾಧ್ಯವಾಯಿತು. ಇದಕ್ಕಾಗಿಯೇ ನಟಸಾರ್ವಭೌಮ ಡಾ.ರಾಜಕುಮಾರ್ ಅವರು ಕಲಾವಿದರಾಗಿ ಅವರೆಷ್ಟೇ ದೊಡ್ಡ ಮಟ್ಟಕ್ಕೆ ಬೆಳೆದರೂ ಅಷ್ಟೇ ದೊಡ್ಡ ಗೌರವವನ್ನು ಗುಬ್ಬಿ ವೀರಣ್ಣನವರಿಗೆ ಕೊಡುತ್ತಿದ್ದರು. ಅವರನ್ನು ನಮ್ಮೆಜಮಾನ್ರು ಎಂದೂ, ನಮ್ಮ ಅನ್ನದಾತರೆಂದೂ ಹೃದಯ ತುಂಬಿ ಕೊಂಡಾಡುತ್ತಿದ್ದರು. ಹಾಸ್ಯಸಾರ್ವಭೌಮ ನರಸಿಂಹರಾಜು ಸಹ ಅಷ್ಟೇ ಗುಬ್ಬಿ ವೀರಣ್ಣನವರ ಬಗ್ಗೆ ಕೃತಜ್ಞತೆ ಹೊಂದಿದ್ದರು.

ನಟನಾ ಬದುಕಿನಲ್ಲಿ ಸಾಕಷ್ಟು ಸಾಮ್ಯತೆ ಹೊಂದಿದ್ದ ರಾಜಕುಮಾರ್ ಮತ್ತು ನರಸಿಂಹ ರಾಜು ಅವರಂತಹ ಕಲಾ ಕಣ್ಮಣಿಗಳನ್ನು ಒಂದೇ ಚಿತ್ರದಲ್ಲಿ ನಾಡಿಗೆ ನೀಡಿದ ಹಿರಿಮೆ ಬೇಡರ ಕಣ್ಣಪ್ಪನದು. ಬೇಡರ ದಿಣ್ಣನಾಗಿ ರಾಜಕುಮಾರ್ ಹಾಗೂ ದುಷ್ಟ ಪೂಜಾರಿಯ ಮಗ ಕಾಶಿಯಾಗಿ ನರಸಿಂಹ ರಾಜು ಮೊದಲ ಚಿತ್ರದಲ್ಲೇ ನಟನೆಯಲ್ಲಿ ಒಬ್ಬರಿಗಿಂತ ಒಬ್ಬರು ಮಿಂಚಿ ಮೆರೆದು ಅದೇ ಮಿಂಚಿನ ಬೆಳಕಲ್ಲಿ ಸುಧೀರ್ಘಕಾಲ ಕನ್ನಡ ಚಿತ್ರರಂಗವನ್ನು ಆಳಿದ್ದು, ನೂರಾರು ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡಿದ್ದು ಈಗ ಇತಿಹಾಸ. ರಾಜಕುಮಾರ್ ಅವರು ನಟನೆಯಲ್ಲಿ ನವರಸಗಳನ್ನೂ ಅರೆದು ಕುಡಿದು ಸಕಲ ಪಾತ್ರಗಳಲ್ಲೂ ಅಭಿನಯಿಸಿ ನಟಸಾರ್ವಭೌಮರೆನಿಸಿದರೆ ನರಸಿಂಹರಾಜು ಅವರು ಹಾಸ್ಯ ಪಾತ್ರಗಳಿಗೆ ಹೆಚ್ಚು ಆದ್ಯತೆ ನೀಡಿ ನಟಿಸುತ್ತಾ ಹಾಸ್ಯ ಸಾರ್ವಭೌಮರೆನಿಸಿದರು. ಕನ್ನಡ ಚಿತ್ರರಸಿಕರನ್ನು ನರಸಿಂಹ ರಾಜು ನಗಿಸಿದಷ್ಟು ಪ್ರಮಾಣದಲ್ಲಿ ಮತ್ತೊಬ್ಬ ಹಾಸ್ಯ ನಟನಿಂದ ಇವತ್ತಿಗೂ ನಗಿಸಲಾಗಿಲ್ಲ. ಈ ದೃಷ್ಟಿಯಲ್ಲಿ ನರಸಿಂಹ ರಾಜು ಅವರದು ದಾಖಲೆಯೇ ಸರಿ.

ನರಸಿಂಹರಾಜು ಕನ್ನಡ ಚಿತ್ರರಂಗಕ್ಕೆ ಬಂದ ಸಂದರ್ಭ ಕನ್ನಡ ಚಿತ್ರರಂಗ ಶೈಶವಾವಸ್ಥೆ ಯಲ್ಲಿದ್ದ ಕಾಲಘಟ್ಟವದು. ಇನ್ನೂ ಅಂಬೆ ಗಾಲಿಡುತ್ತಿದ್ದ ಕನ್ನಡ ಚಿತ್ರರಂಗ ಮೇಲೆದ್ದು ನಿಲ್ಲುವಂತೆ ಮೊದಲಿಗೆ ಆರ್ಥಿಕ ಬಲವನ್ನು ತಂದು ಕೊಟ್ಟದ್ದು ನರಸಿಂಹರಾಜು ಅವರ ನಟನೆಯ ಚಲನಚಿತ್ರಗಳೆಂಬುದು ಅಚ್ಚರಿ ಯಾದರೂ ಬಣ್ಣದ ಲೋಕದ ಬೆಳಕಿನಷ್ಟೇ ಇದು ಸತ್ಯ. ಕನ್ನಡ ಚಿತ್ರಚರಿತ್ರೆಯ ಪುಟಗಳೇ ಇದನ್ನು ಸಾಕ್ಷೀಕರಿಸಿ ಹೇಳುತ್ತದೆ. ಇನ್ನೂ ಅಚ್ಚರಿಯೆಂದರೆ ನರಸಿಂಹರಾಜು ಅವರ ಮೊದಲ ಚಿತ್ರ 'ಬೇಡರ ಕಣ್ಣಪ್ಪ' 1954ರಲ್ಲಿ ಬಿಡುಗಡೆಯಾಗುವ ಸಮಯಕ್ಕೆ ಕನ್ನಡ ಚಿತ್ರರಂಗದ ಪ್ರಾಯ ಇಪ್ಪತ್ತು ವರ್ಷಗಳು. ಈ ಅವಧಿಯಲ್ಲಿ ನಿರ್ಮಾಣಗೊಂಡಿದ್ದ ಚಿತ್ರಗಳು ಕೇವಲ ನಲವತ್ತು. ಆ ನಂತರ ಹದಿಮೂರು ವರ್ಷಗಳಲ್ಲಿ ನಿರ್ಮಾಣಗೊಂಡು ಬಿಡುಗಡೆಗೊಂಡ ನರಸಿಂಹರಾಜು ನಾಯಕ ನಟರಾಗಿ ಅಭಿನಯಿಸಿದ್ದ 'ನಕ್ಕರೆ ಅದೇ ಸ್ವರ್ಗ' ಚಿತ್ರ 209ನೇ ಕನ್ನಡ ಚಿತ್ರ. ಆ ಕಾಲಘಟ್ಟದಲ್ಲಿ ತೆರೆಕಂಡ ಪ್ರತಿ ಹತ್ತು ಚಿತ್ರಗಳ ಪೈಕಿ ಆರು ಚಿತ್ರಗಳಲ್ಲಿ ನರಸಿಂಹರಾಜು ಅಭಿನಯಿಸಿದ್ದರು. ಈ ಪರಿಯ ನಟನೆ ಅಂದು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಅಂದು ನರಸಿಂಹರಾಜು ಮುಟ್ಟಿದ್ದೆಲ್ಲ ಚಿನ್ನ ವಾಗಿತ್ತು. ಅಂದ ಹಾಗೆ 'ಬೇಡರ ಕಣ್ಣಪ್ಪ' ಚಿತ್ರದ ನಂತರ ಇವರು ನಟಿಸಿದ ಎರಡನೆಯ ಚಿತ್ರ 'ಮುಟ್ಟಿದ್ದೆಲ್ಲ ಚಿನ್ನ'. ಈ ಚಿತ್ರವನ್ನು ಅವತ್ತಿನ ಕಾಲದ ಖ್ಯಾತ ನಿರ್ದೇಶಕ, ನಿರ್ಮಾಪಕ ಡಿ. ಶಂಕರ್ ಸಿಂಗ್ ಅವರು ನಿರ್ಮಿಸಿ ನಿರ್ದೇಶಿಸಿದ್ದರು. ಇದು ನರಸಿಂಹರಾಜು ನಾಯಕ ನಟರಾಗಿ ನಟಿಸಿದ ಪ್ರಥಮ ಚಿತ್ರವೂ ಹೌದು. ಹಾಗೆಯೇ ಇವರ ಅಭಿನಯದ 150ನೇ ಚಿತ್ರ 'ಗೃಹಲಕ್ಷ್ಮಿ' ಅವತ್ತಿನ ಕಾಲದಲ್ಲೇ ಇವರು ನಾಯಕ ನಟರಾಗಿ ನಟಿಸಿದ್ದ 'ನಕ್ಕರೆ ಅದೇ ಸ್ವರ್ಗ' ಚಿತ್ರವು ಅದ್ದೂರಿ ಶತದಿನೋತ್ಸವ ಆಚರಿಸಿ ದ್ದರೆ, ಇವರ 'ಗೃಹಲಕ್ಷ್ಮಿ' ಚಿತ್ರ ಐವತ್ತು ದಿನಗಳನ್ನು ಯಶಸ್ವಿಯಾಗಿ ಪೂರೈಸಿತ್ತು.

ಬಿಲ್ಲಿನಿಂದ ಬಿಟ್ಟ ಬಾಣದಂತೆ ಶರವೇಗದಲ್ಲಿ ನಟಿಸುತ್ತಾ ಹೋದ ನರಸಿಂಹರಾಜು ನಟನೆಯ ಚಿತ್ರಗಳ ಸಂಖ್ಯೆಯೂ ಬೆಳೆಯುತ್ತಾ ಹೋಯಿತು. ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲದೆ ಸತ್ವದಲ್ಲೂ ಮಹತ್ವಪೂರ್ಣವಾದ ಸದಭಿರುಚಿ ಚಿತ್ರಗಳೆಂದು ಚಿತ್ರರಸಿಕರಿಂದ ಮೆಚ್ಚುಗೆ ಪಡೆಯುತ್ತಾ ಚಿತ್ರದಿಂದ ಚಿತ್ರಕ್ಕೆ ಕೀರ್ತಿ ತರತೊಡಗಿದವು. ಅಲ್ಪಕಾಲದಲ್ಲೇ ಅಪಾರ ಯಶಸ್ಸು ಗಳಿಸಿದ ನರಸಿಂಹರಾಜು ಅವರು ಹಲವು ಮೊದಲುಗಳಿಗೆ ಮುನ್ನುಡಿ ಬರೆದರು. ಕನ್ನಡ ಚಿತ್ರರಂಗದ ಮೊದಲ ಸ್ಟಾರ್ ನಟ, ಕನ್ನಡದ ಮೊದಲ ಶತ ಚಿತ್ರನಟ, ಮದ್ರಾಸ್‌ನಲ್ಲಿ ಮನೆ ಮಾಡಿದ ಮೊದಲ ಕನ್ನಡ ಚಿತ್ರನಟ, ಕನ್ನಡ ಚಿತ್ರ ರಂಗಕ್ಕೆ ಆರ್ಥಿಕವಾಗಿ ಶಕ್ತಿ ತುಂಬಿದ ಮೊದಲ ನಟ, ಹದಿನಾರನೆಯ ವಯಸ್ಸಿಗೇ ಸ್ವಂತ ನಾಟಕ ಕಂಪನಿ ಕಟ್ಟಿದ ಮೊದಲ ಬಾಲ ನಟನೆಂಬ ಹೆಗ್ಗಳಿಕೆ, ಹೀಗೆ ಹಲವು ಹತ್ತು ಮೊದಲುಗಳ ದಾಖಲೆ ನರಸಿಂಹ ರಾಜು ಅವರ ಹೆಸರಿನಲ್ಲಿದೆ.

ನರಸಿಂಹರಾಜು ಅವರನ್ನು ಕುರಿತಂತೆ ಪ್ರಸಿದ್ಧವಾದ ಮಾತೊಂದಿದೆ.ಅದು "ಜನ ಮೆಚ್ಚಿರುವ ಯಾವುದೇ ಶ್ರೇಷ್ಠ ಕಲಾವಿದರಿರಲಿ, ಅಂಥಾ ಕಲಾವಿದರು ಅಭಿನಯಿಸಿರುವ ನೂರಾರು ಚಿತ್ರಗಳು ಇರುತ್ತವೆಂದರೂ ಅವರ ಬೆರಳೆಣಿಕೆಯಷ್ಟು ಪಾತ್ರಗಳು ಮಾತ್ರ ಪ್ರೇಕ್ಷಕರನ್ನು ಸೆಳೆದಿರುತ್ತವೆ.ಕೆಲವೊಂದು ಚಿತ್ರರಸಿಕರು ಅವರ ಅಪಾರ ಅಭಿಮಾನಿ ಗಳಾಗಿರುತ್ತಾರೆ ಎಂದು ಕೊಂಡರೂ ಆ ಸಂಖ್ಯೆ ಇನ್ನೊಂದಷ್ಟು ಎಂಬಂತಿರಬಹುದು ಅಷ್ಟೇ. ಆದರೆ ನರಸಿಂಹರಾಜು ಅಂತಹ ಕಲಾವಿದರಿಗೆ ಈ ಮಾತು ಅನ್ವಯಿಸುವುದಿಲ್ಲ. ಅವರ ಪ್ರತಿ ಪಾತ್ರವೂ ಪ್ರೇಕ್ಷಕರಿಗೆ ಪ್ರಿಯವಾಗಿತ್ತು" ಈ ಮಾತುಗಳ ಪ್ರತಿಯೊಂದು ಅಕ್ಷರಕ್ಷರವೂ ಮೇರು ಹಾಸ್ಯ ಕಲಾವಿದ ನರಸಿಂಹರಾಜು ಅವರಿಗೆ ಸಲ್ಲುವ ಬಹು ದೊಡ್ಡ ಗೌರವವೆಂದು ಹೇಳಬಹುದು. ಇವರಿಂದಲೇ ಹಾಸ್ಯವೋ, ಹಾಸ್ಯದಿಂದಲೇ ಇವರೋ ಎಂಬಂತೆ ಒಟ್ಟಾರೆ ನವರಸಗಳನ್ನು ಇವರೊಬ್ಬರೇ ಕುಡಿದು ಬಂದಂತೆ ಹಾಸ್ಯಾಧಿಪತಿಯಾಗಿದ್ದರು. ಹಾಗೆಯೇ ಚಿತ್ರರಸಿಕರಿಗೆ ಹಾಸ್ಯ ರಸಾಯನವನ್ನು ತೃಪ್ತಿಯಾಗಿ ಉಣಬಡಿಸುತ್ತಿದ್ದರು.

ನರಸಿಂಹರಾಜು ಚಿತ್ರರಂಗಕ್ಕೆ ಕಾಲಿಟ್ಟಿದ್ದೇ ಇಟ್ಟಿದ್ದು ಇಡೀ ಬೆಳ್ಳಿ ತೆರೆಯನ್ನೆಲ್ಲಾ ಆವರಿಸಿಕೊಂಡು ಬಿಟ್ಟಿದ್ದರು. 60ರ ದಶಕದಲ್ಲಿ ಅವರು ಎಷ್ಟೊಂದು ಬೇಡಿಕೆಯ ನಟರಾಗಿದ್ದರೆಂದರೆ ಯಾವುದೇ ಚಿತ್ರವಾಗಲಿ ಅದರಲ್ಲಿ ನರಸಿಂಹರಾಜು ಇರಲೇಬೇಕು. ಅವರಿದ್ದರೆ ಬಾಕ್ಸ್ ಆಫೀಸ್ ಭರ್ತಿ ಎಂಬ ನಂಬಿಕೆಯು ನಿರ್ಮಾಪಕರಲ್ಲಿತ್ತು. ಅದ ರಲ್ಲೂ ವಿಶೇಷವಾಗಿ ರಾಜಕುಮಾರ್ ಚಿತ್ರದಲ್ಲಿ ಇದು ಕಡ್ಡಾಯ. ಪ್ರೇಕ್ಷಕರ ಮತ್ತು ನಿರ್ಮಾಪಕರ ಒಕ್ಕೊರಲ ಒತ್ತಾಯ ಇದಾಗಿತ್ತು. ಹಾಗಾಗಿ ಇದಕ್ಕೆ ತಕ್ಕಂತೆ ಒಂದರ ಹಿಂದೆ ಒಂದು ಸಾಲು ಸಾಲಾಗಿ ರಾಜಕುಮಾರ್ ಮತ್ತು ನರಸಿಂಹ ರಾಜು ಜೋಡಿಯ ಚಿತ್ರಗಳು ಬರುತ್ತಿದ್ದವು. ನಿರ್ಮಾಪಕರ ತಿಜೋರಿಯನ್ನು ತುಂಬಿ ತುಳುಕಿಸುತ್ತಿದ್ದವು. ಬಾಕ್ಸ್ ಆಫೀಸನ್ನು ಛಿಂದಿ ಚಿತ್ರಾನ್ನ ಮಾಡುತ್ತಿದ್ದ ಆ ಕಾಲದ ಬಾಕ್ಸ್ ಆಫೀಸ್‌ನ ಹಿಟ್ ಜೋಡಿಗಳಿವರು.

ರಾಜಕುಮಾರ್ ಹಾಗೂ ನರಸಿಂಹರಾಜು ಅವರ ಜೋಡಿ ಕನ್ನಡ ಚಿತ್ರರಂಗದಲ್ಲಿ ಸಂಭವಿಸಿದ ಮಹದದ್ಭುತಗಳಲ್ಲೊಂದು. ಈ ಜೋಡಿಗೆ ನಟ ಬಾಲಕೃಷ್ಣ ಅವರನ್ನೂ ಖಂಡಿತವಾಗಿಯೂ ಸೇರಿಸಬಹುದಾಗಿದೆ. ಬಿಡುವಿಲ್ಲದ ನಟರಾಗಿದ್ದ ನರಸಿಂಹರಾಜು ಅವರ ಕಾಲ್‌ಶೀಟ್ ಪಡೆದು ದಿನಗಳನ್ನು ಹೊಂದಿಸಿಕೊಳ್ಳಲು ಅಂದು ನಿರ್ಮಾಪಕರಿಗೆ ಕಷ್ಟದ ಕೆಲಸವಾಗಿತ್ತು. "ಅಂದಿನ ದಿನಗಳಲ್ಲಿ ನಿರ್ಮಾಪಕರು, ನಿರ್ದೇಶಕರು ತಮ್ಮ ಸಿನಿಮಾಗಳಿಗೆ ಮೊದಲು ನರಸಿಂಹರಾಜು ಅವರ ದಿನಗಳನ್ನು ಗೊತ್ತುಪಡಿಸಿಕೊಂಡು ಉಳಿದ ನಮ್ಮಂತಹ ಕಲಾವಿದರನ್ನು ಸಂಪರ್ಕಿಸುತ್ತಿದ್ದರು" ಇದು ನರಸಿಂಹರಾಜು ಅವರು ಎಷ್ಟೊಂದು ಬೇಡಿಕೆಯ ನಟ ರಾಗಿದ್ದರೆಂಬುದಕ್ಕೆ ಸ್ವತಃ ವರನಟ ರಾಜಕುಮಾರ್ ರವರೇ ಆಗಾಗ್ಗೆ ಹೇಳುತ್ತಿದ್ದ ಈ ಮಾತುಗಳು ನಿದರ್ಶನವಾಗಿವೆ. ರಾಜಕುಮಾರ್ ಅವರು ಹೇಳಿರುವ ಈ ಮಾತುಗಳು ನರಸಿಂಹರಾಜು ಅವರು ಗಳಿಸಿದ್ದ ಶ್ರೇಷ್ಠತೆಗೆ ಮತ್ತು ಅಂತಹ ಮಾತುಗಳನ್ನು ಹೇಳಿರುವ ರಾಜಕುಮಾರ್ ಅವರ ಸಜ್ಜನಿಕೆ ಮತ್ತು ಹೃದಯ ವೈಶಾಲ್ಯತೆಯ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ.

1923 ಜುಲೈ 24ರಂದು ಜನಿಸಿ 1979 ಜುಲೈ 11ರಂದು ಇಹಲೋಕ ತ್ಯಜಿಸಿ ಹುಟ್ಟು– ಸಾವುಗಳೆರಡನ್ನೂ ಜುಲೈ ತಿಂಗಳಿನಲ್ಲೇ ದಾಖಲಿಸಿ ಹೋಗಿರುವ ರಂಗಭೂಮಿ ಮತ್ತು ಸಿನಿಮಾ ಜಗತ್ತಿನ ಸರ್ವ ಶ್ರೇಷ್ಠ ನಟ ಟಿ.ಆರ್.ನರಸಿಂಹ ರಾಜು ಅವರಿಗೆ ಜನ್ಮ ನೀಡಿದವರು ತಂದೆ ರಾಮರಾಜು, ಇವರು ಬ್ರಿಟಿಷ್ ಸರ್ಕಾರದ ಪೊಲೀಸ್ ಇಲಾಖೆಯಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿದ್ದರು. ತಾಯಿ ವೆಂಕಟ ಲಕ್ಷ್ಮಮ್ಮ ಸುಸಂಸ್ಕೃತ ಕುಟುಂಬದ ಗೃಹಣಿ. ಜನ್ಮಸ್ಥಳ ತೆಂಗು ಬೆಳೆಗೆ ಹೆಸರಾದ ತುಮಕೂರು ಜಿಲ್ಲೆಯ ತಿಪಟೂರು. ಸ್ಥಳ ವಿಶೇಷವೋ ಏನೋ ತಿಪಟೂರು ತೆಂಗಿನ ಮರ ದಷ್ಟೇ ಬಣ್ಣದ ಲೋಕದಲ್ಲಿ ನರಸಿಂಹರಾಜು ಬಹು ಎತ್ತರಕ್ಕೆ ಬೆಳೆದರು. ತಿಪಟೂರು ಕೊಬ್ಬರಿಯಂತೆಯೇ ಕಲಾ ಜಗತ್ತಿನಲ್ಲಿ ಗಟ್ಟಿಯಾಗಿ ಉಳಿದರು. ಗುಬ್ಬಿ ವೀರಣ್ಣ, ಆರ್. ನಾಗೇಂದ್ರರಾವ್, ಸುಬ್ಬಯ್ಯ ನಾಯ್ಡು, ರಾಜಕುಮಾರ್, ಉದಯ್ ಕುಮಾರ್, ಕಲ್ಯಾಣ್‌ಕುಮಾರ್, ಜಿ.ವಿ. ಅಯ್ಯರ್, ಡಿಕ್ಕಿ ಮಾಧವರಾವ್, ರಾಜೇಶ್, ವಿಷ್ಣು ವರ್ಧನ್, ಅಂಬರೀಶ್, ಶ್ರೀನಾಥ್, ದಿನೇಶ್, ಪ್ರಭಾಕರ್, ಪ್ರಥ್ವಿರಾಜ್ ಕಪೂರ್, ಹುಣಸೂರು ಕೃಷ್ಣಮೂರ್ತಿ, ಸುದರ್ಶನ್, ಬಾಲಕೃಷ್ಣ, ವಾದಿರಾಜ್, ದ್ವಾರಕೀಶ್, ಗಂಗಾಧರ್, ರಾಜಾಶಂಕರ್, ವಜ್ರಮುನಿ, ತೂಗುದೀಪ ಶ್ರೀನಿವಾಸ್, ಬಿ.ಎಸ್. ರಂಗ, ಎಂ.ಪಿ. ಶಂಕರ್, ಶಕ್ತಿಪ್ರಸಾದ್, ನಾಗಪ್ಪ, ಶಿವರಾಂ, ಮಾಸ್ಟರ್ ಹಿರಣ್ಣಯ್ಯ, ಕಲ್ಪನಾ, ಭಾರತಿ, ಸಾಹುಕಾರ್ ಜಾನಕಿ, ರಮಾ ದೇವಿ, ಎಂ.ಜಯಶ್ರೀ, ಮಂಜುಳಾ, ಪ್ರತಿಮಾದೇವಿ, ಬಿ. ಜಯ, ಎಂ.ವಿ.ರಾಜಮ್ಮ, ಆರ್.ಟಿ.ರಮಾ, ಚಂದ್ರಕಲಾ, ಪಂಡರೀಬಾಯಿ, ಲೀಲಾವತಿ, ಬಿ. ಸರೋಜಾದೇವಿ, ಜಮುನಾ, ಎಂ.ಎನ್. ಲಕ್ಷ್ಮೀದೇವಿ, ಬಿ.ವಿ.ರಾಧಾ ಮುಂತಾದ ಘಟಾನುಘಟಿ ನಟ ನಟಿಯರ ಜೊತೆ ದಾಖಲೆ ಎನ್ನುವಂತೆ ನಟಿಸಿ 250ಕ್ಕೂ ಹೆಚ್ಚು ಮೌಲಿಕವಾದ ಸದಭಿರುಚಿ ಚಲನಚಿತ್ರಗಳನ್ನು ಕನ್ನಡ ನಾಡಿಗೆ ನೀಡಿ ನರಸಿಂಹ ರಾಜು ಅವರು 'ಚಿರತಾರೆ' ಆಗಿದ್ದಾರೆ.

ಉಸ್ತುವಾರಿ ಸಚಿವರಿಂದ ಚಾ.ಬೆಟ್ಟದಲ್ಲಿ ವಿಶೇಷ ಪೂಜೆ





ಮೈಸೂರು,ಜು.24(ಎಂಟಿವೈ)– ಆಷಾಢ ಮಾಸದ ಶುಕ್ರವಾರದಂದು ನಡೆದ ವಿಶೇಷ ಪೂಜಾ ಮಹೋತ್ಸವ ಯಶಸ್ವಿ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಭಾನುವಾರ ಚಾಮುಂಡಿ ಬೆಟ್ಟಕ್ಕೆ ತೆರಳಿ ನಾಡದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತರಿಗೆ ಲಾಡು ವಿತರಿಸಿದರು.

ಬಿಜೆಪಿ ಮುಖಂಡರೊಂದಿಗೆ ಇಂದು ಬೆಳಗ್ಗೆ ಬೆಟ್ಟಕ್ಕೆ ಆಗಮಿಸಿದ ಸಚಿವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ದೇವಾಲಯ ಹೊರಗೆ ಲಾಡು ಹಂಚಿ, ಮೈಸೂರಿನ ಜನತೆಗೆ ಕೃತಜ್ಞತೆ ಸಲ್ಲಿಸಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಪ್ರಸಕ್ತ ಸಾಲಿನ ಆಷಾಢ ಮಾಸದ ಶುಕ್ರವಾರದಂದು ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ನಾಡಿನ ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸಿ, ದೇವಿಯ ದರ್ಶನ ಪಡೆದು ಪುನೀತರಾಗಿದ್ದಾರೆ. ಕಳೆದ ಎರಡು ವರ್ಷದಿಂದ ಆಷಾಢ ಮಾಸದ ವಿಶೇಷ ಪೂಜಾ ಮಹೋತ್ಸವದಲ್ಲಿ ಭಕ್ತರಿಗೆ ನಿರ್ಬಂಧ ವಿಧಿಸಲಾಗಿತ್ತು. ಈ ವರ್ಷ ಭಕ್ತರಿಗೆ ಅವಕಾಶ ನೀಡಲು ಜಿಲ್ಲಾಡಳಿತ ನಿರ್ಧರಿಸಿತ್ತು. ಹಾಗಾಗಿ ಯಾವುದೇ ಲೋಪವಾಗದಂತೆ ತೀವ್ರ ಕಟ್ಟೆಚ್ಚರವಹಿಸಿ ಸಿದ್ಧತೆ ಮಾಡಿಕೊಂಡಿದ್ದರಿಂದ ವಿಶೇಷ ಪೂಜಾ ಮಹೋತ್ಸವ ಯಶಸ್ವಿಯಾಗಿ ಸಾಗಿದೆ ಎಂದರು.

ಆಷಾಢ ಮಾಸದ ಶುಕ್ರವಾರದ ಪೂಜಾ ಮಹೋತ್ಸವದ ವೇಳೆ ಸಣ್ಣಪುಟ್ಟ ಅಡಚಣೆ ಉಂಟಾಗಿದ್ದಲ್ಲಿ ಕ್ಷಮೆ ಯಾಚಿಸುತ್ತೇನೆ. ಈ ಬಾರಿ ವಿತರಿಸಿದ್ದ ಪಾಸ್‌ನಿಂದ ಗೊಂದಲವಾಗಿತ್ತು. ಆದರಿಂದ ಪಾಸ್ ಕ್ಯಾನ್ಸಲ್ ಮಾಡಲಾಯಿತು. ಆಷಾಢ ವಿಶೇಷ ಪೂಜಾ ಮಹೋತ್ಸವ ಯಶಸ್ವಿಗೆ ಎಲ್ಲಾ ಇಲಾಖೆಗಳು, ಎಲ್ಲಾ ಪಕ್ಷಗಳು ಸೇರಿದಂತೆ ಮೈಸೂರಿನ ಜನತೆ ಸಹಕಾರ ನೀಡಿದ್ದಾರೆ. ಇದೆ ರೀತಿ ಮುಂದಿನ ದಸರಾ ವೇಳೆ ಯಾವುದೇ ತೊಂದರೆ ಆಗದಂತೆ ವ್ಯವಸ್ಥಿತವಾಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಪ್ರವಾಸ ಮಾಡುತ್ತಾರೆ: ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ದೃಷ್ಟಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪ್ರವಾಸ ಮಾಡುತ್ತೇನೆ ಎಂದು ಹೇಳಿದ್ದಾರೆ. 2023ರ ಚುನಾವಣೆಗೆ ನಾನು ಸ್ಪರ್ಧೆ ಮಾಡುವುದಿಲ್ಲ ಬಿಜೆಪಿ ಅಧಿಕಾರಕ್ಕೆ ತರುತ್ತೇನೆ ಎಂದು ಹೇಳಿದ್ದಾರೆ. ಇದರಲ್ಲಿ ಬೇರೆ ಅರ್ಥ ಕಲ್ಪಿಸುವುದು ಸರಿಯಲ್ಲ ಎಂದರು.

ಶಿಕಾರಿಪುರದಿಂದ ವಿಜಯೇಂದ್ರ ಸ್ಪರ್ಧೆ: ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಸ್ಪರ್ಧೆ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಲಿದೆ. ಇದರಲ್ಲಿ ವೈಯಕ್ತಿಕ ತೀರ್ಮಾನ ಇಲ್ಲ. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಎಲ್ಲರು ಬದ್ಧರಾಗಬೇಕು ಎಂದು ಎಸ್.ಟಿ.ಸೋಮಶೇಖರ್ ತಿಳಿಸಿದರು.


ನಿಗಮ ಮಂಡಳಿಗೆ ಅಧ್ಯಕ್ಷರು: ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರ ಆಯ್ಕೆ ವಿಚಾರ ಕೋರ್ ಕಮಿಟಿಗೆ ಬಿಟ್ಟ ವಿಚಾರ. ನಮ್ಮಲ್ಲಿ ಕೋರ್ ಕಮಿಟಿ ಸುಪ್ರೀಂ. ಕೋರ್ ಕಮಿಟಿ ಯಾರನ್ನು ನಿರ್ಧಾರ ಮಾಡುತ್ತಾರೋ ಅದೇ ಅಂತಿಮ. ಇದರಲ್ಲಿ ನಮ್ಮ ನಿರ್ಧಾರವೇನಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖಂಡರಾದ ಶ್ರೀವತ್ಸ, ಮಂಗಳ ಸೋಮಶೇಖರ್, ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ. ಶಶಿಶೇಖರ್ ದೀಕ್ಷಿತ್, ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಸಿ.ಜಿ.ಕೃಷ್ಣ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಉದ್ಯಾನವನಗಳಲ್ಲಿ ಕಟ್ಟಡ ನಿರ್ಮಾಣ

ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲು ಎಂಜಿಪಿ ನಿರ್ಧಾರ

ಮೈಸೂರು, ಜು.24(ಎಂಟಿವೈ)– ಮೈಸೂರಿನ ಉದ್ಯಾನವನಗಳಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಸಂಬಂಧ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ಮೈಸೂರಿನ ಗ್ರಾಹಕ ಪರಿಷತ್ ನಿರ್ಧರಿಸಿದೆ.



ಭಾಮಿ ವಿ.ಶೆಣೈ

ಮೈಸೂರಿನ ಜಯನಗರದ 2ನೇ ಮುಖ್ಯ ರಸ್ತೆಯಲ್ಲಿರುವ ಉದ್ಯಾನವನದಲ್ಲಿ ಕಟ್ಟಡವೊಂದನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೇ ಮೈಸೂರಿನ ಕೆ.ಸಿ.ನಗರ (ಕೆಂಪು ಚೆಲುವಾಜಮ್ಮಣ್ಣಿ ನಗರ)ದಲ್ಲಿರುವ ವೀರಯೋಧ ಎ.ಪಿ.ಪ್ರಶಾಂತ್ ಉದ್ಯಾನದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಕಾಮಗಾರಿ ಆರಂಭಿಸಲಾಗಿದೆ. ಅಲ್ಲದೇ ಮೈಸೂರಿನ ವಿವಿಧೆಡೆ ಉದ್ಯಾನವನಗಳಲ್ಲಿ ನಿಯಮಗಾಳಿಗೆ ತೂರಿ ಕಟ್ಟಡಗಳ ನಿರ್ಮಾಣ ಕಾಮಗಾರಿ ನಡೆಸಲು ಮುಂದಾಗಿದ್ದು, ಹಸರೀಕರಣವಾಗಬೇಕಿದ್ದ ಉದ್ಯಾನವನಗಳು ಕಾಂಕ್ರಿಟ್‌ಮಯವಾಗಿ ರೂಪುಗೊಳ್ಳುತ್ತಿರುವುದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರಿಂದ ಮೈಸೂರು ಗ್ರಾಹಕ ಪರಿಷತ್ ಉದ್ಯಾನವನಗಳ ಸಂರಕ್ಷಣೆಗೆ ಪಣ ತೊಟ್ಟಿದ್ದು, ನ್ಯಾಯಾಲಯದ ಮೊರೆ ಹೋಗುವ ಮೂಲಕ ಉದ್ಯಾನವನಗಳ ರಕ್ಷಣೆಗೆ ಧಾವಿಸಿದೆ.

ಮೊಕದ್ದಮೆ ದಾಖಲಿಸಲು ನಿರ್ಧಾರ: ಮೈಸೂರು ಗ್ರಾಹಕ ಪರಿಷತ್‌ನ ಸಂಸ್ಥಾಪಕ ಭಾಮಿ ವಿ.ಶೆಣೈ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕರ್ನಾಟಕ ಉದ್ಯಾನ (ಆಟದ ಮೈದಾನ, ಖಾಲಿ ಜಾಗ) ಕಾಯ್ದೆ–1985 ಉಲ್ಲಂಘನೆ ಮಾಡಿ ಕಾಂಕ್ರಿಟ್ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಯಾವ ಉದ್ದೇಶಕ್ಕೆ ಉದ್ಯಾನವನ ನಿರ್ಮಿಸಲಾಗಿದೆ ಎಂಬ ಸಾಮಾನ್ಯ ಜ್ಞಾನವೂ ಇಲ್ಲದೇ ಕಾಂಕ್ರಿಟೀಕರಣಗೊಳಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಗ್ರಾಹಕ ಪರಿಷತ್ ವತಿಯಿಂದ ಆಕ್ಷೇಪವನ್ನು ಸಲ್ಲಿಸಲಾಗಿತ್ತು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ನಿಯಮದ ಅನುಸಾರ ಕರ್ನಾಟಕ ಉದ್ಯಾನಗಳ ಕಾಯ್ದೆ ಪ್ರಕಾರ 2.5 ಹೆಕ್ಟೇರ್ ಹಾಗೂ ಅದಕ್ಕಿಂತ ಕಡಿಮೆ ವಿಸ್ತೀರ್ಣದ ಪಾರ್ಕ್‌ಗಳಲ್ಲಿ ಶೇ.5ರಷ್ಟನ್ನು ಭದ್ರತಾ ಸಿಬ್ಬಂದಿಗಳ ಕೊಠಡಿಗಳ ನಿರ್ಮಾಣಕ್ಕೆ ಮಾತ್ರ ಬಳಸಿಕೊಳ್ಳಲು ಅವಕಾಶವಿದೆ. ಅದನ್ನು ಹೊರತುಪಡಿಸಿದರೆ ಬೇರೆ ಯಾವ ಕಟ್ಟಡವನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಈ ನಿಯಮ ತಿಳಿದಿದ್ದರೂ, ಅಧಿಕಾರಿಗಳೇ ನಿಯಮಗಾಳಿಗೆ ತೂರುತ್ತಿದ್ದಾರೆ ಎಂದು ಕಿಡಿಕಾರಿದರು.

ಜಯನಗರದ ಉದ್ಯಾನದಲ್ಲಿ ವಾಯುವಿಹಾರಿಗಳಿಗೆ ವಿಶ್ರಾಂತಿ ಪಡೆದುಕೊಳ್ಳುವುದಕ್ಕಾಗಿ ಕಟ್ಟಡ ಕಟ್ಟುತ್ತಿರುವುದಾಗಿ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ. ಆದರೆ ಅತೀ ದೊಡ್ಡ ಪ್ರಮಾಣದ ಕಟ್ಟಡ ಉದ್ಯಾನವನದಲ್ಲಿ ಅಗತ್ಯವಿರಲಿಲ್ಲ. ಅಲ್ಲದೇ ಕಟ್ಟಡ ಕಟ್ಟುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಈ ಸಂಬಂಧ ಗ್ರಾಹಕರ ಪರಿಷತ್ ವತಿಯಿಂದ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲು ನಿರ್ಧರಿಸಲಾಗಿದೆ ಎಂದರು.

ಸಚಿವ ಸಂಪುಟ ವಿಸ್ತರಣೆ: ಪ್ರತಿಕ್ರಿಯೆಗೆ ನಕಾರ

ಬೆಂಗಳೂರು, ಜು.24– ದೆಹಲಿಯಲ್ಲಿ ಕೇಂದ್ರ ಸರ್ಕಾರ ಇಂದು (ಜುಲೈ 24) ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ನಡೆಸಿದ್ದು, ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗಿಯಾಗಿದ್ದರು. ಸಭೆಯ ಬಳಿಕ ಸಚಿವ ಸಂಪುಟ ವಿಸ್ತರಣೆಯ ಕುರಿತು ದೆಹಲಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ. ಪಕ್ಷದ ಕಡೆಯಿಂದ ಮುಖ್ಯಮಂತ್ರಿಗಳ ಸಾಮಾನ್ಯ ಸಭೆ ನಡೆಯುತ್ತೆ. ಇವತ್ತು ಪ್ರಧಾನಿಗಳ ನೇತೃತ್ವದಲ್ಲಿ ಸಭೆ ನಡೆಯಿತು.



ಸಭೆಯಲ್ಲಿ ದೇಶದ ವಿವಿಧ ಯೋಜನೆಗಳ ಬಗ್ಗೆ ಚರ್ಚೆ ಆಗಿದೆ. ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಚರ್ಚೆ ನಡೆಯಿತು. ಯಾವ್ಯಾವ ರಾಜ್ಯ ಹೇಗೆ ಸಾಧನೆ ಮಾಡಿದೆ ಎಂಬ ಬಗ್ಗೆ ಚರ್ಚೆಯಾಗಿದೆ. ಕಿಸಾನ್ ಸಮ್ಮಾನ್, ಆರ್ಥಿಕ ಪ್ರಗತಿ, ಎನ್‌ಇಪಿ ಬಗ್ಗೆ ಶ್ಲಾಘಿಸಿದ್ದಾರೆ ಎಂದು ಹೇಳಿದ್ದಾರೆ. ನಾಳೆ ಬೆಳಗ್ಗೆ ರಾಷ್ಟ್ರಪತಿ ಪ್ರಮಾಣ ವಚನ ಸ್ವೀಕಾರದಲ್ಲಿ ಭಾಗಿಯಾಗಲಿದ್ದೇನೆ. ಬಳಿಕ ಪಿಯೂಶ್ ಗೋಯೇಲ್, ಭೂಪೇಂದ್ರ ಯಾದವ್ ಭೇಟಿ ಮಾಲಿದ್ದೇನೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.



ಮೈಸೂರಿನ ಒಲಂಪಿಯಾ ಚಿತ್ರಮಂದಿರ ಮುಂಭಾಗ ನೆರವೇರಿದ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಶಾಸಕ ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಪೊಲೀಸ್ ಅಧಿಕಾರಿ ಗೋಪಾಲಕೃಷ್ಣ, ಪೈಲ್ವಾನ್ ಸೇತುರಾಮ್ ಸಿಂಗ್, ಕಾಂಗ್ರೆಸ್ ಮುಖಂಡರಾದ ಉದ್ಬೂರು ಕೃಷ್ಣ, ಟೆನ್ನಿಸ್ ಗೋಪಿ ಅವರನ್ನು ಅಭಿನಂದಿಸಲಾಯಿತು. ಮಹೇಶ್ ಒಲಂಪಿಯಾ, ವಿಶಾಲ್, ಪೈಲ್ವಾನ್ ಶಿವು ರಮ್ಮನಹಳ್ಳಿ, ಸುಣ್ಣದಕೆರೆ ಜೈಸಿಂಹ, ಬಂಡಿಗೇರೆ ಲೋಕಿ, ಯೋಗೇಶ್, ಅವಿನಾಶ್ ಕ್ಯಾತಮಾರನಹಳ್ಳಿ ಮತ್ತಿತರರಿದ್ದರು.

ಪಟಾಕಿ ಉದ್ಯಮಿ ಮನೆಯಲ್ಲಿ ಸ್ಫೋಟ: 6 ಮಂದಿ ಸಾವು

ಬಿಹಾರ, ಜು.24– ಪಟಾಕಿ ಉದ್ಯಮಿಯೊಬ್ಬರ ಮನೆಯಲ್ಲಿ ಸ್ಫೋಟ ಸಂಭವಿಸಿ ಆರು ಮಂದಿ ಸಾವನ್ನಪ್ಪಿರುವ ದಾರುಣ ಘಟನೆ ಬಿಹಾರದ ಸರನ್ ಜಿಲ್ಲೆಯ ಖೈರಾ ಪೊಲೀಸ್ ಠಾಣೆ ವ್ಯಾಪ್ತಿಯ ಖುದಾಯಿ ಬಾಗ್ ಗ್ರಾಮದಲ್ಲಿ ನಡೆದಿದೆ.

ಉದ್ಯಮಿಯನ್ನು ಶಬೀರ್ ಹುಸೇನ್ ಎಂದು ಗುರುತಿಸಲಾಗಿದೆ. ಸ್ಫೋಟದಿಂದಾಗಿ ಮನೆಯ ಒಂದು ಭಾಗ ಸ್ಫೋಟಗೊಂಡಿದ್ದು, ಉಳಿದ ಭಾಗಕ್ಕೆ ಬೆಂಕಿ ಹೊತ್ತಿಕೊಂಡಿದೆ. ಪೊಲೀಸರ ಪ್ರಕಾರ ಮನೆಯು ನದಿಯ ದಡದಲ್ಲಿದ್ದು ಮನೆಯ ಪ್ರಮುಖ ಭಾಗವು ಕುಸಿದಿದೆ. ಅವಶೇಷಗಳಡಿ ಸಿಲುಕಿ ಗಾಯಗೊಂಡಿದ್ದ ಎಂಟು ಮಂದಿಯನ್ನು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ದುರಂತ ನಡೆದ ಗ್ರಾಮವು ಜಿಲ್ಲಾ ಕೇಂದ್ರ ಛಾಪ್ರಾದಿಂದ ಸುಮಾರು 30 ಕಿಮೀ ದೂರದಲ್ಲಿದೆ. ಸ್ಫೋಟದಿಂದಾಗಿ ಮನೆ ಕುಸಿದು 6 ಮಂದಿ ಸಾವನ್ನಪ್ಪಿದ್ದಾರೆ. ಅವಶೇಷಗಳಡಿ ಸಿಲುಕಿರುವ ಜನರನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ. ಸ್ಫೋಟದ ಹಿಂದಿನ ಕಾರಣವನ್ನು ನಾವು ತನಿಖೆ ಮಾಡುತ್ತಿದ್ದೇವೆ. ಫೋರೆನ್ಸಿಕ್ ತಂಡ ಮತ್ತು ಬಾಂಬ್ ನಿಷ್ಕ್ರಿಯ ದಳದವರು ಸಹ ಪರಿಶೀಲನೆಯಲ್ಲಿ ತೊಡಗಿದ್ದಾರೆ ಎಂದು ಸರನ್ ಎಸ್ಪಿ ಸಂತೋಷ್ ಕುಮಾರ್ ತಿಳಿಸಿದ್ದಾರೆ. ಪೊಲೀಸರ ಪ್ರಕಾರ ಸ್ಫೋಟ ಸಂಭವಿಸಿದ ಮನೆಯೊಳಗೆ ಪಟಾಕಿಗಳನ್ನು ತಯಾರಿಸಿ ಸಂಗ್ರಹಿಸಿಡಲಾಗಿತ್ತು 1 ಗಂಟೆ ಕಾಲ ನಿರಂತರವಾಗಿ ಸ್ಫೋಟ ಸಂಭವಿಸಿತ್ತು.

ಸೋನಿಯಾ ಗಾಂಧಿ ಇಡಿ ವಿಚಾರಣೆ

ಮಂಗಳವಾರ ಶಾಂತಿಯುತ ಪ್ರತಿಭಟನೆ

ಬೆಂಗಳೂರು, ಜು.24– ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮಂಗಳವಾರ ಎರಡನೇ ಬಾರಿಗೆ ವಿಚಾರಣೆಗೆ ಹಾಜರಾಗಲು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಜಾರಿ ನಿರ್ದೇಶನಾಲಯ ಸಮನ್ಸ್ ನೀಡಿರುವುದರಿಂದ ಅಂದು ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರನ್ನು 50 ಗಂಟೆಗಳ ಕಾಲ ವಿಚಾರಣೆ ನಡೆಸಿದ ನಂತರ ಇದೀಗ ಸೋನಿಯಾ ಗಾಂಧಿ ಅವರಿಗೆ ಇಡಿ ಸಮನ್ಸ್ ನೀಡಿದೆ. ಇದು ಅನಗತ್ಯವಾದದ್ದು ಎಂದು ಹೇಳಿದ್ದಾರೆ. ವಿಚಾರಣೆ ನೆಪದಲ್ಲಿ ಗಾಂಧಿ ಕುಟುಂಬಕ್ಕೆ ಕಿರುಕುಳ ನೀಡಲಾಗುತ್ತಿದೆ. ಇಡಿ ತನಿಖೆ ವಿರೋಧಿಸಿ ಜುಲೈ 26 ರಂದು ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುವುದು, ಇದರಲ್ಲಿ ಭಾಗವಹಿಸುವಂತೆ ಎಲ್ಲರನ್ನೂ ಮನವಿ ಮಾಡುತ್ತೇನೆ ಎಂದು ಅವರು ತಿಳಿಸಿದರು.



ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮಳೆ ಹಾನಿ ಪ್ರದೇಶಗಳಿಗೆ ಉಸ್ತುವಾರಿ ಸಚಿವ ನಾಗೇಶ್ ಭೇಟಿ

ಮಳೆಗಾಲ ಮುಗಿದ ನಂತರ ತಜ್ಞರಿಂದ ವೈಜ್ಞಾನಿಕ ಅಧ್ಯಯನ



- ಮರಳು ಮೂಟೆ ಜೋಡಿಸಿದ ನಂತರ ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಲಘುವಾಹನಗಳ ಸಂಚಾರಕ್ಕೆ ಅವಕಾಶ
- ಆಗಸ್ಟ್‌ವರೆಗೂ ಸಂಬಂಧಿಕರ ಮನೆಗಳಲ್ಲಿ ಇರುವುದು ಒಳಿತು

ಮಡಿಕೇರಿ,ಜು.24– ಭಾರೀ ಮಳೆಯಿಂದ ಕುಸಿತಗೊಂಡ ತಡೆಗೋಡೆ ಸ್ಥಳ ಹಾಗೂ ಜಲಸ್ಫೋಟಗೊಂಡು ಭೂ ಕುಸಿತಗೊಂಡ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಡೆಗೋಡೆ ಕಾಮಗಾರಿ ವೀಕ್ಷಿಸಿದ ಸಚಿವರು, ಲೋಕೋಪಯೋಗಿ ಅಧಿಕಾರಿಗಳಿಂದ ದುರಸ್ತಿ ಕಾಮಗಾರಿಗಳ ಕುರಿತು ಮಾಹಿತಿ ಪಡೆದರು. ಪ್ರಸ್ತುತ ಸ್ಥಳದಲ್ಲಿ ಮರಳು ಮೂಟೆಗಳ ಜೋಡಣೆ ಕಾರ್ಯ ನಡೆಸಲಾಗುತ್ತಿದೆ. ಇದರಿಂದ ತಡೆಗೋಡೆ ಒತ್ತಡವನ್ನು ಕಡಿಮೆಗೊಳಿಸಲಾಗುತ್ತಿದೆ. ಈ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಸಚಿವರ ಭೇಟಿಯ ಸಂದರ್ಭ ರಸ್ತೆ ಬಂದ್ ಆಗಿರುವುದರಿಂದ 11 ಕಿ.ಮೀ ಸುತ್ತು ಬಳಸಿ ಈ ಭಾಗದ ಮನೆಗಳಿಗೆ ಆಗಮಿಸಬೇಕಾದ ಅನಿವಾರ್ಯತೆ ಇದೆ ಹೀಗಾಗಿ ಲಘು ವಾಹನಗಳಿಗೆ ಸಂಚಾರಕ್ಕೆ ಅವಕಾಶ ನೀಡುವಂತೆ ಸ್ಥಳೀಯ ನಿವಾಸಿಗಳು ಮನವಿ ಮಾಡಿದರು. ಕೊಡಗಿನ ಭೌಗೋಳಿಕ ಪರಿಸರಕ್ಕೆ ಹೊಂದಾಣಿಕೆಯಾಗದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಅದರ ಕಾಮಗಾರಿಯೂ ಕಳಪೆಯಾಗಿದೆ ಎಂದು ಸ್ಥಳೀಯರು ಆರೋಪಿಸಿದರು. ತಾತ್ಕಾಲಿಕ ದುರಸ್ತಿ ಕಾರ್ಯದ ಬಳಿಕ ಸ್ಥಳೀಯರ ಅನುಕೂಲಕ್ಕಾಗಿ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡುವುದಾಗಿ ಇದೇ ವೇಳೆ ಸಚಿವರು ಭರವಸೆ ನೀಡಿದರು.

ಜೋಡುಪಾಲ ಸಮೀಪದ ಸೀಮೆ ಹುಲ್ಲು ಕಜೆ ಪ್ರದೇಶಕ್ಕೆ ತೆರಳಿದ ಸಚಿವರು ನೈಜ್ಯ ಸ್ಥಿತಿಗತಿಗಳನ್ನು ವೀಕ್ಷಿಸಿದರು. ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿದ ಸಚಿವ ನಾಗೇಶ್ ಸದ್ಯದ ಪರಿಸ್ಥಿತಿಗಳ ಕುರಿತು ಮಾಹಿತಿ ಪಡೆದರು.

ಭೂ ಕುಸಿತ ಪ್ರದೇಶದಲ್ಲಿ ಬಿರುಕುಗಳಿವೆ. ಕೆಲ ದಿನಗಳ ಹಿಂದೆ ಮಳೆ ಸುರಿದ ಹಿನ್ನೆಲೆಯಲ್ಲಿ ಭೂ ಕುಸಿತವಾಗಿದೆ. 2018ರಲ್ಲಾದ ಭೂ ಕುಸಿತದ ಬಳಿಕ ಈ ಪ್ರದೇಶಗಳಲ್ಲಿ ಯಾವುದೇ ರೀತಿಯ ಹಾನಿಗಳು ಸಂಭವಿಸಿಲ್ಲ. ಮನೆಗಳಲ್ಲಿ ಜಾನುವಾರುಗಳಿದ್ದು, ಅವುಗಳನ್ನು ಬಿಟ್ಟು ತೆರಳಲು ಸಾಧ್ಯವಿಲ್ಲ ಎಂದು ಗ್ರಾಮಸ್ಥರು ಸಚಿವರಿಗೆ ವಿವರಿಸಿದರು.

ಮಳೆ ಹೆಚ್ಚಾದಲ್ಲಿ ಮತ್ತೆ ಭೂ ಕುಸಿಯುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸಚಿವರು ಮನವಿ ಮಾಡಿದರು. ಸಂಬಂಧಿಕರ ಮನೆಗೆ ತೆರಳಿದವರಿಗೂ ಅಗತ್ಯ ಪಡಿತರಗಳನ್ನು ನೀಡಲಾಗುತ್ತದೆ. ಜನ ಜಾನುವಾರುಗಳಿಗೆ ಹುಲ್ಲನ್ನೂ ಒದಗಿಸಲಾಗುತ್ತದೆ. ಆ ಬಗ್ಗೆ ಯಾವುದೇ ಆತಂಕ ಬೇಡ ಎಂದು ಸಚಿವರು ಗ್ರಾಮಸ್ಥರಿಗೆ ಮನವರಿಕೆ ಮಾಡಿದರು.

ಆಗಸ್ಟ್ ಕೊನೆಯವರೆಗೆ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆಯುವುದು ಸೂಕ್ತ. ಅಲ್ಲಿಯವರೆಗೆ ಪಡಿತರ ಕಿಟ್ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ್ ಗ್ರಾಮಸ್ಥರಿಗೆ ವಿವರಿಸಿದರು.

ಬಳಿಕ ಜೋಡುಪಾಲಕ್ಕೆ ತೆರಳಿದ ಸಚಿವರು, ಮಳೆ ಹಾನಿಗೆ ತುತ್ತಾದ ಸೇತುವೆಯನ್ನು ಪರಿಶೀಲಿಸಿದರು. ಆ ವ್ಯಾಪ್ತಿಯಲ್ಲಿ ನೆಲಸಿರುವ ಕುಟುಂಬಗಳ ಮಾಹಿತಿ ಪಡೆದರಲ್ಲದೇ, ತಕ್ಷಣವೇ ಸೇತುವೆಯನ್ನು ದುರಸ್ತಿಪಡಿಸುವಂತೆ ಸಂಬಂಧಪಟ್ಟ ಇಂಜಿನಿಯರ್‌ಗೆ ಸೂಚಿಸಿದರು.

ವೈಜ್ಞಾನಿಕ ಅಧ್ಯಯನಕ್ಕೆ ಕ್ರಮ: ಮಳೆಹಾನಿ ಪ್ರದೇಶ ವೀಕ್ಷಣೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ನಾಗೇಶ್, 2018ರಲ್ಲಿ ಈ ಭಾಗದಲ್ಲಿ ಭೂ ಕುಸಿತವಾಗಿದ್ದು, ಬಿರುಕುಗಳಿವೆ. ಆ ಹಿನ್ನೆಲೆಯಲ್ಲಿ ಮಳೆ ಹೆಚ್ಚಾಗಿ ಮತ್ತೆ ಭೂ ಕುಸಿತವಾಗಿದೆ. ಈ ಹಿಂದಿನ ಭೂ ಕಂಪನಕ್ಕೂ ಭೂ ಕುಸಿತಕ್ಕೂ ಸಂಬಂಧವಿಲ್ಲ. ಕಂಪನ ಕೇಂದ್ರ ಈ ಪ್ರದೇಶ ದೂರದಲ್ಲಿರುವ ಕಾರಣ ಕುಸಿತವಾಗಿಲ್ಲ ಎಂದು ತಜ್ಞರು ವರದಿ ನೀಡಿದ್ದಾರೆ.

ಮಳೆಗಾಲ ಮುಗಿದ ಬಳಿಕ ಭೂ ಕುಸಿತಕ್ಕೆ ನಿಖರ ಕಾರಣ ಅಧ್ಯಯನ ನಡೆಸಲು ತಜ್ಞರನ್ನು ಕರೆಸಲಾಗುತ್ತದೆ. ಮಳೆಗಾಲ ಪ್ರಾರಂಭದಲ್ಲೇ ಸರಕಾರ ಈ ಕುರಿತು ನಿರ್ಣಯ ಕೈಗೊಂಡಿದೆ ಎಂದು ಮಾಹಿತಿ ನೀಡಿದರು. ಈ ಸ್ಥಳಗಳಲ್ಲಿರುವ ಕುಟುಂಬಗಳನ್ನು ಸಂಬಂಧಿಕರ ಮನೆಗಳಿಗೆ ತೆರಳುವಂತೆ ಮನವರಿಕೆ ಮಾಡಲಾಗಿದೆ. ಈ ಕುರಿತು ಶಾಸಕರು ಆ ಕುಟುಂಬಗಳ ಮನವೊಲಿಸಲಿದ್ದಾರೆ ಎಂದರು.

ಲಘು ವಾಹನಕ್ಕೆ ಅವಕಾಶ: ಜಿಲ್ಲಾಡಳಿತ ಭವನದ ತಡೆಗೋಡೆ ಕುಸಿತವಾದ ಸ್ಥಳದಲ್ಲಿ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ತಡೆಗೋಡೆಯ ಒತ್ತಡ ಕೆಳ ಭಾಗದಲ್ಲಿರುವ ಕಾರಣ ಕಬ್ಬಿಣದ ರಾಡ್‌ಗಳನ್ನು ಬಳಸಿಕೊಂಡು ಮರಳು ಮೂಟೆಗಳನ್ನು ಜೋಡಿಸಲಾಗುತ್ತಿದೆ. ಈ ಕಾಮಗಾರಿ ಮುಕ್ತಾಯದ ಬಳಿಕ ಸ್ಥಳೀಯರ ಅನುಕೂಲಕ್ಕಾಗಿ ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ದ್ವಿಚಕ್ರ, ಆಟೋರಿಕ್ಷಾ ಹಾಗೂ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡಲು ಶಾಸಕರು ಮತ್ತು ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಚಿವ ನಾಗೇಶ್ ಹೇಳಿದರು.

ಈ ಸಂದರ್ಭ ಶಾಸಕರಾದ ಕೆಜಿ. ಬೋಪಯ್ಯ, ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಮಡಿಕೇರಿ ಉಪ ವಿಭಾಗ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಮಡಿಕೇರ ತಹಶೀಲ್ದಾರ್ ಮಹೇಶ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಹಾಜರಿದ್ದರು.

ನಾಳೆ ಚೆನ್ನಯ್ಯನ ಕೋಟೆಯಲ್ಲಿ ಕಾರ್ಗಿಲ್ ವಿಜಯೋತ್ಸವ



ಸಿದ್ದಾಪುರ, ಜು.24– ಕಾರ್ಗಿಲ್ ವಿಜಯೋತ್ಸವ ಹಾಗೂ ಎಪಿಜೆ ಅಬ್ದುಲ್ ಕಲಾಂ ಅವರ ಸ್ಮರಣೆ ಕಾರ್ಯಕ್ರಮ ಜು.26 ರಂದು ಚೆನ್ನಯ್ಯನ ಕೋಟೆ ಶಾಲಾ ಮೈದಾನದಲ್ಲಿ ರಕ್ತದಾನ ಶಿಬಿರ ಸೇರಿದಂತೆ ಸಾಧಕರನ್ನು ಗೌರವಿಸುವ ಕಾರ್ಯಕ್ರಮ ನಡೆಯಲಿದೆ ಎಂದು ಸರ್ವ ಸಹಾಯಿ ಮಿತ್ರ ಮಂಡಳಿಯ ಅಧ್ಯಕ್ಷ ಅಬ್ದುಲ್ ರೆಹಮಾನ್ ತಿಳಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಗ್ರಾಮದಲ್ಲಿ ಸೌಹಾರ್ದಯುತವಾಗಿ ಸಮಾಜಸೇವೆಯೊಂದಿಗೆ ದೇಶಪ್ರೇಮದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಸಾಧನೆ ಮಾಡಿದ ಶಾಲಾ ವಿದ್ಯಾರ್ಥಿಗಳು ಸಮಾಜ ಸೇವಕರನ್ನ ಗೌರವಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಕಾರದೊಂದಿಗೆ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕೇರಳದ ಉರಗತಜ್ಞ ವಾವ ಸುರೇಶ್ ಸೇರಿದಂತೆ ಹಲವರನ್ನು ಸನ್ಮಾನಿಸಿ ಗೌರವಿಸಲಾಗುತ್ತಿದ್ದು, ಕಾರ್ಯಕ್ರಮದಲ್ಲಿ ಸಮಾಜ ಸೇವಕರು, ದಾನಿಗಳು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭ ಸಮಿತಿಯ ಕಾರ್ಯದರ್ಶಿ ಶಶಿ ಅಚ್ಯುತನ್, ಗೌರವ ಅಧ್ಯಕ್ಷ ವಿಜು ನಾರಾಯಣ್ ಸೇರಿದಂತೆ ಪದಾಧಿಕಾರಿಗಳು ಹಾಜರಿದ್ದರು.

ಕೊಡಗಲ್ಲಿ ಭತ್ತದ ಕೃಷಿ ಚಟುವಟಿಕೆ ಆರಂಭ

ಮುಂಗಾರು ಮಳೆ ಇಳಿಕೆ, ನಾಟಿ ಕಾರ್ಯಕ್ಕೆ ಸಸಿ ಮಡಿಗಳ ಸಿದ್ಧತೆ



ಮಡಿಕೇರಿ,ಜು.24– ಕೊಡಗಲ್ಲಿ ಮುಂಗಾರು ಮಳೆ ಇಳಿಮುಖವಾಗಿದ್ದು, ಭತ್ತದ ಕೃಷಿ ಚಟುವಟಿಕೆಗಳು ಗರಿಗೆದರಲಾರಂಭಿಸಿದೆ. ಗದ್ದೆಗಳಲ್ಲಿ ಭತ್ತದ ಸಸಿ ಮಡಿಗಳ ಸಿದ್ಧತೆಯಲ್ಲಿ ಕೃಷಿಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಹೆಚ್ಚಾಗಿ ಜುಲೈ ಅಂತ್ಯ ಮತ್ತು ಆಗಸ್ಟ್ ಮೊದಲ ವಾರದಲ್ಲಿ ನಾಟಿ ಕಾರ್ಯಗಳು ನಡೆಯುತ್ತವೆ. ಪ್ರಸಕ್ತ ಸಾಲಿನ ಭಾರೀ ಮಳೆಯಿಂದ ಜೂನ್ ತಿಂಗಳಲ್ಲಿ ಕೃಷಿ ಚಟುವಟಿಕೆ ಒಂದಷ್ಟು ಹಿನ್ನಡೆ ಕಂಡಿತ್ತಾದರೂ, ಪ್ರಸ್ತುತ ಭತ್ತದ ಗದ್ದೆಗಳನ್ನು ನಾಟಿ ಕಾರ್ಯಕ್ಕೆ ಅಣಿಗೊಳಿಸುವ, ಸಸಿ ಮಡಿಗಳನ್ನು ಸಜ್ಜುಗೊಳಿಸುವ ಕಾರ್ಯ ಭರದಿಂದ ಸಾಗಿದೆ.

ಈಗಾಗಲೇ ನಾಪೋಕ್ಲು ವಿಭಾಗದ ಕೆಲವೆಡೆ ನಾಟಿ ಕಾರ್ಯ ನಡೆದಿದೆಯಾದರೂ ಬಹುತೇಕ ಕಡೆಗಳಲ್ಲಿ ಇನ್ನಷ್ಟೆ ಭತ್ತದ ನಾಟಿ ಕಾರ್ಯ ನಡೆಯಬೇಕಾಗಿದೆ. ಕೃಷಿ ಇಲಾಖೆಯ ಅಂಕಿ ಅಂಶಗಳಂತೆ ಜಿಲ್ಲಾ ವ್ಯಾಪ್ತಿಯಲ್ಲಿ 32 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಕೃಷಿ ನಡೆಯುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಈ ವಿಸ್ತೀರ್ಣ 29 ಮತ್ತು 30 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಅಥವಾ ಅದಕ್ಕಿಂತಲೂ ಕೆಳಕ್ಕಿಳಿದಿರುವುದು ಕಂಡು ಬರುತ್ತಿದೆ. ಹಿಂದೊಮ್ಮೆ ಕೊಡಗು ಭತ್ತದ ಕಣಜವೆಂಬ ಖ್ಯಾತಿಯನ್ನು ಪಡೆದಿತ್ತಾದರು, ಇಂದು ಹಲವಾರು ಕಾರಣಗಳಿಂದ ಭತ್ತದ ಕೃಷಿ ಚಟುವಟಿಕೆಗಳಿಂದ ಕೃಷಿಕ ದೂರ ಸರಿಯುತ್ತಿರುವ ಅಪಾಯ ಕಂಡು ಬರುತ್ತಿದೆ. ಈ ಒಂದು ಬೆಳವಣಿಗೆ ಕೊಡಗಿನ ಒಟ್ಟು ಕೃಷಿ ಪರಿಸರದ ಚಿತ್ರಣವನ್ನು ನಿಧಾನವಾಗಿ ಬದಲಿಸುತ್ತಿದೆ.

ದಕ್ಷಿಣ ಕೊಡಗಿನ ವಿರಾಜಪೇಟೆ, ಪೊನ್ನಂಪೇಟೆ ತಾಲೂಕು ವ್ಯಾಪ್ತಿಯಲ್ಲಿ, ಸೋಮವಾರಪೇಟೆ ತಾಲೂಕಿನ ಕೆಲವೆಡೆ, ಮಡಿಕೇರಿ ತಾಲೂಕಿನ ನಾಪೋಕ್ಲು ಮೊದಲಾದೆಡೆಗಳಲ್ಲಿ ಕಾಡಾನೆ ಮತ್ತು ಇತರೆ ವನ್ಯಮೃಗಗಳ ಉಪಟಳದಿಂದ ಕೃಷಿಕನಿಗೆ ತಾನು ಬೆಳೆದಿರುವ ಫಸಲನ್ನು ಪಡೆದುಕೊಳ್ಳಲು ಸಾಧ್ಯವಾಗದಿರುವ ಪರಿಸ್ಥಿತಿ ಇದೆ. ಬಂಡವಾಳ ಹೂಡಿ ನಡೆಸಿದ ಭತ್ತದ ಕೃಷಿ ಫಸಲು ಕಾಡಾನೆ, ಕಾಡು ಹಂದಿ ಹಾವಳಿಯಿಂದ ಧ್ವಂಸವಾಗುವ ಪ್ರಕರಣಗಳು ಹತ್ತು ಹಲವು ಕಂಡು ಬರುತ್ತಿದೆ. ಇದರಿಂದಾಗಿ ಕೃಷಿಕ ಭತ್ತದ ಕೃಷಿಯಿಂದ ವಿಮುಖನಾಗುತ್ತಿದ್ದಾನೆ.

ಭತ್ತ ಕೃಷಿಯ ಆದಾಯದಿಂದ ವಂಚಿತವಾಗುವ ಕೃಷಿಕ ಇತರೆ ಸಾಧ್ಯತೆಗಳತ್ತ ಮುಖ ಮಾಡಿದ ಪರಿಣಾಮ, ಜಿಲ್ಲೆಯ ಹಲವೆಡೆಗಳಲ್ಲಿ ಭತ್ತದ ಕೃಷಿ ಭೂಮಿ ನಿಧಾನವಾಗಿ ನಿವೇಶನಗಳಾಗಿ, ಜನವಸತಿಯ ಪ್ರದೇಶಗಳಾಗಿ ಪರಿವರ್ತಿತವಾಗುತ್ತಿದೆ. ಇದು ಅತ್ಯಂತ ಕಳವಳಕಾರಿ ಬೆಳವಣಿಗೆಯಾಗಿದ್ದು, ಭತ್ತದ ಕೃಷಿಯಿಂದ ಭೂಮಿಯ ಅಂತರ್ಜಲ ಮಟ್ಟ ಈ ಹಿಂದೆ ಉತ್ತಮವಾಗಿತ್ತಾದರೆ, ಪ್ರಸ್ತುತ ಆ ಮಟ್ಟ ಜಿಲ್ಲೆಯ ಹಲವೆಡೆಗಳಲ್ಲಿ ಕೆಳಕ್ಕಿಳಿದಿದೆ. ಪರಿಣಾಮ ಬೇಸಿಗೆಯ ಅವಧಿಯಲ್ಲಿ ಜಿಲ್ಲೆಯ ಹಲವೆಡೆಗಳಲ್ಲಿ ಕುಡಿಯುವ ನೀರಿಗೂ ತತ್ವಾರ ಉಂಟಾಗುತ್ತಿದೆ.

ನಾಯಕ ಸಮುದಾಯ ಉನ್ನತ ಶಿಕ್ಷಣಕ್ಕೆ ಒತ್ತು ನೀಡಬೇಕು

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ



ಚಾಮರಾಜನಗರ, ಜು.24–ಉನ್ನತ ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ನಾಯಕ ಸಮುದಾಯದ ವಿದ್ಯಾರ್ಥಿಗಳು ಐಎಎಸ್, ಐಪಿಎಸ್‌ನಂತಹ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ ನೀಡಿದರು.

ನಗರದ ಶ್ರೀಮಹರ್ಷಿ ವಾಲ್ಮೀಕಿ ಭವನದಲ್ಲಿ ತಾಲೂಕು ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ನಾಯಕ ನೌಕರರ ಸ್ನೇಹ ಬಳಗ ಹಾಗೂ ಮಹರ್ಷಿ ಶ್ರೀವಾಲ್ಮೀಕಿ ನೌಕರರ ಸೌಹಾರ್ದ ಸಹಕಾರ ನಿಯಮಿತ ಸಹಯೋಗದಲ್ಲಿ ಆಯೋಜಿಸಿದ್ದ 9ನೇ ವರ್ಷದ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮುದಾಯದ ಮಕ್ಕಳು ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಬಾರದು. ಇಂದು ಸರ್ಕಾರ ಪೋಷಕರಿಗೆ ಹೊರೆಯಾಗದ ರೀತಿಯಲ್ಲಿ ಉಚಿತ ಶಿಕ್ಷಣ ನೀಡುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಉನ್ನತ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು.

ನಾಯಕ ಜನಾಂಗದ ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ ಮಾತನಾಡಿದರು. ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸರ್ಕಾರಿ ನಿವೃತ್ತ ನೌಕರನ್ನು ಸನ್ಮಾನಿಸಲಾಯಿತು. ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ತಾಲೂಕು ದಾಸೋಹ ಅಧಿಕಾರಿ ವೆಂಕಟೇಶ್, ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಕಾಂಗ್ರೆಸ್ ಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ತಾಪಂ ಮಾಜಿ ಅಧ್ಯಕ್ಷ ಎಚ್.ವಿ.ಚಂದ್ರು, ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷ ಬಿ.ಕಾಂ.ಮಹದೇವ ನಾಯಕ, ಜಿಪಂ ಮಾಜಿ ಸದಸ್ಯರಾದ ಎಸ್.ಸೋಮನಾಯಕ, ರಮೇಶ್, ಯ. ರಾಜುನಾಯಕ, ಮಲ್ಲೇಶ್, ಚಾ.ಸಿ.ಸೋಮನಾಯಕ, ಕೃಷ್ಣನಾಯಕ, ಮಹೇಂದ್ರ, ಸಂಘದ ಗೌರವಾಧ್ಯಕ್ಷೆ ಮೀನಾಕ್ಷಿ, ಉಪಾಧ್ಯಕ್ಷರಾದ ರಂಗನಾಥ, ಆರ್.ನಾಗನಾಯಕ, ಕಾರ್ಯದರ್ಶಿ ಆರ್.ಚಂದ್ರು, ಖಜಾಂಚಿ ಕರಿಯಪ್ಪ, ನಿರ್ದೇಶಕರಾದ ವಿ.ವನಜಾಕ್ಷಿ, ನಾಗಲಕ್ಷ್ಮಿ, ಎಸ್.ಲಿಂಗರಾಜು, ಎಂ.ಉಮೇಶ್, ಕೆ.ಆರ್.ನಾಗರಾಜು, ಜಿ.ರಾಜೇಶ್, ಕಿಟ್ಟು, ಆರ್.ಕೃಷ್ಣನಾಯಕ, ಶಿವಕುಮಾರ್ ಇತರರಿದ್ದರು.

ಬಸವಾದಿ ಶರಣರ ತತ್ವಗಳನ್ನು ಜನರಿಗೆ ತಲುಪಿಸುವ ಕಾರ್ಯ ಶ್ಲಾಘನೀಯ



ಚಾಮರಾಜನಗರ, ಜು.24–ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಬಸವಾದಿ ಶರಣರ ತತ್ವಗಳನ್ನು ಜನರಿಗೆ ತಲುಪಿಸುವ ಕಾರ್ಯ ಶ್ಲಾಘನೀಯ ಎಂದು ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತಮಠದ ಚನ್ನಬಸವ ಸ್ವಾಮೀಜಿ ಹೇಳಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತಮಠದ ಬಸವರಾಜ ಸ್ವಾಮೀಜಿ ಅನುಭವ ಮಂಟಪದ ಸಭಾಂಗಣದಲ್ಲಿ ಚಾಮರಾಜನಗರ ತಾಲೂಕು ಸಂಗಮ ಗೃಹ ನಿರ್ಮಾಣ ಸಹಕಾರ ಸಂಘ, ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಸವೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ಪ್ರಸಕ್ತ ಸಾಲಿನ ವಾರ್ಷಿಕ ಮಹಾಸಭೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಇಲಾಖೆಯ ನಿವೃತ್ತ ನೌಕರರ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಂಗಮ ಗೃಹ ನಿರ್ಮಾಣ ಸಹಕಾರ ಸಂಘ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಸವೇಶ್ವರ ಕೃಷಿ ಪತ್ತಿನ ಸಹಕಾರ ಸಂಘಗಳು ಪ್ರತಿ ವರ್ಷ ತಮ್ಮ ಸಂಘಗಳ ಕಾರ್ಯ ಚಟುವಟಿಕೆಗಳ ಕುರಿತ ಅರಿವು, ಜೊತೆಗೆ ಸಂಘದ ಗುರಿ–ಸಾಧನೆಗಳ ಬಗ್ಗೆ ಮಾಹಿತಿ ಒದಗಿಸುವುದು ಸೇರಿದಂತೆ ಬಸವಾದಿಶರಣರ ಜೀವನಸಾಧನೆ ಕುರಿತು ಅವರ ತತ್ವಗಳನ್ನು ಜನಮಾನಸದಲ್ಲಿ ಬಿತ್ತುವ ಶರಣಚಿಂತನಾ ಕಾರ್ಯಕ್ರಮ, ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಸಮಾಜಕ್ಕೆ ಅವರು ನೀಡುತ್ತಿರುವ ದೊಡ್ಡ ಕೊಡುಗೆ ಎಂದರು.

ಬಸವೇಶ್ವರಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದವಲ್ಲಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ, ದ್ವಿತೀಯ ಪಿಯುನಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ 40ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತರಾದ ನೌಕರರನ್ನು ಸನ್ಮಾನಿಸಲಾಯಿತು. ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ್ ಸೇರಿದಂತೆ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಸವೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು, ಸದಸ್ಯರಿದ್ದರು.

ಬಸ್ ಡಿಕ್ಕಿ: ಯುವಕ ಸಾವು

ಕೊಳ್ಳೇಗಾಲ, ಜು.24–ಸಾರಿಗೆ ಬಸ್ ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಶನಿವಾರ ರಾತ್ರಿ ಜರುಗಿದೆ.

ಹನೂರು ತಾಲೂಕಿನ ಹೂಗ್ಯಂ ನಿವಾಸಿ ಮೌನೇಶ್(22) ಮೃತಪಟ್ಟ ಯುವಕ. ಈತ ಜೆಬಿಸಿ ಚಾಲಕನಾಗಿದ್ದು ತನ್ನ ಸಂಬಂಧಿ ಬೈಕ್‌ನಲ್ಲಿ ಉಗನಿಯದಲ್ಲಿ ರಾತ್ರಿ ಕೆಲಸ ಮುಗಿಸಿಕೊಂಡು ಪ್ರವಾಸಿ ಮಂದಿರ ರಸ್ತೆಯಲ್ಲಿ ಬಸ್ ನಿಲ್ದಾಣಕ್ಕೆ ಬರುತ್ತಿದ್ದ.

ಡಿಪೋಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್(ಕೆಎ10, ಎಫ್0510) ಡಿಕ್ಕಿ ಹೊಡೆದ ಪರಿಣಾಮ ಮೌನೇಶ್ ತೀವ್ರವಾಗಿ ಗಾಯಗೊಂಡರು. ತಕ್ಷಣ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಬೆಳಗ್ಗೆ ಅಸುನೀಗಿದ್ದಾರೆ. ಅಪಘಾತಕ್ಕೆ ಬಸ್ ಚಾಲನ ಅಜಾಗರೂಕತೆಯೇ ಕಾರಣ ಎನ್ನಲಾಗಿದೆ. ಈ ಸಂಬಂಧ ಕೊಳ್ಳೇಗಾಲ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ರಾಹ್ಮಣರು ಸಾಮಾಜಿಕ ಸಾಮರಸ್ಯ ಹೆಚ್ಚಿಸಬೇಕು

ವಾಗ್ಮಿ ಹಿರೇಮಗಳೂರು ಕಣ್ಣನ್ ಸಲಹೆ



ಗುಂಡ್ಲುಪೇಟೆ, ಜು.24– ಬ್ರಾಹ್ಮಣರು ಕೇವಲ ಜಾತಿಗೆ ಸೀಮಿತವಾಗದೆ ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ ಹಾಗೂ ದೇಶದ ಸಂಸ್ಕಾರದ ಪಾಲನೆ ಬಗ್ಗೆ ಕಲಿಸುವುದರೊಂದಿಗೆ ಜಾತಿ ಸಂಘರ್ಷದ ಬೆಂಕಿ ನಂದಿಸಿ, ಸಾಮಾಜಿಕ ಸಾಮರಸ್ಯ ಹೆಚ್ಚಿಸಬೇಕು ಎಂದು ವಾಗ್ಮಿ ಹಾಗೂ ಕನ್ನಡ ಪುರೋಹಿತ ಹಿರೇಮಗಳೂರು ಕಣ್ಣನ್ ಹೇಳಿದರು.

ಪಟ್ಟಣದ ಸಿಎಂಎಸ್ ಕಲಾ ಮಂದಿರದಲ್ಲಿ ತಾಲೂಕು ಬ್ರಾಹ್ಮಣ ಸಭಾದಿಂದ ಆಯೋಜಿಸಿದ್ದ ಆಚಾರ್ಯತ್ರಯರ ಜಯಂತಿ ಹಾಗೂ ವಿಪ್ರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಭಾರತೀಯ ಸಂಸ್ಕೃತಿಗೆ ತನ್ನದೇ ಆದ ಮಹತ್ವವಿದೆ. ನಮ್ಮ ಸಂಸ್ಕೃತಿಯ ದೀಪಹಚ್ಚಿ ಬೆಳಗಿಸಿದರೆ ಇದರ ಬೆಳಕಿನಲ್ಲಿ ಎಲ್ಲರೂ ಉತ್ತಮ ಜೀವನ ನಡೆಸಬಹುದು ತಿಳಿಸಿದರು.

ಇದನ್ನೂ ಪಟ್ಟಣದ ಶ್ರೀ ವಿಜಯನಾರಾಯಣಸ್ವಾಮಿ ದೇವಸ್ಥಾನದ ಆವರಣದಿಂದ ಅಲಂಕೃತ ರಥದಲ್ಲಿ ಆಚಾರ್ಯತ್ರಯರ ಭಾವಚಿತ್ರಗಳನ್ನು ಮೆರವಣಿಗೆ ಮೂಲಕ ಸಮಾವೇಶ ಸ್ಥಳಕ್ಕೆ ಕೊಂಡೊಯ್ಯಲಾಯಿತು. ಕಾರ್ಯಕ್ರಮದಲ್ಲಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 50 ವರ್ಷ ದಾಂಪತ್ಯ ಪೂರೈಸಿದ ಜೋಡಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಬ್ರಾಹ್ಮಣ ಸಂಘದ ಜಿಲ್ಲಾಧ್ಯಕ್ಷ ಜಿ.ಎಂ.ಹೆಗಡೆ, ತಾಲೂಕು ಅಧ್ಯಕ್ಷ ಕೆ.ವಿ.ಗೋಪಾಲಕೃಷ್ಣ ಭಟ್, ಕೌಂಡಿನ್ಯ ವಿಪ್ರ ಬಳಗದ ಅಧ್ಯಕ್ಷ ಆನಂದ್‌ಕುಮಾರ್, ಶಾರದಾ ಸತ್ಸಂಗದ ಗಾಯತ್ರಿ ಅನಂತಕೃಷ್ಣಕುಮಾರ್, ಸಾಹಿತಿ ಜಿ.ಜಿ.ಮಂಜುನಾಥ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಉಪಾಧ್ಯಕ್ಷೆ ದೀಪಿಕಾ ಸೇರಿದಂತೆ ವಿಪ್ರಬಳಗದ ಸದಸ್ಯರು ಹಾಗೂ ಸಮಾಜದ ಮುಖಂಡರು ಇದ್ದರು.

ಮೈಸೂರು ಜಿಲ್ಲಾ ಪತ್ರಕರ್ತರ ಕ್ರೀಡಾಕೂಟಕ್ಕೆ ಚಾಲನೆ



ಮೈಸೂರು, ಜು.24(ಎಂಕೆ)– ಮೈಸೂರು ವಿವಿ ಪೆವಿಲಿಯನ್ ಮೈದಾನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿರುವ 2 ದಿನಗಳ 'ಪತ್ರಕರ್ತರ ಕ್ರೀಡಾಕೂಟ'ಕ್ಕೆ ಅಂತರರಾಷ್ಟ್ರೀಯ ಕ್ರೀಡಾಪಟು ಎಂ.ಆರ್.ಧನುಷಾ ಭಾನುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪತ್ರಕರ್ತರು ನನ್ನ ಪ್ರತಿಭೆ ಗುರುತಿಸಿ ಮತ್ತಷ್ಟು ಸಾಧನೆ ಮಾಡುವಂತೆ ಪ್ರೇರೇಪಿಸಿದ್ದಾರೆ. ನನ್ನ ವೈಯಕ್ತಿಕ ಸಾಧನೆಗೆ ಪ್ರೋತ್ಸಾಹಿಸಿದವರೆಲ್ಲರೂ ಇಂದು ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದೇ ರೀತಿ ನಿತ್ಯವೂ ಪತ್ರಕರ್ತರು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಇದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರಲಿದೆ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಕೊರೊನಾ ಹಿನ್ನೆಲೆ 2 ವರ್ಷದ ನಂತರ ಪತ್ರಕರ್ತರ ಕ್ರೀಡಾಕೂಟ ಆಯೋಜನೆ ಮಾಡಲಾಗಿದೆ. ಪತ್ರಿಕಾ ಕಚೇರಿಯಲ್ಲಿಯೇ ದಿನದ ಹೆಚ್ಚು ಕಾಲ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುವ ಡೆಸ್ಕ್ ಉದ್ಯೋಗಿಗಳಿಗೆ ಕ್ರೀಡೆ ಮುಖ್ಯ. ಜಾತಿ, ಮತ, ಹಣ, ವೃತ್ತಿ ಬೇಧವಿಲ್ಲದೆ ಎಲ್ಲರೂ ಒಂದೇ ಎಂಬ ಭಾವನೆ ಕ್ರೀಡೆಯಿಂದ ಸಾಧ್ಯವಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ದಿನದಲ್ಲಿ ಒಂದು ಗಂಟೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ ಎಂದು ಸಲಹೆ ನೀಡಿದರು. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಕೃಷ್ಣ ಮಾತನಾಡಿದರು.

ಬಹುಮಾನ ವಿತರಣೆ: 'ಪತ್ರಕರ್ತರ ಕ್ರೀಡಾಕೂಟ'ದ ಮೊದಲ ದಿನದಲ್ಲಿ ನಡೆದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಪತ್ರಕರ್ತರು ಹಾಗೂ ಅವರ ಕುಟುಂಬಸ್ಥರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಬಹುಮಾನ ವಿತರಣೆ ಮಾಡಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ನಿರ್ದೇಶಕ ಶಿವಮೂರ್ತಿ ಜುಪ್ತಿಮಠ, ಸುರೇಶ್, ಕೃಷ್ಣ, ರಾಜ್ಯಸಮಿತಿ ಸದಸ್ಯ ರಾಘವೇಂದ್ರ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ, ಸದಸ್ಯ ಎಸ್.ಕೆ.ಚಂದ್ರಶೇಖರ್ ಮತ್ತಿತರರಿದ್ದರು.

ಮರ ಕಡಿಯಬೇಡಿ, ಬೆಳೆಸಿ: ಸಾಲುಮರದ ತಿಮ್ಮಕ್ಕ

● ಮೃಗಾಲಯದಲ್ಲಿ 'ಯುವ ಸಂಘಟನೆ'ಗೆ ಚಾಲನೆ ನೀಡಿದ ವೃಕ್ಷಮಾತೆ ● ಡಿಸೆಂಬರ್‌ವರೆಗೆ ಪ್ರತಿ ಭಾನುವಾರ ನಡೆಯುವ ಶಿಬಿರ



ಮೈಸೂರು, ಜು.24(ಎಸ್‌ಬಿಡಿ)– ಎಲ್ಲರೂ ಮರ ಬೆಳೆಸಬೇಕು ಎಂದು ಪದ್ಮಶ್ರೀ ಪುರಸ್ಕೃತ ವೃಕ್ಷಮಾತೆ, ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅವರು ಕರೆ ನೀಡಿದ್ದಾರೆ.

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಆಯೋಜಿಸಿರುವ 2022ನೇ ಸಾಲಿನ 'ಯುವ ಸಂಘಟನೆ' ಶಿಬಿರಕ್ಕೆ ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡಿದ ಅವರು, ಚಿಕ್ಕವರು, ದೊಡ್ಡವರು ಎಲ್ಲರೂ ಮರ ಬೆಳೆಸಬೇಕು. ಆಗ ಊರು, ಊರ ದೇವರು, ತಂದೆ–ತಾಯಿ, ಮಕ್ಕಳು ಎಲ್ಲರಿಗೂ ಒಳ್ಳೆಯದಾಗುತ್ತದೆ. ಯಾರೂ ಮರ ಕಡಿಯಬೇಡಿ, ಎಲ್ಲರೂ ಬೆಳೆಸಿ ಎಂದು ಮುಗ್ಧ ಮಾತುಗಳಿಂದಲೇ ಮನವಿ ಮಾಡಿದರು.

ಮಕ್ಕಳು ಚೆನ್ನಾಗಿ ಓದಬೇಕು, ಬರೆಯಬೇಕು. ಎಲ್ಲರಿಗೂ ಒಳ್ಳೆಯದಾಗಲಿ, ಸುಖ, ನೆಮ್ಮದಿ, ಸಂಪತ್ತು ಸಿಗಲಿ. ಏನಾದರೂ ಕಷ್ಟ ಬಂದರೂ ಅದು ಬಯಲು ಬಿದ್ದು ಹೋಗಲಿ(ಆ ಕ್ಷಣವೇ ಪರಿಹಾರವಾಗಲಿ) ಎಂದು ನೆರೆದಿದ್ದವರಿಗೆ ಇದೇ ವೇಳೆ ಆಶೀರ್ವದಿಸಿದರು.

ವೃಕ್ಷ ಒಂದು ಪ್ರಪಂಚ: ಸಂರಕ್ಷಣಾ ನುಡಿಗಳನ್ನಾಡಿದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯೂ ಆದ ಮುಖ್ಯ ವನ್ಯಜೀವಿ ಪರಿಪಾಲಕ ವಿಜಯಕುಮಾರ್ ಗೋಗಿ ಅವರು ಮರ ಎಂದರೆ ರೆಂಬೆ–ಕೊಂಬೆ, ಕಾಂಡ, ತೊಗಟೆ, ಎಲೆ ಹೊಂದಿರುವ ಒಂದು ರೂಪ ಮಾತ್ರವಲ್ಲ, ಅದೊಂದು ಪ್ರಪಂಚ. ಕೀಟಗಳು, ಪಕ್ಷಿಗಳು, ಅಳಿಲು ಹೀಗೆ ಹಲವು ಜೀವಿಗಳಿಗೆ ಆಶ್ರಯ ತಾಣ. ಮನುಷ್ಯ ಮನೆ ಕಳೆದುಕೊಂಡಾಗ ಎಷ್ಟು ನೊಂದುಕೊಳ್ಳುತ್ತಾನೋ ಹಾಗೆಯೇ ಒಂದು ಮರ ಕಡಿದಾಗ ಅಪಾರ ಜೀವಿಗಳಿಗೆ ವೇದನೆಯಾಗುತ್ತದೆ. ಮರ ಕಡಿಯುವಾಗ ಅದನ್ನು ಆಶ್ರಯಿಸಿರುವ ಜೀವಿಗಳ ಬಗ್ಗೆ ಒಂದು ಕ್ಷಣ ಯೋಚಿಸಬೇಕು. ಅನಿವಾರ್ಯವಾಗಿ ಕಡಿಯಬೇಕಾದಲ್ಲಿ ಒಂದು ಮರಕ್ಕೆ ಹತ್ತರಂತೆ ಜೀವಿಗಳಿಗೆ ಆಹಾರ ಹಾಗೂ ಆಶ್ರಯವಾಗುವ ಗಿಡಗಳನ್ನು ನೆಟ್ಟು ಬೆಳೆಸಬೇಕು. ಇದರಿಂದ ಪೂಜೆಗಿಂತ ಹೆಚ್ಚಿನ ಪುಣ್ಯಫಲ ಸಿಗುತ್ತದೆ ಎಂದು ಅಭಿಪ್ರಾಯಿಸಿದರು.

ಮರದಿಂದ ಮಣ್ಣು ಫಲವತ್ತತೆ: ರಾಸಾಯನಿಕ ಗೊಬ್ಬರ ಕಾರ್ಖಾನೆ ಸಾಕಷ್ಟಿದ್ದು, ಕೃಷಿಯಲ್ಲಿ ಯಥೇಚ್ಛವಾಗಿ ಬಳಸಲಾಗುತ್ತಿದೆ. ರಾಸಾಯನಿಕ ಗೊಬ್ಬರ ಸಂಶೋಧನೆಗಿಂತ ಹಿಂದೆ ಮಣ್ಣಿನಲ್ಲಿ ಫಲವತ್ತತೆ ಇರಲಿಲ್ಲವೇ? ಗಿಡ–ಮರಗಳು ಉತ್ತಮವಾಗಿ ಬೆಳೆದಿರಲಿಲ್ಲವೇ? ಎಂದು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕು. ಮರಗಳು ಭೂಮಿಯ ಫಲವತ್ತತೆಗೊಳಿಸುತ್ತವೆ. 20ರಿಂದ 40 ಅಡಿ ಭೂಮಿ ಹಾಳಕ್ಕೆ ಬೇರುಬಿಟ್ಟು ಅಲ್ಲಿನ ಸತ್ವವನ್ನು ಹೀರಿ ಬೆಳೆಯುತ್ತವೆ. ನಂತರ ಉದುರುವ ಎಲೆಗಳಿಂದ ಭೂಮಿಯ ಐದಾರು ಇಂಚು ಮೇಲ್ಪದರ ಗೊಬ್ಬರದ ಅಂಶ ಉತ್ಪತ್ತಿಯಾಗುತ್ತದೆ. ಪ್ರತಿಯೊಂದು ಮರವೂ ಗೊಬ್ಬರ ತಯಾರಿಸುವ ಚಿಕ್ಕ ಕಾರ್ಖಾನೆ. ಪಶು–ಪಕ್ಷಿಗಳಿಗೆ ಆಶ್ರಯ ನೀಡುವ ಮರ, ಮಣ್ಣಿನ ಫಲವತ್ತತೆ ಹೆಚ್ಚಿಸಿ, ನೀರಿನ ಅಂಶವನ್ನು ಹಿಡಿದಿಡುತ್ತದೆ ಎಂದು ತಿಳಿಸಿದರು.

ಕೃಷಿಯೂ ನಿಸರ್ಗದ ಭಾಗ: ನಿಸರ್ಗಕ್ಕೆ ಧಕ್ಕೆ ಮಾಡಬಾರದು. ಪ್ರಕೃತಿಯ ವಿರುದ್ಧವಾಗಿ ಮಾಡುವ ಕೆಲಸ ಶಾಶ್ವತವಲ್ಲ. ಭೂಮಿಯನ್ನು ಆಳಕ್ಕೆ ಕತ್ತರಿಸಬಾರದು. ಈ ರೀತಿಯ ಕಾರಣಗಳಿಂದಲೇ ಪಶ್ಚಿಮ ಘಟ್ಟಗಳಲ್ಲಿ ಭೂಕುಸಿತವಾಗುತ್ತಿದೆ ಎನ್ನಲಾಗುತ್ತಿದೆ. ಶತಮಾನದ ಪ್ರವಾಹದ ಗರಿಷ್ಠ ಗಡಿಯಲ್ಲಿ ನಿರ್ಮಾಣ ಕಾರ್ಯ ನಡೆಸಬಾರದು. ನಿರ್ಲಕ್ಷಿಸಿದರೆ ಪ್ರತಿಬಾರಿ ಪ್ರವಾಹದಿಂದ ಆಘಾತ ಅನುಭವಿಸಬೇಕಾಗುತ್ತದೆ. ಕೃಷಿಯೂ ನಿಸರ್ಗದ ಒಂದು ಭಾಗವಾಗಿರುವುದರಿಂದ ಮೂಲ ಸ್ವರೂಪ ಉಳಿಸಿಕೊಳ್ಳುವುದು ಬಹಳ ಮುಖ್ಯ. ಮರ ಪ್ರಧಾನ ಕೃಷಿಗೆ ಆದ್ಯತೆ ನೀಡಬೇಕು. ಜಮೀನಿನ ಸುತ್ತ ಹಣ್ಣಿನ ಗಿಡಗಳನ್ನಾದರೂ ಬೆಳೆಸಬೇಕು. ಅದರಿಂದ ಜೀವಿಗಳಿಗೆ ಆಹಾರ, ಆಶ್ರಯ ಕಲ್ಪಿಸುವುದರ ಜೊತೆಗೆ ಭೂಮಿ ಫಲವತ್ತತೆಗೂ ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಕಾಡು ಪರಿಶುದ್ಧ: ನಿಸರ್ಗ ಹಾಗೂ ಮಾನವ ನಿರ್ಮಿತ ಪ್ರಪಂಚದ ನಡುವೆ ವ್ಯತ್ಯಾಸವಿದೆ. ಕಾಡಿನಿಂದ ಹರಿದು ನದಿ ಸೇರುವ ನೀರನ್ನು ನಾವೆಲ್ಲಾ ಬಳಸುತ್ತೇವೆ. ಕಾಡು ಪ್ರಾಣಿಗಳು ಬಳಸಿದ್ದರೂ ಆ ನೀರು ಶುದ್ಧವಾಗಿರುತ್ತದೆ. ಆದರೆ ಮನುಷ್ಯ ಬಳಸಿದ ನೀರನ್ನು ಮತ್ತೆ ಯಾವ ಜೀವಿಯೂ ಉಪಯೋಗಿಸುವುದಿಲ್ಲ. ಅರಣ್ಯ ಇಲಾಖೆ ಪರಿಶ್ರಮದಿಂದ ಶೇ.23ರಷ್ಟು ಕಾಡನ್ನು ಕಾಯ್ದುಕೊಳ್ಳಲಾಗಿದೆ. ಚಿಕ್ಕವರಿದ್ದಾಗಲೇ ಗಿಡ ನೆಟ್ಟು ಬೆಳೆಸುವುದನ್ನು ರೂಢಿಸಿಕೊಂಡರೆ ವೃಕ್ಷಮಾತೆ, ಶತಾಯುಷಿ ಸಾಲುಮರದ ತಿಮ್ಮಕ್ಕನವರಂತೆ ಸಾವಿರಾರು ಮರ ಬೆಳೆಸಬಹುದು ಎಂದು ನೆರೆದಿದ್ದ ಶಿಬಿರಾರ್ಥಿ ಮಕ್ಕಳಿಗೆ ಕಿವಿಮಾತು ಹೇಳಿದರು.

3 ದಶಕದಿಂದ ಶಿಬಿರ : ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜೀತ ಕುಲಕರ್ಣಿ ಮಾತನಾಡಿ, ಮನೋರಂಜನೆ ಮಾತ್ರವಲ್ಲದೆ ಜೀವ ವೈವಿಧ್ಯತೆ ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ 30 ವರ್ಷದಿಂದ 'ಯುವ ಸಂಘಟನೆ' ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ಇಂದಿನಿಂದ ಡಿಸೆಂಬರ್‌ವರೆಗೆ ಪ್ರತಿ ಭಾನುವಾರ 12ರಿಂದ 18 ವರ್ಷದ ಮಕ್ಕಳು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಿಂದಿನ ಶಿಬಿರಗಳಲ್ಲಿ ಭಾಗಿಯಾದವರು ವಿವಿಧ ಕಾರ್ಯಕ್ಷೇತ್ರಗಳಲ್ಲಿದ್ದರೂ ಪರಿಸರ ಕಾಳಜಿ ಮೆರೆಯುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಹುಲಿ ಮತ್ತು ಆನೆ ಯೋಜನೆ) ಜಗತ್ ರಾವ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ಆಡಳಿತ ಮಂಡಳಿ ಸದಸ್ಯರಾದ ಗೋಕುಲ್ ಗೋವರ್ಧನ್, ಜ್ಯೋತಿ ರೇಚಣ್ಣ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ವನ್ಯಜೀವಿ ವಿಭಾಗದ ಡಾ.ಕರಿಕಾಳನ್, ಮೈಸೂರು ವಿಭಾಗದ ಕಮಲಾ ಕರಿಕಾಳನ್, ಪರಿಸರ ಪ್ರೇಮಿ ಭಾನು ಮೋಹನ್, ಸಾಲುಮರದ ತಿಮ್ಮಕ್ಕ ಅವರ ಸಾಕುಮಗ ಉಮೇಶ್, ಮೃಗಾಲಯದ ಸ್ವಯಂ ಸೇವಕರು, ಶಿಬಿರಾರ್ಥಿ ಮಕ್ಕಳು ಮತ್ತಿತರರು ಉಪಸ್ಥಿತರಿದ್ದರು.



ಇಂದಿನಿಂದ ಕೆಆರ್‌ಎಸ್ ಸುತ್ತಮುತ್ತ ಪ್ರಾಯೋಗಿಕ ಸ್ಫೋಟ..!

7 ದಿನಗಳ ಕಾಲ ಪರೀಕ್ಷಾರ್ಥ ಸ್ಫೋಟ ನಡೆಸಲಿರುವ ವಿಜ್ಞಾನಿಗಳು



ಮಂಡ್ಯ, ಜು.24– ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಡೆಸುವುದರಿಂದ ಜಲಾಶಯಕ್ಕೆ ಅಪಾಯವಿದೆಯೇ ಎಂಬುದರ ಬಗ್ಗೆ ಅಧ್ಯಯನ ನಡೆಸಲು ಜು.25ರಿಂದ 31ರವರೆಗೆ ಪ್ರಾಯೋಗಿಕ ಸ್ಫೋಟ ನಡೆಸಲು ಜಿಲ್ಲಾಡಳಿತ ಸಿದ್ಧತೆ ಆರಂಭಿಸಿದ್ದು, ಈ ಸಂಬಂಧ ಭಾನುವಾರ ವಿಜ್ಞಾನಿಗಳ ತಂಡ ಸ್ಥಳ ಗುರುತು ಮಾಡುವ ಕೆಲಸ ಆರಂಭಿಸಿದ್ದಾರೆ.

ಕೆಆರ್‌ಎಸ್ ಜಲಾಶಯದ ಸುರಕ್ಷತೆ ಹಾಗೂ ಗಣಿಗಾರಿಕೆಯ ಸ್ಫೋಟದಿಂದ ಆಗುವ ತೊಂದರೆಯ ಬಗ್ಗೆ 7 ದಿನಗಳ ಕಾಲ ವಿಜ್ಞಾನಿಗಳ ತಂಡ ಅಧ್ಯಯನ ನಡೆಸಲಿದ್ದು, ಜಾರ್ಖಂಡ್, ಧನ್‌ಬಾದ್ ಮೂಲದ ಸಿಎಸ್‌ಐಆರ್–ಸಿಐಎಂಎಫ್‌ಆರ್ ವಿಜ್ಞಾನಿಗಳ ತಂಡ ಪ್ರಾಯೋಗಿಕ ಸ್ಫೋಟ ನಡೆಸಿ ಅಧ್ಯಯನ ಮಾಡಲಿದ್ದಾರೆ. ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ಸೇರಿದಂತೆ ಇತರೆ ಆಯ್ದ ಕಲ್ಲು ಕ್ವಾರೆಗಳಲ್ಲಿ ಟ್ರಯಲ್ ಬ್ಲಾಸ್ಟಿಂಗ್‌ಗೆ ವಿಜ್ಞಾನಿಗಳಿಂದ ಸಕಲ ಸಿದ್ಧತೆ ಆರಂಭಗೊಂಡಿದ್ದು, ಇದರಿಂದ ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ ನಿಷೇಧ ಮಾಡುವ ಬಗ್ಗೆ ಸುರಕ್ಷಿತ ವಲಯ ಗುರುತಿಸಲಾಗುವುದು.

ಜಲಾಶಯದ 20 ಕಿ.ಮೀ ವ್ಯಾಪ್ತಿಯೊಳಗೆ ಕಲ್ಲು ಗಣಿಯಿಂದ ಕೆಆರ್‌ಎಸ್ ಜಲಾಶಯಕ್ಕೆ ಅಪಾಯವಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ತಜ್ಞರು 2018ರಲ್ಲಿ ವರದಿಯ ಶಿಫಾರಸಿನಂತೆ ಸರ್ಕಾರ ಗಣಿಗಾರಿಕೆ ನಿಷೇಧಿಸಿತ್ತು.

ಜಲಾಶಯದ ಬಳಿಯೇ ಹೆಚ್ಚು ಅಧ್ಯಯನ ನಡೆಸುವಂತೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೈನಿಂಗ್ ಫ್ಯೂಯಲ್ ರಿಸರ್ಚ್ (ಸಿಎಸ್‌ಐಆರ್– ಸಿಐಎಂಎಫ್‌ಆರ್) ಸೂಚಿಸಿದೆ. ಇದರಿಂದ ಜಲಾಶಯಕ್ಕೆ ಆಗುವ ಅಪಾಯದ ಸತ್ಯಾಸತ್ಯತೆ ತಿಳಿದುಕೊಳ್ಳಲು ಸಾಧ್ಯವಾಗಲಿದೆ.

ಏಳು ದಿನಗಳ ಕಾಲ ನಡೆಯುವ ಪ್ರಾಯೋಗಿಕ ಸ್ಫೋಟದಿಂದ ಭೂಮಿಯೊಳಗೆ ಆಗುವ ಕಂಪನದ ತೀವ್ರತೆ, ಇದರಿಂದ ಅಣೆಕಟ್ಟೆಗೆ ಆಗುವ ಅಪಾಯ, ಫ್ಲೈರಾಕ್‌ಶಬ್ಧ, ಏರ್‌ಬ್ಲಾಸ್ಟ್ ಸೇರಿದಂತೆ ವಿವಿಧ ರೀತಿಯಲ್ಲಿ ಅಧ್ಯಯನ ನಡೆಸಲಾಗುವುದು. ಜೊತೆಗೆ, ಜಲಾಶಯದ ಸುತ್ತ ಸ್ಫೋಟದಿಂದ ಆಗುವ ಬದಲಾವಣೆ ಏನು ಎಂಬುದರ ಬಗ್ಗೆಯೂ ಸೂಕ್ಷ್ಮವಾಗಿ ಅಧ್ಯಯನ ನಡೆಯಲಿದೆ.

ಇನ್ನು ಈ ಬ್ಲಾಸ್ಟ್ ಅನ್ನು ನಡೆಸದಂತೆ ರೈತ ಮುಖಂಡರು ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ವಿರೋಧಿಸಿದ್ದಾರೆ. ಇದು ಅವೈಜ್ಞಾನಿಕ ಟ್ರಯಲ್ ಬ್ಲಾಸ್ಟ್ ಆಗಿದ್ದು, ಇದರಿಂದ ಅನುಕೂಲಕ್ಕಿಂತ ಅನಾನುಕೂಲತೆಯೇ ಹೆಚ್ಚು ಎಂದು ಅವರು ಹೇಳಿದ್ದಾರೆ.

ಕೆಆರ್‌ಎಸ್ ವ್ಯಾಪ್ತಿಯಲ್ಲಿ ಮತ್ತೊಮ್ಮೆ ಗಣಿಗಾರಿಕೆಗೆ ಅವಕಾಶ ನೀಡಲ್ಲ

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್ ಎಚ್ಚರಿಕೆ



ಪಾಂಡವಪುರ, ಜು.24– ಸರ್ಕಾರ ಹಾಗೂ ಜಿಲ್ಲಾಡಳಿತ ಗಣಿ ಮಾಲೀಕರ ಒತ್ತಡಕ್ಕೆ ಮಣಿದು ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟಿಂಗ್ ನಡೆಸಿ, ಮತ್ತೊಮ್ಮೆ ಗಣಿಗಾರಿಕೆಗೆ ಅವಕಾಶ ನೀಡಲು ಹುನ್ನಾರ ನಡೆಸುತ್ತಿದೆ. ಇದಕ್ಕೆ ರೈತ ಸಂಘ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್ ಎಚ್ಚರಿಕೆ ನೀಡಿದರು.

ಪಟ್ಟಣದ ರೈತ ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣದಲ್ಲಿ ಮೈಸೂರು ಮಹರಾಜರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರವಿದೆ. ಅರಮನೆಯ ಚಿನ್ನಾಭರಣವನ್ನು ಮಾರಾಟ ಮಾಡಿ ಡ್ಯಾಂ ನಿರ್ಮಿಸಿದ್ದಾರೆ. ಆದರೆ, ಇಂದಿನ ಸರ್ಕಾರಗಳು ಹೊಸ ಅಣೆಕಟ್ಟೆಗಳನ್ನು ನಿರ್ಮಾಣ ಮಾಡದಿದ್ದರೂ ಪರವಾಗಿಲ್ಲ. ಇರುವಂತಹ ಪಾರಂಪರಿಕ ಕಟ್ಟಡ, ಅಣೆಕಟ್ಟೆಗಳನ್ನು, ನೀರಾವರಿ ಸೌಕರ್ಯಗಳನ್ನು ಉಳಿಸಿ ಮುಂದಿನ ತಲೆಮಾರಿಗೆ ಉಳಿಸಬೇಕು. ಇವತ್ತಿನ ರಾಜಕಾರಣಿಗಳಿಗೆ ಮಹಾರಾಜರಿಗೆ ಇದ್ದಂತಹ ದೂರದೃಷ್ಟಿಯ ಕೊರತೆ ಇದೆ. ಕೆಲವು ಮಂದಿಯ ಹಿತದೃಷ್ಟಿಯಿಂದ ಗಣಿಗಾರಿಕೆಗೆ ಅವಕಾಶ ನೀಡಿ ಅಣೆಕಟ್ಟೆಯನ್ನು ನಾಶಮಾಡಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಬಿ ಬೆಟ್ಟದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿರುವುದರ ವಿರುದ್ಧ ನಮ್ಮ ನಾಯಕರಾದ ಕೆ.ಎಸ್.ಪುಟ್ಟಣ್ಣಯ್ಯ ಅವರು ಸಾಕಷ್ಟು ಹೋರಾಟ ನಡಸಿದ್ದರು. ಬಳಿಕ ರೈತಸಂಘ ಸೇರಿದಂತೆ ಹಲವು ಸಂಘಟನೆಗಳ ಹೋರಾಟದ ಫಲವಾಗಿ ಹಾಗೂ ಕೆಆರ್‌ಎಸ್ ಅಣೆಕಟ್ಟೆಯ ಸುರಕ್ಷತೆಯ ಹಿತದೃಷ್ಟಿಯಿಂದ ಅಣೆಕಟ್ಟೆಯ 20 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸಲಾಯಿತು. ಆದರೆ, ಮತ್ತೆ ಗಣಿಗಾರಿಕೆಗೆ ಅವಕಾಶ ನೀಡಲು ಟ್ರಯಲ್ ಬ್ಲಾಸ್ಟಿಂಗ್ ನಡೆಸಲಾಗುತ್ತಿದೆ ಎಂದು ದೂರಿದರು.

ಬೇಬಿ ಬೆಟ್ಟದ ಸುತ್ತಮುತ್ತಲಿನ ರೈತರು, ಗ್ರಾಮಸ್ಥರು, ನಾನಾ ಸಂಘಟನೆಗಳು ಟ್ರಯಲ್ ಬ್ಲಾಸ್ಟ್‌ಗೆ ಸಾಕಷ್ಟು ವಿರೋಧ ವ್ಯಕ್ತಪಡಿಸಿದರೂ ಟ್ರಯಲ್ ಬ್ಲಾಸ್ಟ್ ಮಾಡಲು ಜಿಲ್ಲಾಡಳಿತ ಮುಂದಾಗಿರುವುದು ಸರಿಯಲ್ಲ. ಮಹಾರಾಜರು ನೀಡಿದ ಕೊಡುಗೆ ಉಳಿಸಿಕೊಳ್ಳಲು ಅವಕಾಶ ನೀಡಬೇಕು. ಕೂಡಲೇ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಬೇಕು. ಇಲ್ಲವಾದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಲಕ್ಷ್ಮೀಗೌಡ, ಮಂಜುನಾಥ್, ರಘು, ಚಿಟ್ಟನಹಳ್ಳಿ ಮಹೇಶ್, ಮಹದೇವು, ಕಾಳೇಗೌಡ ಸೇರಿದಂತೆ ಇತರರು ಇದ್ದರು.

ಟ್ರಯಲ್ ಬ್ಲಾಸ್ಟ್ ವಿರೋಧಿಸಿ ಇಂದು ಪ್ರತಿಭಟನೆ

ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಟ್ರಯಲ್ ಬ್ಲಾಸ್ಟ್ ವಿರೋಧಿಸಿ ಜು.25ರ ಸೋಮವಾರ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಎ.ಎಲ್.ಕೆಂಪೂಗೌಡರ ನೇತೃತ್ವದಲ್ಲಿ ನೂರಾರು ರೈತ ಸಂಘದ ಕಾರ್ಯಕರ್ತರು 'ಗೋ ಬ್ಯಾಕ್ ಚಳವಳಿ' ನಡೆಸಲು ತೀರ್ಮಾನಿಸಿದ್ದೇವೆ ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್ ತಿಳಿಸಿದರು.

ಯಾವುದೇ ಕಾರಣಕ್ಕೂ ಅಧಿಕಾರಿಗಳಿಂದ ಟ್ರಯಲ್ ಬ್ಲಾಸ್ಟ್ ನಡೆಸಲು ಬಿಡುವುದಿಲ್ಲ. ರೈತ ಸಂಘದ ಕಾರ್ಯಕರ್ತರು ಬೈಕ್ ಮೂಲಕ ಬೇಬಿ ಬೆಟ್ಟಕ್ಕೆ ಜಾಥಾ ನಡೆಸಿ ಟ್ರಯಲ್ ಬ್ಲಾಸ್ಟ್ ತಡೆಯುತ್ತೇವೆ ಎಂದು ಎಚ್ಚರಿಕೆ ನೀಡಿದರು.

ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕೆನ್ನಾಳು ವಿಜಯ್‌ಕುಮಾರ್ ಮಾತನಾಡಿ, ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಗೋ ಬ್ಯಾಕ್ ಚಳವಳಿ ಹಮ್ಮಿಕೊಂಡಿದ್ದೇವೆ. ಒಂದು ವೇಳೆ ಅಧಿಕಾರಿಗಳು ಚಳವಳಿಯನ್ನು ಹತ್ತಿಕ್ಕುವ ಕೆಲಸಕ್ಕೆ ಮುಂದಾದರೆ, ಕಾವೇರಿ ನದಿಗೆ ಇಳಿದು ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.




ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು.ಸಿದ್ದಲಿಂಗಸ್ವಾಮಿ ತಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು. ಮತ್ತೊಂದು ಚಿತ್ರದಲ್ಲಿ ಎಂ.ಮೋಹನ್ ಗೌಡ, ಬಿ.ಮಣಿಕಂಠ, ರಮೇಶ್ ರಂಗಪ್ಪ, ವೆಂಕಟೇಶ್ ಪ್ರಸಾದ್, ರಾಕೇಶ್ ಗೌಡ, ಮಹೇಶ್, ಸುರೇಶ್, ಮಲ್ಲಿಕಾರ್ಜುನ್ ಮತ್ತಿತರರು ಕಾ.ಪು.ಸಿದ್ದಲಿಂಗಸ್ವಾಮಿ ಅವರಿಗೆ ಶುಭಾಶಯ ಕೋರಿ, ಅಭಿನಂದಿಸಿದರು.

ಜಿಟಿಡಿ–ಸಾ.ರಾ.ಮಹೇಶ್ ಭೇಟಿ: ಸುದೀರ್ಘ ಚರ್ಚೆ

ಜೆಡಿಎಸ್‌ನಲ್ಲೇ ಮುಂದುವರೆಯಲು ಜಿಟಿಡಿ ಒಪ್ಪಿಗೆ?

ಚಾಮುಂಡೇಶ್ವರಿಯಲ್ಲಿ ಜಿಟಿಡಿ, ಹುಣಸೂರಲ್ಲಿ ಪುತ್ರ ಸ್ಪರ್ಧೆ



"ನನ್ನ ಮತ್ತು ಸಾ.ರಾ.ಮಹೇಶ್ ಭೇಟಿ ವೇಳೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ನಾಡಪ್ರಭು ಕೆಂಪೇಗೌಡರ ಜಯಂತಿಗೆ ಆಹ್ವಾನಿಸಲು ಅವರು ಬಂದಿದ್ದರು. ಆ ಕಾರ್ಯಕ್ರಮದಲ್ಲಿ ನಾನು ಭಾಗವಹಿಸುತ್ತೇನೆ ಎಂಬುದನ್ನು ಅವರಿಗೆ ಖಚಿತ ಪಡಿಸಿದ್ದೇನೆ. ಮುಂದಿನ ಚುನಾವಣೆಯಲ್ಲಿ ಯಾವ ಪಕ್ಷದಿಂದ ಸ್ಪರ್ಧಿಸಬೇಕು ಎಂಬುದರ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ. ಇದೇ ವಿಷಯವನ್ನು ಅವರಿಗೂ ತಿಳಿಸಿದ್ದೇನೆ.

–ಜಿ.ಟಿ.ದೇವೇಗೌಡ, ಚಾಮುಂಡೇಶ್ವರಿ ಶಾಸಕ

ಮೈಸೂರು, ಜು.24– ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್ ಮತ್ತು ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ ಭೇಟಿ ಮಾಡಿ, ಸುಮಾರು 2 ಗಂಟೆಗಳ ಕಾಲ ಚರ್ಚೆ ನಡೆಸಿದ್ದು ಕುತೂಹಲ ಕೆರಳಿಸಿದೆ.

ಮೈಸೂರಿನ ಜಲದರ್ಶಿನಿಯಲ್ಲಿರುವ ಜಿ.ಟಿ.ದೇವೇಗೌಡರ ಕಚೇರಿಗೆ ಇಂದು ಬೆಳಗ್ಗೆ ಕೆಲ ಜೆಡಿಎಸ್ ಮುಖಂಡರೊಂದಿಗೆ ಆಗಮಿಸಿದ ಸಾ.ರಾ.ಮಹೇಶ್, ಜಿಟಿಡಿಗೆ ಹೂಗುಚ್ಛ ನೀಡಿ ಶಾಲು ಹೊದಿಸಿ ಸನ್ಮಾನಿಸಿದರಲ್ಲದೆ, ಕೆ.ಆರ್.ನಗರದಲ್ಲಿ ನಡೆಯಲಿರುವ ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವಕ್ಕೆ ಆಗಮಿಸುವಂತೆ ಆಹ್ವಾನಿಸಿದರು. ಈ ವೇಳೆ ಇಬ್ಬರೂ ಮುಖಂಡರು ಸುಮಾರು 2 ಗಂಟೆ ಕಾಲ ಚರ್ಚೆ ನಡೆಸಿದರು ಎಂದು ಹೇಳಲಾಗಿದೆ.

ಹಾಲಿ ಜೆಡಿಎಸ್ ಶಾಸಕರಾಗಿರುವ ಜಿಟಿಡಿ, ಮುಂದಿನ ಚುನಾವಣೆಯಲ್ಲಿ ಯಾವ ಪಕ್ಷದಿಂದ ಸ್ಪರ್ಧಿಸಬೇಕು ಎಂಬುದನ್ನು 2–3 ತಿಂಗಳಲ್ಲಿ ಪ್ರಕಟಿಸುವುದಾಗಿ ಹೇಳುತ್ತಲೇ ಬಂದಿದ್ದಾರೆ. ಅಲ್ಲದೆ ಜೆಡಿಎಸ್ ತೊರೆಯುತ್ತಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ನಡುವೆ ಸಾ.ರಾ. ಮಹೇಶ್ ಮತ್ತು ಜಿಟಿಡಿ ಭೇಟಿ ಮಹತ್ವ ಪಡೆದುಕೊಂಡಿದೆ. ಜಿ.ಟಿ.ದೇವೇಗೌಡರು ಜೆಡಿಎಸ್ ತೊರೆಯದೆ ಮುಂದಿನ ಚುನಾವಣೆಯಲ್ಲೂ ಅದೇ ಪಕ್ಷದಿಂದ ಸ್ಪರ್ಧಿಸುವ ವಿಚಾರವಾಗಿ ಮಾತುಕತೆ ನಡೆದಿದೆ ಎಂದು ಹೇಳಲಾಗಿದೆ.

ಬಲ್ಲಮೂಲಗಳ ಪ್ರಕಾರ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರು ಮತ್ತು ಹುಣಸೂರಿನಲ್ಲಿ ಅವರ ಪುತ್ರ ಜಿ.ಡಿ.ಹರೀಶ್‌ಗೌಡ ಸ್ಪರ್ಧೆಗೆ ಅವಕಾಶ ಕಲ್ಪಿಸುವ ಭರವಸೆಯನ್ನು ಸಾ.ರಾ.ಮಹೇಶ್ ನೀಡಿದ್ದು, ಅದಕ್ಕೆ ಜಿಟಿಡಿ ಒಪ್ಪಿಕೊಂಡಿದ್ದಾರೆ. ಜೊತೆಗೆ ಮೊಬೈಲ್ ಮೂಲಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೂ ಮಾತನಾಡಿ ಜೆಡಿಎಸ್‌ನಲ್ಲಿ ಮುಂದುವರೆಯುವ ಬಗ್ಗೆ ಖಚಿತಪಡಿಸಿದ್ದಾರೆ. ಸುದೀರ್ಘ 2 ಗಂಟೆ ಮಾತುಕತೆ ವೇಳೆ ಹಳೆಯ ವಿದ್ಯಮಾನಗಳ ಬಗ್ಗೆ ಮನಬಿಚ್ಚಿ ಇಬ್ಬರೂ ಮುಖಂಡರು ಮಾತನಾಡಿದ್ದಾರೆ. ಕುಮಾರಸ್ವಾಮಿ ಅವರೊಂದಿಗೂ ಹಿಂದಿನ ಕಹಿ ಘಟನೆಗಳ ಬಗ್ಗೆ ಜಿಟಿಡಿ ಪ್ರಸ್ತಾಪ ಮಾಡಿದ್ದು, ಮುಂದಿನ ದಿನಗಳಲ್ಲಿ ಅಂತಹ ಯಾವುದೇ ಘಟನೆ ನಡೆಯುವುದಿಲ್ಲ ಎಂದು ಕುಮಾರಸ್ವಾಮಿ ಭರವಸೆ ನೀಡಿದ ನಂತರ ಜಿಟಿಡಿ ಜೆಡಿಎಸ್‌ನಲ್ಲಿ ಮುಂದುವರೆಯುವುದಾಗಿ ಖಚಿತಪಡಿಸಿದರು ಎಂದು ತಿಳಿದಿದೆ. ಇದೇ ವೇಳೆ ಈಗಾಗಲೇ ಜಿಟಿಡಿಯೊಂದಿಗೆ ಮುನಿಸಿಕೊಂಡಿರುವ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಮುಖಂಡರನ್ನು ಸಮಾಧಾನಪಡಿಸುವ ಜವಾಬ್ದಾರಿಯನ್ನು ಕುಮಾರಸ್ವಾಮಿ ಮತ್ತು ಸಾ.ರಾ.ಮಹೇಶ್ ವಹಿಸಿಕೊಂಡಿದ್ದಾರೆ ಎನ್ನಲಾಗಿದೆ.

ಒಕ್ಕಲಿಗರ ಬಗ್ಗೆ ಜಮೀರ್ ಹೇಳಿಕೆ: ನಿರ್ಮಲಾನಂದನಾಥ ಸ್ವಾಮೀಜಿ ಅಸಮಾಧಾನ

ಬೆಂಗಳೂರು, ಜು. 25–ಒಕ್ಕಲಿಗ ಸಮುದಾಯದ ಬಗ್ಗೆ ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ನೀಡಿರುವ ಹೇಳಿಕೆ ಬಗ್ಗೆ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಸಮಾಧಾನ ಹೊರ ಹಾಕಿದ್ದಾರೆ. ತಮ್ಮ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿದ ಜಮೀರ್ ಬಗ್ಗೆ ಸುಮ್ಮನಿರುವ ಒಕ್ಕಲಿಗ ನಾಯಕರ ಮೌನದ ಬಗ್ಗೆ ಅವರು ಪ್ರಸ್ತಾಪಿಸಿದ್ದರು. ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ, ಕಾಂಗ್ರೆಸ್‌ನ ಚೆಲುವರಾಯಸ್ವಾಮಿ, ಡಿ. ಕೆ. ಶಿವಕುಮಾರ್, ಆರ್. ಅಶೋಕ ಜೊತೆ ದೂರವಾಣಿ ಮೂಲಕ ಸ್ವತಃ ಸ್ವಾಮೀಜಿಗಳೇ ನೇರವಾಗಿ ಮಾತನಾಡಿದ್ದು, ಅಸಮಾಧಾನ ತೋಡಿಕೊಂಡಿದ್ದಾರೆ. ಇದರ ಬೆನ್ನಲ್ಲೇ ಒಕ್ಕಲಿಗ ಸಮುದಾಯದ ನಾಯಕರು ಜಮೀರ್ ವಿರುದ್ಧ ತಿರುಗಿ ಬಿದ್ದಿದ್ದಾರೆ.



ನಿರ್ಮಲಾನಂದನಾಥ ಸ್ವಾಮೀಜಿ

ಜಮೀರ್‌ಗೆ ಡಿಕೆಶಿ ಸೈಲೆಂಟ್ ವಾರ್ನಿಂಗ್: ಅಲ್ಪ ಸಂಖ್ಯಾತ ಸಮುದಾಯದ ಬಗ್ಗೆ ನನಗೆ ಗೌರವವಿದೆ. ಹೀಗಾಗಿ ಅವನ ಬಗ್ಗೆ ಏನೂ ಮಾತನಾಡಿಲ್ಲ. ಮಾತನಾಡುವುದೂ ಇಲ್ಲ. ಬೇರೆ ಯಾರಾದರೂ ಮಾತನಾಡಿದ್ದರೆ, ಪಕ್ಷದಿಂದಲೇ ಹೊರ ಹಾಕುತ್ತಿದ್ದೆ. ಮುಸ್ಲಿಂ ಸಮುದಾಯಕ್ಕೆ ಬೆಲೆ ಕೊಟ್ಟು ಎಲ್ಲವನ್ನೂ ಸಹಿಸಿಕೊಂಡಿದ್ದೇನೆ ಎಂದಿದ್ದಾರೆ.

ಆರ್. ಅಶೋಕ್, ಸಿ.ಟಿ. ರವಿ ಗರಂ: ಒಕ್ಕಲಿಗರ ಸಮುದಾಯದ ಬಗ್ಗೆ ಮಾತನಾಡಿರುವ ಜಮೀರ್ ಬಗ್ಗೆ ಕಂದಾಯ ಸಚಿವ ಆರ್. ಅಶೋಕ್ ಮತ್ತು ಸಿ.ಟಿ. ರವಿ ಕೂಡ ಕಿಡಿಕಾರಿದ್ದಾರೆ. ಜಮೀರ್ ಒಕ್ಕಲಿಗ ಸಮುದಾಯದ ಬಗ್ಗೆ ಮಾತನಾಡಿದ್ದು ತಪ್ಪು ಎಂದಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಲೇಟ್.ಮುನಿಯಪ್ಪ ಮಗನಾದ ಮಲ್ಲೇಶ್.ಡಿ.ಎಂ ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ. ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಲೇಟ್ ಶಿವಪ್ಪನವರ ಮಗನಾದ ಶೇಖರಪ್ಪ ಮತ್ತು ಅವರ ಕುಟುಂಬದವರಿಂದ ಖರೀದಿಸಲು ಮುಂದಾಗಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಹಿತಾಸಕ್ತಿಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳ ಒಳಗಾಗಿ ಖುದ್ದಾಗಿ ತಾವಾಗಲಿ ಅಥವಾ ವಕೀಲರ ಮೂಲಕ ನಮ್ಮ ಕಛೇರಿಗೆ ತಲುಪಿಸುವುದು. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಖರೀದಿಸುವವರಿದ್ದು, 7 ದಿನದ ನಂತರ ಬರುವ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯ ಪಡಿಸಲಾಗಿದೆ. ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಚಿಕ್ಕಹಳ್ಳಿ ಗ್ರಾಮದ, ಸರ್ವೇ ನಂಬರ್, 90/2 ಸಿ ರಲ್ಲಿನ ವಿಸ್ತೀರ್ಣ 1 ಎಕರೆ 14 ಗುಂಟೆ ಸ್ವತ್ತಿಗೆ ಚಕ್ಕುಬಂದಿ:– ಪೂರ್ವ :– ಸರ್ವೆ ನಂ: 64 ರ ಜಮೀನು, ಪಶ್ಚಿಮ :– ಸರ್ವೆ ನಂ : 9/2ರ ಜಮೀನು, ಉತ್ತರ :– 90/1 ರ ಜಮೀನು, ದಕ್ಷಿಣ :– 88 ರ ಜಮೀನು,

ರಾಜೇಂದ್ರ ಕುಮಾರ್.ಕೆ.ಎಂ, ವಕೀಲರು ಮತ್ತು ನೋಟರಿ.
ನಂ.2843/1, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ,
ಆರ್.ಬಿ.ಕಾಂಪ್ಲೆಕ್ಸ್, ಜಯನಗರ, ಮೈಸೂರು–570014.
ಮೊ:9008938598

ಗೌರವಾನ್ವಿತ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು ಉಪವಿಭಾಗ, ಹುಣಸೂರು

ಆರ್.ಎ. ನಂ. 232/2022

ಮೇಲ್ಮನವಿದಾರರು : ನಾಗಮಣಿ ಮತ್ತು ಇತರರು

ವಿರುದ್ಧ

ಎದುರುದಾರರು: ತಹಸೀಲ್ದಾರ್ ಮತ್ತು ಮತ್ತೊಬ್ಬರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಗೆ, ಸುಂದರಮ್ಮ, ವಯಸ್ಸು ಸುಮಾರು 60 ವರ್ಷ. #115, ಬಿ.ಎಂ. ಶ್ರೀನಗರ, ಮೇಟಗಳ್ಳಿ, 5ನೇ ಕ್ರಾಸ್, ಮೈಸೂರು.

ಈ ಮೇಲ್ಕಂಡ ಮೇಲ್ಮನವಿಯನ್ನು ಮೇಲ್ಮನವಿದಾರರು ಎದುರುದಾರರಾದ ನಿಮ್ಮ ಹಾಗೂ ತಹಸೀಲ್ದಾರ್ ರವರ ವಿರುದ್ಧ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕು, ಪಿರಿಯಾಪಟ್ಟಣ ಟೌನ್‌ನಲ್ಲಿರುವ ಸರ್ವೆ ನಂ: 322/3 ರಲ್ಲಿರುವ ವಿಸ್ತೀರ್ಣ 0–33 ಗುಂಟೆಗೆ ಸಂಬಂಧಿಸಿದಂತೆ ಮೊದಲನೇ ಎದುರುದಾರರು 2ನೇ ಎದುರುದಾರರಾದ ನಿಮ್ಮ ಪರವಾಗಿ ದಿನಾಂಕ: 24–06–2013 ರಂದು ಎಂ.ಆರ್.ನಂ.ಹೆಚ್ 59/2012–13 ರ ಆದೇಶದ ಮೂಲಕ ನಿಮ್ಮ ಹೆಸರಿಗೆ ಸದರಿ ಸರ್ವೆ ನಂ.ನ ಖಾತೆಯಾಗಿದ್ದು, ಸದರಿ ಖಾತೆಯನ್ನು ರದ್ದುಪಡಿಸಲು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯ ಸಮನ್ಸ್‌ನ್ನು ನೋಂದಣಿ ಅಂಚೆ ಮುಖಾಂತರ ಸಮನ್ಸ್ ಜಾರಿ ಮಾಡಲು ಸಾಧ್ಯವಾಗುವುದಿಲ್ಲ. ಆದುದ್ದರಿಂದ ಮೇಲ್ಕಂಡ ನೀವುಗಳು ದಿನಾಂಕ: 10/08/2022 ರಂದು ಘನ ನ್ಯಾಯಾಲಯವು ಸುನಾವಣೆ ದಿನಾಂಕವನ್ನು ನಿಗಧಿಪಡಿಸಿದ್ದು, ಆ ದಿನ ಮೇಲ್ಕಂಡ ನೀವುಗಳು ಖುದ್ದು ಹಾಜರಾಗಿ ಅಥವಾ ನಿಮ್ಮ ವಕೀಲರ ಮುಖಾಂತರ ಹಾಜರಾಗಬೇಕಾಗಿ ಈ ಮೂಲಕ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ. ಆ ದಿನ ನೀವುಗಳು ಗೈರುಹಾಜರಾದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಸದರಿ ಮೇಲ್ಮನವಿಯು ಮುಂದುವರಿಯಲ್ಪಡುತ್ತದೆ. ಸದರಿ ಸಾರ್ವಜನಿಕ ಪ್ರಕಟಣೆಯನ್ನು ಘನ ನ್ಯಾಯಾಲಯದ ಆದೇಶದ ಅನುಸಾರ ಈ ಪ್ರಕಟಣೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ತಹಸೀಲ್ದಾರ್ ಗ್ರೇಡ್–2
ಮಾನ್ಯ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯ,
ಹುಣಸೂರು, ಮೈಸೂರು ಜಿಲ್ಲೆ

ವಾದಿಯ ಪರ ವಕೀಲರು
ಹೇಮಂತ್‌ಕುಮಾರ್. ಸಿ.ಎಸ್., ವಕೀಲರು
KAR-3716/2010, ಹುಣಸೂರು

ಆಂಧ್ರಪ್ರದೇಶದಲ್ಲಿ ಭೀಕರ ಅಪಘಾತ: ಮೂವರು ಪೊಲೀಸರು ದುರ್ಮರಣ

ಚಿತ್ತೂರು, ಜು.24– ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಇಂದು ನಸುಕಿನ



ವೇಳೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೆಂಗಳೂರಿನ ಶಿವಾಜಿನಗರ ಪೊಲೀಸ್ ಠಾಣೆ ಮೂವರು ಪೊಲೀಸರು ಸಾವನ್ನಪ್ಪಿದ್ದಾರೆ. ಕರ್ತವ್ಯದ ಮೇರೆಗೆ ತಿರುಪತಿಗೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಪುತಲಪಟ್ಟು ಮಂಡಲದ ಪಿ. ಕೊಟ್ಟಕೋಟದಲ್ಲಿ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದ್ದು, ಸ್ಥಳದಲ್ಲಿಯೇ ಮೂವರು ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಥಳಕ್ಕೆ ಚಿತ್ತೂರು ಡಿವೈಎಸ್‌ಪಿ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಪೊಲೀಸ್ ಸಿಬ್ಬಂದಿ ಸಾವಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಕಂಬನಿ ಮಿಡಿದಿದ್ದಾರೆ. ಪಿಎಸ್‌ಐ ಅವಿನಾಶ್ (29) ಕಾನ್‌ಸ್ಟೇಬಲ್ ಅನಿಲ್ ಮುಳಿಕ್ (26) ಕ್ಯಾಬ್ ಚಾಲಕ ಜೋಸೆಫ್ (28) ಮೃತಪಟ್ಟವರು. ಕಾನ್‌ಸ್ಟೇಬಲ್‌ಗಳಾದ ದೀಕ್ಷಿತ್, ಶರಣ ಬಸವ ಗಂಭೀರವಾಗಿ ಗಾಯಗೊಂಡಿದ್ದು, ಚಿತ್ತೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಂಜಾ ಕೇಸ್ ಸಂಬಂಧ ಆರೋಪಿಯನ್ನು ಬಂಧಿಸಲು ತಿರುಪತಿಗೆ ತೆರಳುತ್ತಿದ್ದಾಗ ಈ ದುರಂತ ಸಂಭವಿಸಿದೆ.

ಒಂದನೇ ಪುಟದಿಂದ

ಸರ್ಕಾರಕ್ಕೆ ಹೈ ನೋಟಿಸ್

ಕಾರಣಗಳನ್ನು ಪತ್ತೆ ಮಾಡದ ಹಿನ್ನೆಲೆಯಲ್ಲಿ ಇದೀಗ ಮತ್ತೆ ಭೂಕಂಪಗಳು ಆಗುತ್ತಿವೆ. ಮಳೆಗಾಲದಲ್ಲಿ ಪ್ರವಾಹ, ಭೂ ಕುಸಿತದ ನಡುವೆ ಭೂಮಿಯ ಕಂಪನ ಮುಂದುವರಿದಿದ್ದು ಜನರು ನೆಮ್ಮದಿಯ ಜೀವನ ನಡೆಸಲಾಗುತ್ತಿಲ್ಲ. ಭೂಕಂಪ ಹೆಚ್ಚಳಕ್ಕೆ ಅಕ್ರಮ ರೆಸಾರ್ಟ್ ಹಾಗೂ ಗಣಿಗಾರಿಕೆಯೇ ಕಾರಣವಾಗಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲು ಸರಕಾರಕ್ಕೆ ಅಗತ್ಯ ನಿರ್ದೇಶನ ನೀಡಬೇಕೆಂದು ಕೋರಿದರು.

ಅಲ್ಲದೆ, ಮತ್ತೆ ಮತ್ತೆ ಭೂ ಕುಸಿತ ಸಂಭವಿಸುತ್ತಿರುವುದರಿಂದ ಸಹಸ್ರಾರು ಮಂದಿಗೆ ತೊಂದರೆಯಾಗುತ್ತಿದೆ. ಇಡೀ ಜಿಲ್ಲೆಯ ಪರಿಸರದ ಮೇಲೂ ಪರಿಣಾಮಗಳಾಗುತ್ತಿವೆ. ಆದರೂ ಸರಕಾರ ಅದಕ್ಕೆ ವೈಜ್ಞಾನಿಕ ಕಾರಣಗಳನ್ನು ಅರಿಯಲು ಮುಂದಾಗಿಲ್ಲ. ಹಾಗಾಗಿ ಸರಕಾರಕ್ಕೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಅಪಾಯಕ್ಕೆ ದೂಡಬಹುದು

ನಮ್ಮ ಪರಿಸರ, ನಮ್ಮ ನೆಲ, ಗಾಳಿ ಮತ್ತು ಜಲವನ್ನು ನಾವು ಕಾಳಜಿ ವಹಿಸಬೇಕು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಕೆಲವು ದಶಕಗಳ ಅವಧಿಯಲ್ಲಿ ನಾಯಕರ ನಕ್ಷತ್ರಪುಂಜವನ್ನು ಹೊಂದಿರುವ ಭಾರತದಷ್ಟು ಅದೃಷ್ಟ ಬೇರೆ ಯಾವುದೇ ದೇಶಕ್ಕಿಲ್ಲ ಎಂದು ನಾನು ಯಾವಾಗಲೂ ಬಲವಾಗಿ ನಂಬಿದ್ದೇನೆ, ಅವರಲ್ಲಿ ಪ್ರತಿಯೊಬ್ಬರೂ ಅಸಾಧಾರಣ ಮನಸ್ಸಿನವರಾಗಿದ್ದರು ಎಂದು ಕೋವಿಂದ್ ಹೇಳಿದರು.

ನಾನು ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಶಕ್ತಿಗೆ ವಂದಿಸುತ್ತೇನೆ. ರಾಷ್ಟ್ರಪತಿಗಳ ಅವಧಿಯಲ್ಲಿ ನನ್ನ ಹುಟ್ಟೂರಿಗೆ ಭೇಟಿ ನೀಡಿದ್ದು ಮತ್ತು ನನ್ನ ಕಾನ್ಪುರ ಶಾಲೆಯ ಹಿರಿಯ ಶಿಕ್ಷಕರ ಪಾದಗಳನ್ನು ಸ್ಪರ್ಶಿಸಿ ಅವರ ಆಶೀರ್ವಾದ ಪಡೆಯುವುದು ನನ್ನ ಜೀವನದ ಅವಿಸ್ಮರಣೀಯ ಕ್ಷಣಗಳಾಗಿವೆ ಎಂದು ನಿರ್ಗಮಿತ ರಾಷ್ಟ್ರಪತಿ ಹೇಳಿದ್ದಾರೆ.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಆದರ್ಶಗಳು ಅಮೂರ್ತತೆಗಳಲ್ಲ, ಆದರೆ ಅತ್ಯುನ್ನತ, ಉದಾತ್ತ ಮತ್ತು ಉನ್ನತಿಗೇರಿಸುವಂತಿವೆ. ರಾಷ್ಟ್ರವು 'ಆಜಾದಿ ಕಾ ಅಮೃತ್ ಮಹೋತ್ಸವ'ವನ್ನು ಆಚರಿಸುತ್ತಿದೆ. ಮುಂದಿನ ತಿಂಗಳು, ನಾವು ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವನ್ನು ಆಚರಿಸುತ್ತೇವೆ. ಸ್ವಾತಂತ್ರ್ಯದ ಶತಮಾನೋತ್ಸವಕ್ಕೆ ಕಾರಣವಾಗುವ 25 ವರ್ಷಗಳ ಅವಧಿಯ 'ಅಮೃತ ಕಾಲ'ವನ್ನು ನಾವು ಪ್ರವೇಶಿಸುತ್ತೇವೆ. ಸಶಸ್ತ್ರ ಪಡೆಗಳು, ಅರೆ ಮಿಲಿಟರಿ ಪಡೆಗಳು ಮತ್ತು ಪೊಲೀಸ್‌ನ ನಮ್ಮ ವೀರ ಯೋಧರನ್ನು ಭೇಟಿ ಮಾಡಲು ನನಗೆ ಅವಕಾಶ ಸಿಕ್ಕ ಸಂದರ್ಭಗಳನ್ನು ನಾನು ವಿಶೇಷವಾಗಿ ಗೌರವಿಸುತ್ತೇನೆ. ಅವರ ದೇಶಭಕ್ತಿಯ ಉತ್ಸಾಹ ಅದ್ಭುತ, ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರು.

ಜನರಿಗೆ ತಲುಪಿಸಿ

ನರೇಂದ್ರ ಮೋದಿ ಕರೆ ನೀಡಿದರು. ವ್ಯವಹಾರವನ್ನು ಸುಲಭಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಅಗತ್ಯಕ್ಕೆ ಪ್ರಧಾನಿ ಮೋದಿ ಮಹತ್ವದ ಒತ್ತು ನೀಡಿದ್ದು, ದೇಶದಲ್ಲಿ ವ್ಯಾಪಾರ ವಾತಾವರಣವನ್ನು ಮತ್ತಷ್ಟು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಅವರು ರಾಜ್ಯಗಳನ್ನು ಪ್ರೋತ್ಸಾಹಿಸಿದರು ಎಂದು ಬಿಜೆಪಿ ಹೇಳಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಸಭೆಯಲ್ಲಿ ಭಾಗವಹಿಸಿದ್ದರು. ಕಳೆದ ವರ್ಷ ಡಿಸೆಂಬರ್‌ನಲ್ಲಿಯೂ ಮೋದಿ ಇಂಥದ್ದೇ ಸಭೆಯನ್ನು ವಾರಾಣಸಿಯಲ್ಲಿ ನಡೆಸಿದ್ದರು.

ನೇಮಕಾತಿ ಪರೀಕ್ಷೆ ಪ್ರಾರಂಭ

ಜು.24ರಿಂದ ಜು.31ವರೆಗೆ ದೇಶಾದ್ಯಂತ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಸಿಬ್ಬಂದಿಗಳ ಜೊತೆಗೆ ವಾಯುಪಡೆ ಸಿಬ್ಬಂದಿಗಳನ್ನೂ ನಿಯೋಜನೆ ಮಾಡಲಾಗಿದೆ. ಕೇಂದ್ರಗಳ ಮೇಲೆ ಸಿಸಿಟಿವಿ ಹಾಗೂ ಡ್ರೋನ್ ಗಳ ಮೂಲಕ ನಿಗಾ ವಹಿಸಲಾಗಿದೆ. 11 ಕೇಂದ್ರಗಳಲ್ಲಿ ಇಂದು ಅಗ್ನಿವೀರ್ ಪರೀಕ್ಷೆಗಳು ನಡೆಯುತ್ತಿದ್ದು, ಈ ಪೈಕಿ 6 ಕಾನ್ಪುರ ಔಟರ್ ನಲ್ಲಿದ್ದು ಮೂರು ಪಾಳಿಗಳಲ್ಲಿ ಪರೀಕ್ಷೆ ನಡೆಯುತ್ತಿವೆ. ಇಂದು 31,875 ಅಭ್ಯರ್ಥಿಗಳು ಕಾನ್ಪುರದಲ್ಲಿ ಪರೀಕ್ಷೆ ಎದುರಿಸುತ್ತಿದ್ದಾರೆ. ಪ್ರತಿ ಪಾಳಿಯಲ್ಲಿ 625 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ.

ಉನ್ನತ ಮಟ್ಟದ ಸಭೆ

ಟ್ರಾವೆಲ್ ಹಿಸ್ಟರಿ ಇಲ್ಲದೇ ಇದ್ದರೂ ಸೋಂಕು ಪತ್ತೆಯಾಗಿದೆ. 31 ವರ್ಷದ ವ್ಯಕ್ತಿಗೆ ಮೈಮೇಲೆ ಗುಳ್ಳೆಗಳು ಹಾಗೂ ಜ್ವರ ಕಾಣಿಸಿಕೊಂಡಿದ್ದು, ಆರೋಗ್ಯದಲ್ಲಿ ಸ್ಥಿರತೆಯಿದೆ ಎಂದು ವೈದ್ಯರು ತಿಳಿಸಿದ್ದಾರೆ. ಸೋಂಕಿತನನ್ನ ಐಸೊಲೇಷನ್ ಮಾಡಲು ಸೂಚನೆ ನೀಡಲಾಗಿದೆ. ಸೋಂಕು ಹರಡದಂತೆ ಗೈಡ್‌ಲೈನ್ ಅನುಸರಿಸಲು ಸಲಹೆ ಕೊಡಲಾಗಿದೆ.

ಸೋಂಕಿತ ವ್ಯಕ್ತಿಯ ಸಂಪರ್ಕಿತರನ್ನು ಗುರುತಿಸಿ ಕ್ವಾರಂಟೈನ್‌ನಲ್ಲಿರಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಮಂಕಿಪಾಕ್ಸ್ ರೋಗಲಕ್ಷಣ ಕಾಣಿಸಿದ ಹಿನ್ನೆಲೆಯಲ್ಲಿ ಪಶ್ಚಿಮ ದೆಹಲಿಯ ನಿವಾಸಿಯಾಗಿರುವ ವ್ಯಕ್ತಿಯನ್ನು ಮೂರು ದಿನಗಳ ಹಿಂದೆ ಮೌಲಾನಾ ಆಜಾದ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಯಿತು. ಮಾದರಿಯನ್ನು ಶನಿವಾರ ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆ(ಎನ್‌ಐವಿ)ಗೆ ಕಳುಹಿಸಲಾಗಿತ್ತು ವರದಿಯಲ್ಲಿ ಮಂಕಿ ಫಾಕ್ಸ್ ಪಾಸಿಟಿವ್ ಕಂಡು ಬಂದಿದೆ.

ತಯಾರಿಕಾ ಘಟಕ ಪತ್ತೆ



ಆಧಾರ್ ನಂಬರ್ ಸಮೇತ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ. ಗ್ರಾಮದ ಹೊರ ವಲಯದಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಂಡಕಳ್ಳಿ ಗ್ರಾಮದ ವ್ಯಕ್ತಿಯೋರ್ವರು ಕೃಷಿ ಇಲಾಖೆ ಅಧಿಕಾರಿಗಳಿಗೆ ನೀಡಿದ ಮಾಹಿತಿ ಮೇರೆಗೆ ಈ ಕಾರ್ಯಾಚರಣೆ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಂಜನಗೂಡು ಪ್ರಕರಣ: ನಂಜನಗೂಡು–ಗುಂಡ್ಲು ಪೇಟೆ ತಾಲೂಕುಗಳ ಗಡಿಯ ಹಿರೀಕಾಟಿ ಗ್ರಾಮದ ಜಮೀನಿನಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕ ಜೂ.22ರಂದು ಪತ್ತೆಯಾಗಿತ್ತು. ನಂಜನಗೂಡು ಹಾಗೂ ಮೈಸೂರು ಕೃಷಿ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ, ಅಪಾರ ಪ್ರಮಾಣದ ನಕಲಿ ರಸಗೊಬ್ಬರವನ್ನು ವಶಕ್ಕೆ ಪಡೆದಿದ್ದರು. ಎರೆಮಣ್ಣಿಗೆ ಸುಣ್ಣ, ಗರ್ಭಿಣಿ ಸ್ತ್ರೀಯರಿಗೆ ವಿತರಿಸುವ ಪೌಷ್ಟಿಕಾಂಶದ ಪುಡಿಯನ್ನು ಮಿಶ್ರಣ ಮಾಡಿ, ಚೀಲಗಳಲ್ಲಿ ತುಂಬಿ ಮಾರಾಟ ಮಾಡುತ್ತಿರುವ ಕೃತ್ಯ ಬಯಲಾಗಿತ್ತು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

7 ತಿಂಗಳ ಹಿಂದೆ ನಕಲಿ ತುಪ್ಪ: ಮೈಸೂರಿನಲ್ಲಿ 7 ತಿಂಗಳ ಹಿಂದೆಯಷ್ಟೇ ನಕಲಿ ನಂದಿನಿ ತುಪ್ಪದ ಪ್ರಕರಣ ಬೆಳಕಿಗೆ ಬಂದಿತ್ತು. ಚಾಮುಂಡಿಬೆಟ್ಟದ ತಪ್ಪಲಿನ ಹೊಸಹುಂಡಿ ಗ್ರಾಮದ ಹೊರವಲಯದ ಗೋಡೌನ್‌ನಲ್ಲಿ ನಕಲಿ ತುಪ್ಪ ತಯಾರಿಕಾ ಘಟಕ ನಡೆಸಲಾಗುತ್ತಿತ್ತು. ಎನ್‌ಜಿಓ ಕಾರ್ಯಕರ್ತರು ಕಳೆದ ಡಿಸೆಂಬರ್ 16ರಂದು ಈ ಆಘಾತಕಾರಿ ಪ್ರಕರಣವನ್ನು ಬಯಲಿಗೆಳೆದಿದ್ದರು. ನಂತರದಲ್ಲಿ ಮೈಸೂರು ದಕ್ಷಿಣ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೈಮುಲ್ ಅಧಿಕಾರಿಯ ದೂರಿನ ಮೇರೆಗೆ ಪ್ರಕರಣ ದಾಖಲಿಸಿದ್ದರು. ನಕಲಿ ತುಪ್ಪವನ್ನು ನಂದಿನಿ ಬ್ರ್ಯಾಂಡ್ ಸ್ಯಾಚೆಟ್‌ಗಳಿಗೆ ತುಂಬಿ ಮಾರಾಟ ಮಾಡಿದ್ದು ಬಯಲಾಗಿತ್ತು.

ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅವರಿಗೆ ಡಿವಿಜಿ ಪ್ರಶಸ್ತಿ ಪ್ರದಾನ

ಅಪಾರ ಸಾಹಿತ್ಯ ಸೃಷ್ಟಿಸಿದ್ದ ಡಿವಿಜಿ ಬದುಕು ಆದರ್ಶಮಯ; ಡಾ. ಗುರುರಾಜ ಕರಜಗಿ

ಮೈಸೂರು, ಜು.24(ಪಿಎಂ)– ಮೈಸೂರಿನ ಡಿವಿಜಿ ಬಳಗ ಪ್ರತಿಷ್ಠಾನದ ವತಿಯಿಂದ ಕೊಡಮಾಡುವ ಪ್ರತಿಷ್ಠಿತ 'ಡಿವಿಜಿ ಪ್ರಶಸ್ತಿ–2022' ಅನ್ನು ಶಿಕ್ಷಣ ತಜ್ಞರೂ ಆದ ಖ್ಯಾತ ವಾಗ್ಮಿ ಡಾ.ಗುರುರಾಜ ಕರಜಗಿ ಅವರಿಗೆ ಭಾನುವಾರ ಪ್ರದಾನ ಮಾಡಲಾಯಿತು.

ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಡಾ.ಗುರುರಾಜ ಕರಜಗಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ವೇಳೆ ಡಾ.ಗುರುರಾಜ ಕರಜಗಿ ಅವರ ಪತ್ನಿ ಪರಿಮಳಾ ಕರಜಗಿ ಅವರನ್ನೂ ಸನ್ಮಾನಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಗುರುರಾಜ ಕರಜಗಿ, ಡಿವಿಜಿ ಸೃಷ್ಟಿಸಿದ ಸಾಹಿತ್ಯ ಅಪಾರ. ಜೊತೆಗೆ ಅವರ ಬದುಕಿನ ಆದರ್ಶ ಅದಕ್ಕೂ ಮಿಗಿಲಾಗಿತ್ತು. ಅವರ ಅಭಿಮಾನಿಯಾಗುವುದು ಸುಲಭ. ಆದರೆ ಅವರ ಆದರ್ಶ ಪಾಲನೆ ಕಷ್ಟವೇ ಸರಿ. ಡಿವಿಜಿ ಬಹುಮುಖಿ ಪ್ರತಿಭೆ ಹೊಂದಿದ್ದರು. ಕವಿ, ವಿಮರ್ಶಕ, ಸಮಾಜ ಸುಧಾರಕ, ರಾಜಕೀಯ ವಿಶ್ಲೇಷಕ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿದ್ದರು ಎಂದು ಸ್ಮರಿಸಿದರು.

ಡಿವಿಜಿ ಅವರನ್ನು ಸಂಪ್ರದಾಯವಾದಿ ಎಂತಲೂ



ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 'ಡಿವಿಜಿ ಪ್ರಶಸ್ತಿ–2022' ಅನ್ನು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅವರಿಗೆ ಪ್ರದಾನ ಮಾಡಲಾಯಿತು. ಇದೇ ವೇಳೆ ಡಾ.ಗುರುರಾಜ ಕರಜಗಿ ಅವರ ಪತ್ನಿ ಪರಿಮಳಾ ಕರಜಗಿ ಅವರನ್ನೂ ಸನ್ಮಾನಿಸಲಾಯಿತು.

ಕೆಲವರು ಕರೆಯುತ್ತಾರೆ. ಆದರೆ ಅವರ ಹಲವು ನಡೆಗಳು ಸಂಪ್ರದಾಯವನ್ನೇ ಮೀರಿ, ಸಮಾಜ ಸುಧಾರಣೆಗೆ ನಾಂದಿ ಹಾಡಿದ್ದವು. ಬ್ರಾಹ್ಮಣ ಸಮುದಾಯದ ವಿಧವೆಯೊಬ್ಬರು, ನನ್ನ ಪತಿ ನಿಧನ ಹೊಂದಿದ ಹಿನ್ನೆಲೆಯಲ್ಲಿ ನನಗೆ ಕುಂಕುಮ ಇಟ್ಟುಕೊಳ್ಳಬೇಡ, ಬಳೆ ತೊಡಬೇಡವೆಂದು ಪತಿಯ ಕುಟುಂಬಸ್ಥರು ಕಟ್ಟುಪಾಡುಗಳನ್ನು ವಿಧಿಸಿದ್ದರ ಬಗ್ಗೆ ಡಿವಿಜಿಗೆ ಪತ್ರ ಬರೆದು ಅಳಲು ತೋಡಿಕೊಂಡಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಡಿವಿಜಿಯವರು, ಹೀಗೆಲ್ಲಾ ಕಟ್ಟುಪಾಡಿನಲ್ಲಿ ಬದುಕುವ ಅಗತ್ಯವಿಲ್ಲ. ಇದನ್ನು ಯಾವ ಧರ್ಮವೂ ಹೇಳಿಲ್ಲ ಎಂದು ಸಾಂತ್ವನ ಹೇಳಿದ್ದರು. ಅಲ್ಲದೆ, ತಾವೇ ಮುಂದೆ ನಿಂತು ಹಲವು ವಿಧವಾ ವಿವಾಹ ಮಾಡಿಸಿದ್ದರು ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿ ಸೇವೆ ಸಲ್ಲಿಸುತ್ತಿದ್ದ ಡಿವಿಜಿ ಅವರಿಗೆ ಒಂದು ರೂಪಾಯಿ ಹನ್ನೆರಡಾಣೆ ವೇತನ ಬರುತ್ತಿತ್ತು. ಆಗಿನ ಕಾಲಕ್ಕೆ ಅದು ಕಡಿಮೆ ವೇತನ. ಹೀಗಾಗಿ ಡಿವಿಜಿ ಅವರು ಕಷ್ಟದಲ್ಲಿರುವ ಕಾರಣ ವೇತನ ಹೆಚ್ಚಳ ಮಾಡುವಂತೆ ಸರ್ ಎಂ.ವಿಶ್ವೇಶ್ವರಯ್ಯನವರು ಮಹಾರಾಜರಿಗೆ ಶಿಫಾರಸ್ಸು ಮಾಡಿದ್ದರು. ಈ ಹಿನ್ನೆಲೆಯಲ್ಲಿ ಅವರ ವೇತನವು 5 ರೂ.ಗೆ ಹೆಚ್ಚಳಗೊಂಡಿತು. ಬಳಿಕ ತಮಗೆ ಮಾತ್ರವೇ ವೇತನ ಹೆಚ್ಚಳ ಮಾಡಲಾಗಿದೆ ಎಂಬುದನ್ನು ತಿಳಿದ ಡಿವಿಜಿ, ವೇತನದ ಎಲ್ಲಾ ಹಣವನ್ನೂ ವಾಪಸ್ಸು ಮಾಡಿದ್ದರು. ಅವರು ಹಣಕ್ಕಿಂತ ಆತ್ಮಾಭಿಮಾನ ಮುಖ್ಯ ಎಂಬ ಮೌಲ್ಯ ಅಳವಡಿಸಿಕೊಂಡಿದ್ದರು ಎಂದು ಹೇಳಿದರು.

ಮಂಕುತಿಮ್ಮನ ಕಗ್ಗ ಉಪನ್ಯಾಸಕ ವಿದ್ವಾನ್ ಜಿ.ಎಸ್. ನಟೇಶ್ ಮಾತನಾಡಿ, ಸರ್ಕಾರದಿಂದ ಕೊಡಮಾಡುವ ಪ್ರಶಸ್ತಿಗಳ ಪುರಸ್ಕೃತರನ್ನು ಇದೀಗ ವಿಜೇತರು ಎಂದು ಕರೆಯುವ ಕಾಲ ಬಂದಿದೆ. ಅರ್ಜಿ ಹಾಕಿ, ಕಚೇರಿಯಿಂದ ಕಚೇರಿಗೆ ಸುತ್ತಾಡಿ, ಯಾರದ್ದೋ ಕೃಪೆಯಿಂದ ಪ್ರಶಸ್ತಿ ಪಡೆದು, ಅದರ ಹೂದಲ್ಲಿ ಪಾಲು ಕೊಡುವ ಸನ್ನಿವೇಶವೇ ಸಾಕ್ಷಿಯಿದೆ. ಆದರೆ ಡಿವಿಜಿ ಬಳಗ ಪ್ರತಿಷ್ಠಾನದ ಅರ್ಹರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಾ ಬಂದಿದೆ. ಅಂತೆಯೇ ಈ ವರ್ಷ ಗುರುರಾಜ ಕರಜಗಿ ಅವರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಪ್ರಶಂಸನೀಯ. ಇದರಿಂದ ಪ್ರಶಸ್ತಿ ಘನತೆ ಮತ್ತಷ್ಟು ವೃದ್ಧಿಯಾಗಿದೆ ಎಂದು ತಿಳಿಸಿದರು. ಪ್ರತಿಷ್ಠಾನದ ಸಂಚಾಲಕ ಸಿ.ಕನಕರಾಜು ಮತ್ತಿತರರು ಹಾಜರಿದ್ದರು.

ಭಾರೀ ಮಳೆಯಿಂದ ಮೈಸೂರು ಜಿಲ್ಲೆಯಾದ್ಯಂತ 60 ಹೆಕ್ಟೇರ್ ತೋಟಗಾರಿಕಾ ಬೆಳೆ ಹಾನಿ



ಮೈಸೂರು, ಜು.24(ಜಿಎ)–ಮೈಸೂರು ಜಿಲ್ಲೆಯಾದ್ಯಂತ ಸುರಿಯುತ್ತಿರುವ ಮಳೆಗೆ ಇಲ್ಲಿಯವರೆಗೂ 60 ಹೆಕ್ಟೇರ್ ತೋಟಗಾರಿಕೆ ಬೆಳೆಗೆ ಹಾನಿಯಾಗಿದ್ದು, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ನಿಂದ 11.76 ಲಕ್ಷ ರೂ. ಪರಿಹಾರದ ಹಣ ಬರಬೇಕಿದೆ.

ನಿರಂತರ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್.ಡಿ. ಕೋಟೆ, ಹುಣಸೂರು, ಕೆ.ಆರ್. ನಗರ, ಮೈಸೂರು ನಗರ, ನಂಜನಗೂಡು, ಪಿರಿಯಾಪಟ್ಟಣ ಮತ್ತು ತಿ. ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ವಿವಿಧ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದ್ದು, ಈ ಅತಿ ವೃಷ್ಟಿಯಿಂದಾಗಿ ರೈತರಿಗೆ ಸಂಕಷ್ಟ ಎದುರಾಗಿದೆ.

ಜೂನ್ ಮತ್ತು ಜುಲೈನಲ್ಲಿ 15ರವರೆಗೂ ಸುರಿದ ಮಳೆಯಿಂದಾಗಿ ಹೆಚ್.ಡಿ.ಕೋಟೆ ವ್ಯಾಪ್ತಿಯಲ್ಲಿ 7.3 ಹೆಕ್ಟೇರ್ ಪ್ರದೇಶ(ಬಾಳೆ–7.3) ಬೆಳೆ ಹಾನಿಯಾಗಿದ್ದರೆ, ಹುಣಸೂರು ವ್ಯಾಪ್ತಿಯಲ್ಲಿ 11.8 ಹೆಕ್ಟೇರ್ ಪ್ರದೇಶ(ಟೊಮ್ಯಾಟೋ –4.00, ಹಸಿ ಮೆಣಸಿನಕಾಯಿ–2.00 ಮತ್ತು ಇತರೆ–5.80) ಬೆಳೆ ಹಾನಿಯಾಗಿದೆ. ಮೈಸೂರು ನಗರದಲ್ಲಿ 13.82 ಹೆಕ್ಟೇರ್ ಪ್ರದೇಶ (ಬಾಳೆ–3.04, ತೆಂಗು/ ಅಡಿಕೆ–1.37, ಬೀನ್ಸ್–0.94, ಟೊಮ್ಯಾಟೊ–2.51, ಹೀರೇಕಾಯಿ–3.30, ಕುಂಬಳ–0.38, ಇತರೆ–2.13) ಹಾನಿಯಾಗಿದೆ. ನಂಜನಗೂಡು ತಾಲೂಕಿನಲ್ಲಿ 18.82 ಹೆಕ್ಟೇರ್ ಪ್ರದೇಶ(ಬಾಳೆ–0.80, ತೆಂಗು–0.70, ಟೊಮ್ಯಾಟೋ–6.86, ಹಸಿ ಮೆಣಸಿನ ಕಾಯಿ–0.80, ಇತರೆ–10.16) ನಾಶವಾಗಿದೆ. ಪಿರಿಯಾಪಟ್ಟಣದಲ್ಲಿ 8.75 ಹೆಕ್ಟೇರ್ ಪ್ರದೇಶ(ಬಾಳೆ–1.10, ತೆಂಗು–3.02, ಬೀನ್ಸ್–1.60, ವೀಳ್ಯದೆಲೆ–0.05, ಕಲ್ಲಂಗಡಿ–1.6, ಕಾಳು ಮೆಣಸು–0.08, ಹಸಿಮೆಣಸಿನ ಕಾಯಿ–0.40, ಹೀರೇಕಾಯಿ–0.40, ಕುಂಬಳ– 0.20, ಇತರೆ–0.3) ಹಾನಿಯಾಗಿದರೆ, ತಿ. ನರಸೀಪುರದಲ್ಲಿ ತಾಲೂಕಿನಲ್ಲಿ ಮಾತ್ರ ಅತೀ ಕಡಿಮೆ ತೋಟಗಾರಿಕೆ ಬೆಳೆಗೆ ಹಾನಿಯಾಗಿದ್ದು, ಬೀನ್ಸ್ ಬೆಳೆಯು 0.13 ಹೆಕ್ಟೇರ್ ಪ್ರದೇಶ ನಾಶವಾಗಿದೆ.

ನಂಜನಗೂಡಿನಲ್ಲೇ ಹೆಚ್ಚು: ನಂಜನಗೂಡಿನಲ್ಲಿ ಅತೀ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಅದರಲ್ಲಿ ಟೊಮ್ಯಾಟೊ ಬೆಳೆ 6.86 ಹೆಕ್ಟೇರ್ ಹಾನಿಯಾಗಿದ್ದು, ಇತರೆ 18.62 ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆಯು ನಾಶವಾಗಿದೆ.

ಬೆಳೆ ಪರಿಹಾರ: ಮೈಸೂರು ಜಿಲ್ಲೆಯಾದ್ಯಂತ 60 ಹೆಕ್ಟೇರ್ ತೋಟಗಾರಿಕೆ ಬೆಳೆ ಪ್ರದೇಶ ಹಾನಿಯಾಗಿದ್ದು, ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ನಾಶವಾಗಿರುವ ಬೆಳೆಗೆ ಬೇಕಾಗಿರುವ ಪರಿಹಾರ ಮೊತ್ತ 11.8 ಲಕ್ಷ ರೂ. ಹಣ ಬರಬೇಕಿದೆ ಎಂದು ತೋಟಗಾರಿಕೆ ಇಲಾಖೆ ಈಗಾಗಲೇ ವರದಿ ಸಲ್ಲಿಸಿದೆ.

ವಿದ್ಯಾರ್ಥಿ ದೆಸೆಯಲ್ಲೇ ನಾಯಕತ್ವ ಗುಣ ಬೆಳೆಸಿಕೊಂಡರೆ ದೇಶಕ್ಕೆ ಉತ್ತಮ ನಾಯಕರು ಲಭ್ಯ

ಎನ್‌ಸಿಸಿ ಕರ್ನಲ್ ಅಶುತೋಷ್ ದೇವಿರಾಣಿ ಅಭಿಮತ



ಮೈಸೂರುಜು.24(ಎಂಟಿವೈ)– ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿ ದೆಸೆಯಲ್ಲಿಯೇ ನಾಯಕತ್ವದ ಗುಣ ಬೆಳೆಸಿಕೊಂಡರೆ ದೇಶಕ್ಕೆ ಭವಿಷ್ಯದಲ್ಲಿ ಉತ್ತಮ ನಾಯಕರನ್ನು ಕೊಡುಗೆ ನೀಡಿದಂತಾಗುತ್ತದೆ ಎಂದು ಎನ್‌ಸಿಸಿ ಕರ್ನಲ್ ಅಶುತೋಷ್ ದೇವಿರಾಣಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನವ್‌ಕೀಸ್ ಶಾಲೆಯಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಕಲಿಸುವುದರೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಪ್ರತಿನಿಧಿಗಳ ಆಯ್ಕೆ ಪ್ರಕ್ರಿಯೆ ಹೇಗಿರುತ್ತದೆ ಎಂದು ತಿಳಿಸಿಕೊಡಲು ಚುನಾವಣೆ ಮೂಲಕ ಪ್ರತಿನಿಧಿಗಳ ಆಯ್ಕೆ ಬಗ್ಗೆ ಮನವರಿಕೆ ಮಾಡಿಕೊಡುವುದಕ್ಕೆ ಮುಂದಾಗಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳಲ್ಲಿ ಶಿಸ್ತು ಬಹಳ ಮುಖ್ಯ. ಶಿಸ್ತು ನಮ್ಮಲ್ಲಿದ್ದರೆ ಸಾಧನೆ ಮಾಡುವುದಕ್ಕೆ ಸಾಧ್ಯ. ಆ ನಿಟ್ಟಿನಲ್ಲಿ ಎನ್‌ಸಿಸಿಯಲ್ಲಿ ವಿದ್ಯಾರ್ಥಿಗಳಿಗೆ ಶಿಸ್ತು ಕಲಿಸಲಾಗುತ್ತದೆ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಕಲಿಸುವ ಜ್ಞಾನ ಕೇವಲ ಪಠ್ಯಕ್ರಮಕ್ಕೆ ಮಾತ್ರ ಸೀಮಿತವಾಗಿರಬಾರದು. ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಪ್ರಾಮುಖ್ಯತೆ ಹೇಗಿರುತ್ತದೆ. ನಾಯಕತ್ವ ಗುಣ ಹೇಗಿರಬೇಕು. ನಾಯಕರಾದ ಮೇಲೆ ಜವಾಬ್ದಾರಿ, ಕರ್ತವ್ಯ ನಿರ್ವಹಣೆಯ ಬಗ್ಗೆ ಮಾಹಿತಿ ನೀಡಬೇಕಾಗಿರುವುದು ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಿದ್ದಾಗಲೇ ನಾಯಕತ್ವ ಗುಣ ಕರಗತ ಮಾಡಿಕೊಂಡರೆ ಭವಿಷ್ಯದಲ್ಲಿ ಉತ್ತಮ ನಾಯಕರಾಗಿ ರೂಪುಗೊಳ್ಳಲು ಸಾಧ್ಯವಾಗಲಿದೆ. ಆ ನಿಟ್ಟಿನಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಯೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಅರಿವಿನ ಕಾರ್ಯಕ್ರಮ ರೂಪಿಸುವುದು ಅಗತ್ಯ ಎಂದು ತಿಳಿಸಿದರು.

ಇದೇ ವೇಳೆ ಮತದಾನ ಮೂಲಕ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬ್ಯಾಡ್ಜ್ ವಿತರಿಸಿದರು. ಕಾರ್ಯಕ್ರಮದಲ್ಲಿ ನವಕೀಸ್ ಶಾಲೆಯ ಪ್ರಾಂಶುಪಾಲರಾದ ಡಾ.ಜಯಶ್ರೀ ಮುರುಳಿಧರ್ ಹಾಗೂ ಶಾಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಗನ್ ಹೌಸ್ ವೃತ್ತದಲ್ಲಿ ಸುತ್ತೂರು ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪನೆಗೆ ಸಹಕರಿಸಿ

ಪ್ರಮೋದಾದೇವಿ ಒಡೆಯರ್‌ಗೆ ಹೈಕೋರ್ಟ್ ವಕೀಲ ಅಮೃತೇಶ್ ಪತ್ರ

ಮೈಸೂರು, ಜು.24(ಎಂಟಿವೈ)–ಗನ್ ಹೌಸ್ ವೃತ್ತದಲ್ಲಿ ಸುತ್ತೂರು ಕ್ಷೇತ್ರದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಪ್ರತಿಮೆ ಸ್ಥಾಪನೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಆದೇಶ ಬಂದಿದ್ದು, ಪ್ರತಿಮೆ ಸ್ಥಾಪನೆಗೆ ಸಹಕರಿಸುವಂತೆ ಕೋರಿ ರಾಜ ವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಪತ್ರ ಬರೆದಿದ್ದೇನೆ ಎಂದು ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್ ತಿಳಿಸಿದ್ದಾರೆ.

ಮೈಸೂರಿನ ಗನ್ ಹೌಸ್ ಬಳಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ರಾಜಗುರು ಪರಂಪರೆಯಲ್ಲಿ ಸುತ್ತೂರು ಮಠ ಮತ್ತು ಪರಕಾಲ ಮಠ ಸೇರಿದೆ. ಹಲವು ದಶಕಗಳಿಂದಲೂ ಗನ್ ಹೌಸ್ ವೃತ್ತವನ್ನು ಜೆಎಸ್‌ಎಸ್ ಮಹಾ ವಿದ್ಯಾಪೀಠದ ವೃತ್ತ ಎಂದು ಕರೆಯುವ ಪರಂಪರೆ ಇದೆ. ಈ ಸಂಬಂಧ 2017ರಲ್ಲಿ ಗನ್ ಹೌಸ್ ವೃತ್ತದಲ್ಲಿ ಸುತ್ತೂರು ಹಿರಿಯ ಶ್ರೀಗಳಾದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಪ್ರತಿಮೆ ನಿರ್ಮಾಣಕ್ಕೆ ಆದೇಶವಾಗಿತ್ತು. ಈ ಆದೇಶಕ್ಕೆ ಸಂಬಂಧಿಸಿದಂತೆ ಅರಸು ಸಂಘದ ವತಿಯಿಂದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 2021ರಲ್ಲಿ ಹೈಕೋರ್ಟ್ ಪ್ರತಿಮೆ ನಿರ್ಮಾಣ ಮಾಡುವ ಸಂಬಂಧ ಪುನರ್ ಪರಿಶೀಲಿಸುವಂತೆ ಆದೇಶಿಸಿತ್ತು. ಇದೀಗ ಜಿಲ್ಲಾ ಮಟ್ಟದ ಸಮಿತಿ ಈ ವೃತ್ತದಲ್ಲಿ ಪ್ರತಿಮೆ ನಿರ್ಮಾಣ ಮಾಡುವುದರಿಂದ ಸಂಚಾರಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ವರದಿ ನೀಡಿದ ಹಿನ್ನೆಲೆಯಲ್ಲಿ ಇದೀಗ ಹೈಕೋರ್ಟ್‌ನಲ್ಲಿ ರಾಜೇಂದ್ರ ಶ್ರೀಗಳ ಪ್ರತಿಮೆ ನಿರ್ಮಾಣಕ್ಕೆ ಆದೇಶ ಹೊರಡಿಸಿದೆ ಎಂದು ತಿಳಿಸಿದರು.

ಹೈಕೋರ್ಟ್ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ರಾಜ ವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಪ್ರತಿಮೆ ನಿರ್ಮಾಣ ಮಾಡುವ ಸಂಬಂಧ ಪುನರ್ ಪರಿಶೀಲಿಸುವಂತೆ ಸುತ್ತೂರು ಶ್ರೀಗಳಿಗೆ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಸಾರ್ವಜನಿಕರ ಅಪೇಕ್ಷೆಯ ಮೇರೆಗೆ ಆ ಸ್ಥಳದಲ್ಲಿ ಶ್ರೀ ಶಿವರಾತ್ರೀಶ್ವರ ಸ್ವಾಮೀಜಿಗಳ ಪ್ರತಿಮೆ ನಿರ್ಮಾಣ ಮಾಡುವ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ಕೋರಿದ್ದಾರೆ. ಆದರೆ ಇದು ಅವೈಜ್ಞಾನಿಕ ಅಭಿಪ್ರಾಯವಾಗಿದೆ. ಅರಮನೆಯ ಸುತ್ತಮುತ್ತ ಕೇವಲ ರಾಜ ವಂಶಸ್ಥರಿಗೇ ಸೇರಿದ ಪ್ರತಿಮೆಗಳಿರಬೇಕೇ? ಎಂದು ಪ್ರಶ್ನಿಸಿದ ಅವರು, ಗನ್ ಹೌಸ್ ಬಳಿ ಒಂದೆಡೆ ಕುವೆಂಪು ಅವರ ಪ್ರತಿಮೆ ಇದೆ. ಮತ್ತೊಂದೆಡೆ ಬಸವಣ್ಣನವರ ಪ್ರತಿಮೆ ಇದೆ. ಉತ್ತರ ದ್ವಾರದ ಬಳಿ ಒಂದೆಡೆ ಡಾ. ರಾಜ್‌ಕುಮಾರ್ ಪ್ರತಿಮೆ ಇದೆ. ಮತ್ತೊಂದೆಡೆ ಡಾ. ವಿಷ್ಣುವರ್ಧನ್ ಅವರ ಪ್ರತಿಮೆ ಇದೆ. ಈ ಪ್ರತಿಮೆಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸದ ಪ್ರಮೋದಾದೇವಿ ಒಡೆಯರ್ ಅವರು ಸುತ್ತೂರು ಶ್ರೀಗಳ ಪ್ರತಿಮೆ ಸ್ಥಾಪನೆಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂಬಂಧ ನನ್ನ ಕಾನೂನು ಹೋರಾಟ ಮುಂದುವರೆಯುತ್ತದೆ. ಯಾವುದೇ ಕಾರಣಕ್ಕೂ ನಿಗದಿತ ವೃತ್ತದಲ್ಲೇ ಶಿವರಾತ್ರೀಶ್ವರ ಜಗದ್ಗುರುಗಳ ಪ್ರತಿಮೆ ನಿರ್ಮಾಣ ಮಾಡುವ ಪ್ರಕ್ರಿಯೆಯಿಂದ ದೂರ ಸರಿಯಲ್ಲ ಎಂದು ತಿಳಿಸಿದರು.

ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯ

ಮೈಸೂರು, ಜು.24– ತೋಟಗಾರಿಕೆ ಇಲಾಖೆಯ ವತಿಯಿಂದ ಮೈಸೂರು ಜಿಲ್ಲೆಯ



ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ ನಾಟಿ ಮಾಡಲು ಯೋಗ್ಯವಿರುವ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳನ್ನು ಬೆಳೆಸಲಾಗಿದ್ದು, ಪ್ರಸ್ತುತ ಮಳೆಯಾಗುತ್ತಿರುವುದರಿಂದ ತೆಂಗಿನ ಗಿಡಗಳನ್ನು ನಾಟಿ ಮಾಡಲು ಉತ್ತಮ ಸಮಯವಾಗಿದೆ. ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ಸಸ್ಯಾಗಾರಗಳಲ್ಲಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ತೋಟಗಾರಿಕೆ ಕ್ಷೇತ್ರ, ಲಭ್ಯವಿರುವ ಗಿಡಗಳ ಸಂಖ್ಯೆ ಹಾಗೂ ಸಂಪರ್ಕಿಸಬೇಕಾದ ಅಧಿಕಾರಿ ಹೆಸರು ಮತ್ತು ದೂ.ಸಂಖ್ಯೆ ಇಂತಿವೆ: ಹೆಬ್ಬಾಳ ತೋಟಗಾರಿಕೆ ಕ್ಷೇತ್ರ (13000 ಗಿಡಗಳು) ಜಯಲಕ್ಷ್ಮಿ ಮೊ.ಸಂ: 8747085225, ಹುಣಸೂರು ತೋಟಗಾರಿಕೆ ಕ್ಷೇತ್ರ (12000 ಗಿಡಗಳು) ಬಿ.ದೇವರಾಜು ಮೊ.ಸಂ: 8722165357, ಯಲಚಹಳ್ಳಿ ತೋಟಗಾರಿಕೆ ಕ್ಷೇತ್ರ (10000 ಗಿಡಗಳು) ಸಿ.ಕೆ.ಪ್ರಸನ್ನಕುಮಾರ್ ಮೊ.ಸಂ: 9591781344, ವಾರಂಚಿ ತೋಟಗಾರಿಕೆ ಕ್ಷೇತ್ರ (20000 ಗಿಡಗಳು) ವಿನಯ್‌ಕುಮಾರ್ ಮೊ.ಸಂ: 9886356077, ಚೌಕಳ್ಳಿ ತೋಟಗಾರಿಕೆ ಕ್ಷೇತ್ರ (13000 ಗಿಡಗಳು) ಶೇಖರ್ ಮೊ.ಸಂ: 9900371051, ಕಬಿನಿ ತೋಟಗಾರಿಕೆ ಕ್ಷೇತ್ರ (6000 ಗಿಡಗಳು) ಸುಮತಿ ಮೊ.ಸಂ: 7892973151, ರಂಗಸಮುದ್ರ ತೋಟಗಾರಿಕೆ ಕ್ಷೇತ್ರ (3000 ಗಿಡಗಳು) ಹೇಮಂತ್ ಮೊ.ಸಂ: 9739274439, ಕುಕ್ಕರಹಳ್ಳಿ ತೋಟಗಾರಿಕೆ ಕ್ಷೇತ್ರ (2000 ಗಿಡಗಳು) ಪ್ರಕಾಶ್ ಮೊ.ಸಂ: 9341970649 ಹಾಗೂ ಹೆಚ್.ಡಿ.ಕೋಟೆ ತೋಟಗಾರಿಕೆ ಕ್ಷೇತ್ರ ಹರೀಶ್ ಮೊ.ಸಂ: 8971334859 ಸಂಪರ್ಕಿಸಬಹುದು.

ಬೆಂಗಳೂರು ಬೆಳೆಯಲು ಕೆಂಪೇಗೌಡರ ದೂರದೃಷ್ಟಿ ಕಾರಣ

ಎಂಎಲ್‌ಸಿ ಡಾ|| ಡಿ.ತಿಮ್ಮಯ್ಯ ಅಭಿಮತ

ಮೈಸೂರು,ಜು.24(ಎಂಟಿವೈ)– ರಾಜಧಾನಿ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯೇ ಕಾರಣ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ಕರ್ನಾಟಕ ಸೇನಾ ಪಡೆ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಬೆಂಗಳೂರನ್ನು ವ್ಯವಸ್ಥಿತವಾಗಿ ನಿರ್ಮಿಸಿದರು. ನಗರ ನಿರ್ಮಾಣದೊಂದಿಗೆ ನೂರಾರು ಕೆರೆ–ಕಟ್ಟೆಗಳನ್ನು ಕಟ್ಟಿ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದವರು. ಆ ಕಾರಣದಿಂದಲೇ ಇಂದು ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಜಾತ್ಯಾತೀತವಾಗಿ ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯದೊರಕಿಸಿ ಕೊಟ್ಟಿದ್ದರು. 12ನೇ ಶತಮಾನದ ಬಸವಣ್ಣ ಅವರಂತೆ ಕೆಂಪೇಗೌಡರು ಜಾತಿ–ಮತ ಭೇದವಿಲ್ಲದೆ ಎಲ್ಲರ ಅಭಿವೃದ್ಧಿಗೆ ಶ್ರಮಿಸಿದವರು ಎಂದರು.

ಸುಯೋಗ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಕೆಂಪೇಗೌಡರು ದೂರದೃಷ್ಟಿಯುಳ್ಳ ಮಹಾನ್ ಮಾನವತಾವಾದಿ ಎನಿಸಿದ್ದಾರೆ. ಪ್ರಜೆಗಳ ಹಿತರಕ್ಷಣೆಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ



ಕುಟುಂಬ ಅವರದ್ದಾಗಿದೆ. ಚಿಕ್ಕಪೇಟೆ, ಬಳೆಪೇಟೆ, ಕಾಟನ್‌ಪೇಟೆ, ಸುಲ್ತಾನ್ ಪೇಟೆ, ಚಾಮರಾಜಪೇಟೆ ಸೇರಿದಂತೆ ಹಲವು ಪೇಟೆಗಳನ್ನು ನಿರ್ಮಿಸಿ, ಒಂದೊಂದು ಜನಾಂಗ ಹಾಗೂ ಕುಲಕಸುಬು ಮಾಡುವವರಿಗೆ ಪ್ರತ್ಯೇಕ ಪೇಟೆಯನ್ನೇ ಕಟ್ಟಿಕೊಟ್ಟಿದ್ದರು. ಈಗಲೂ ರಾಜ್ಯದ ಪ್ರತಿಯೊಬ್ಬರು ಅವರ ಸೇವೆಯನ್ನು ನೆನೆಯುತ್ತಾರೆ ಎಂದು ತಿಳಿಸಿದರು.

ಸನ್ಮಾನ: ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಸಿ.ವೈ.ಶಿವೇಗೌಡ, ರಾಜಕೀಯ ಕ್ಷೇತ್ರ – ಡಾ. ಕೃಷ್ಣಕುಮಾರ್ ಸಾಗರ್, ಸಂಘಟನೆ ಕ್ಷೇತ್ರ– ಮೈಸೂರು ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಯೋಜನಾ ಕ್ಷೇತ್ರ – ನಿರ್ಮಿತಿ ಕೇಂದ್ರದ ಎಸ್.ಸುರೇಂದ್ರ ಸರ್ಕಾರಿ ಕ್ಷೇತ್ರ – ಅಬಕಾರಿ ಇಲಾಖೆ ಉಪನಿರೀಕ್ಷಕ ಡಾ.ಎಂ.ಡಿ.ಮೋಹನ್ ಕುಮಾರ್, ಉನ್ನತ ಶಿಕ್ಷಣ ಕ್ಷೇತ್ರ–ಮುಕ್ತ ವಿವಿ ಅರ್ಥಶಾಸ್ತ್ರ ವಿಭಾಗದ ಡಾ.ಆರ್.ಹೆಚ್.ಪವಿತ್ರ , ಇಂಜಿನಿಯರಿಂಗ್ ಕ್ಷೇತ್ರ –ಕಾರ್ಯಪಾಲಕ ಅಭಿಯಂತರ ಕೆ.ಎಂ. ರವಿಕುಮಾರ್, ಸಮುದಾಯ ಕ್ಷೇತ್ರ–ಚಾಮರಾಜನಗರ ವೆಂಕಟರಾಮು ಅವರಿಗೆ 'ಶ್ರೀ ಕೆಂಪೇಗೌಡ ಸೇವಾ ರತ್ನ ಪ್ರಶಸ್ತಿ'ಯನ್ನು ವಿತರಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು.

ಜಿ.ಪಂ.ಮಾಜಿ ಅಧ್ಯಕ್ಷ ಕೆ.ಮರೀಗೌಡ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಹೆಚ್.ಕೆ.ರಾಮು, ಬಿಜೆಪಿ ಮುಖಂಡ ಯಶಸ್ವಿನಿ ಸೋಮಶೇಖರ್, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಹಿರಿಯ ಕವಯತ್ರಿ ಪುಷ್ಪ ಅಯ್ಯಂಗಾರ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಬಾಣಸವಾಡಿ ನಾಗಣ್ಣ, ಕರ್ನಾಟಕ ಸೇನಾಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ರಾಜ್ಯಾಧ್ಯಕ್ಷ ಶ್ರೀನಿವಾಸ ಗೌಡ, ಮುಖಂಡರಾದ ಡಾ.ಶಾಂತರಾಜೇ ಅರಸ್, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ, ಬಂಗಾರಪ್ಪ, ಎಳನೀರು ರಾಮಣ್ಣ, ದರ್ಶನ್ ಗೌಡ, ಜ್ಯೋತಿ, ಇಂದಿರಾ, ಅನಿತಾ ಚೇತನ್, ಮೊಗಣ್ಣಾಚಾರ್, ಮಲ್ಲೇಶ್, ಪ್ರಭಾಕರ , ಸ್ವಾಮಿ, ಗಣೇಶ್ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದೇಶಭಕ್ತಿ, ಒಗ್ಗಟ್ಟಿನಿಂದ ಸನಾತನ ಧರ್ಮ ಉಳಿವು

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್



ನಂಜನಗೂಡು, ಜು.24– ಸಾಮರಸ್ಯ, ಒಗ್ಗಟ್ಟು, ದೇಶಭಕ್ತಿ ಮೈಗೂಡಿಸಿಕೊಂಡು ಹಿಂದೂ ಧರ್ಮ, ಸನಾತನ ಸಂಸ್ಕೃತಿ, ಸಂಸ್ಕಾರ ಕಾಪಾಡುವ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ತಿಳಿಸಿದರು.

ನಗರದ ಕಾಮಾಕ್ಷಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಭಾರತ ವಿಕಾಸ ಪರಿಷದ್‌ನ 2022–24ನೇ ಸಾಲಿನ ನೂತನ ಪದಾಧಿಕಾರಿಗಳ ದಾಯಿತ್ವ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಚೀನ ಸನಾತನ ಹಿಂದೂ ಸಂಸ್ಕೃತಿ ತನ್ನದೇ ಆದ ಪರಂಪರೆ ಹೊಂದಿದೆ. ನಮ್ಮಲ್ಲಿ ದೇಶಭಕ್ತಿ, ಒಗ್ಗಟ್ಟು ಕಾಪಾಡಿಕೊಳ್ಳುವುದೇ ಸವಾಲಾಗಿ ಪರಿಣಮಿಸಿದೆ. ಹಣ, ಬುದ್ಧಿ, ಅನುಕರಣೆಯಿಂದ ಭಾರತ ವಿಕಾಸವಾಗುವುದಿಲ್ಲ. ನಾವು ಧರ್ಮ ಪಾಲನೆ ಮಾಡುವ ಮೂಲಕ ಭಾರತೀಯ ಪರಂಪರೆ ರಕ್ಷಣೆ ಮಾಡಬೇಕಿದೆ ಎಂದು ಪ್ರತಿಪಾದಿಸಿದರು.

ಭಾರತ್ ವಿಕಾಸ್ ಪರಿಷದ್ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಜಿ.ಎಸ್.ಶೇಖರಪ್ಪ, ಕಳೆದ 22 ವರ್ಷಗಳಿಂದ ಪರಿಷತ್ ನಂಜನಗೂಡಿನಲ್ಲಿ ಅಸ್ತಿತ್ವದಲ್ಲಿದ್ದು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಪ್ರತಿವರ್ಷ ನವೋದಯ, ಆದರ್ಶ ಶಾಲೆಗೆ ಪ್ರವೇಶಾತಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದ್ದು, ಕಾರ್ಯಾಗಾರದಲ್ಲಿ ಭಾಗಿಯಾಗಿದ್ದ 6 ವಿದ್ಯಾರ್ಥಿಗಳು ನವೋದಯ ಶಾಲೆಯಲ್ಲಿ ಪ್ರವೇಶ ಪಡೆದಿದ್ದಾರೆ. ಇನ್ನು ಪರಿಷದ್ ನಡೆಸುತ್ತಿರುವ ಭಾರತ್ ವಿಕಾಸ್ ಶಾಲೆಯಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ. ಮುಂದಿನ ದಿನಗಳಲ್ಲಿ ಪರಿಷದ್ ವತಿಯಿಂದ ಮತ್ತಷ್ಟು ಸಮಾಜಮುಖಿ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುವುದಾಗಿ ಹೇಳಿದರು.

ಪರಿಷದ್‌ನ 2022–24ನೇ ಸಾಲಿನ ಅಧ್ಯಕ್ಷರಾಗಿ ಜಿ.ಎಸ್.ಶೇಖರಪ್ಪ, ಉಪಾಧ್ಯಕ್ಷರಾಗಿ ವಿ.ಗುರುಸ್ವಾಮಿ, ಕಾರ್ಯದರ್ಶಿಯಾಗಿ ಎಚ್.ನಾಗಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಬಾಬುರಾವ್, ಕೋಶಾಧ್ಯಕ್ಷರಾಗಿ ವಿ.ಅರುಣ್, ಪ್ರಮುಖರಾಗಿ ಎಂ.ಬಸವರಾಜು, ಡಿ.ಎಂ.ಮಲ್ಲಿಕಾರ್ಜುನಪ್ಪ, ಎಸ್.ಶಿವಸ್ವಾಮಿ, ಕೆ.ಎಂ.ಶ್ರೀನಿವಾಸಮೂರ್ತಿ, ಎಸ್.ಆನಚಿದರಾಜ್, ನಟರಾಜಮೂರ್ತಿ, ಎನ್.ಶಿವಣ್ಣ ಅಧಿಕಾರ ಸ್ವೀಕರಿಸಿದರು.

ಹೊಸದಾಗಿ ಸೇರ್ಪಡೆಗೊಂಡ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಇದೇ ಸಂದರ್ಭ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಭಾರತ ವಿಕಾಸ ಪರಿಷದ್ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ಪಿ.ಸ್ವಾಮಿ, ಭಾರತ್ ವಿಕಾಸ ಶಾಲೆ ಅಧ್ಯಕ್ಷ ಬಿ.ಯೋಗೀಶ್, ನಿಕಟಪೂರ್ವ ಅಧ್ಯಕ್ಷ ಎಸ್.ಶಿವಸ್ವಾಮಿ, ಮಾಜಿ ಉಪಾಧ್ಯಕ್ಷ ಎಂ.ಬಿ.ಬಸವರಾಜು, ಎನ್.ಕೆ.ಶ್ರೀಕಂಠಪ್ರಸಾದ್ ಉಪಸ್ಥಿತರಿದ್ದರು.

ತಾಯಿ, ಇಬ್ಬರು ಮಕ್ಕಳು ನಾಪತ್ತೆ



ತಿ.ನರಸೀಪುರ, ಜು.24– ಕಬ್ಬು ಕಟಾವಿಗೆ ಬಂದಿದ್ದ ಮಹಿಳೆಯೊಬ್ಬರು ತನ್ನ ಇಬ್ಬರು ಹೆಣ್ಣು ಮಕ್ಕಳೊಂದಿಗೆ ಕಾಣೆಯಾಗಿರುವ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಮಾಲಪ್ಪನಗುಡಿಯ ಫಕೀರಮ್ಮ(24) ಎಂಬಾಕೆ ತನ್ನಿಬ್ಬರು ಹೆಣ್ಣು ಮಕ್ಕಳಾದ ಸಂಜನಾ(5) ಹಾಗೂ ರಚನಾ(3) ಅವರೊಂದಿಗೆ ಕಾಣೆಯಾದವರು.

ಕಬ್ಬು ಕಟಾವು ಕೆಲಸ ಮಾಡಲು 25 ದಿನಗಳ ಹಿಂದೆ ಸಂಸಾರ ಸಮೇತ ತಾಲೂಕಿನ ತುಂಬಲ ಗ್ರಾಮಕ್ಕೆ ಬಂದು ವಾಸ್ತವ್ಯ ಹೂಡಿದ್ದ ಈಕೆ ಜು.13 ರಂದು ತನ್ನಿಬ್ಬರು ಮಕ್ಕಳೊಂದಿಗೆ ತಿ.ನರಸೀಪುರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಹೋಗಿ ಬರುವುದಾಗಿ ಹೇಳಿ ಹೋದವರು ಹಿಂದಿರುಗಿಲ್ಲ ಎಂದು ಆಕೆಯ ಅಣ್ಣ ಹನುಮಂತು ಪಟ್ಟಣ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಮುಖ್ಯಪೇದೆ ಮಹೇಶ್ ತನಿಖೆ ಕೈಗೊಂಡಿದ್ದಾರೆ.

ಸಿದ್ದರಾಮಯ್ಯರ ಅಮೃತ ಮಹೋತ್ಸವ ಪೋಸ್ಟರ್ ಬಿಡುಗಡೆ



ತಿ.ನರಸೀಪುರ, ಜು.24– ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷ ಯಶಸ್ವಿಯಾಗಿ ಆಡಳಿತ ನಡೆಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿದು ರಾಜ್ಯವನ್ನು ಕಲ್ಯಾಣ ಕರ್ನಾಟಕ ಮಾಡುವಂತಾಗಲಿ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಶುಭ ಹಾರೈಸಿದರು.

ದಾವಣಗೆರೆಯಲ್ಲಿ ಆ.3ರಂದು ಹಮ್ಮಿಕೊಂಡಿರುವ ಸಿದ್ದರಾಮಯ್ಯರ 75ನೇ ವರ್ಷದ ಅಮೃತ ಮಹೋತ್ಸವ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಜನೋಪಯೋಗಿ ಕೆಲಸಗಳ ಮೂಲಕ ಉತ್ತಮ ಆಡಳಿತ ನೀಡಿದ ಸಿದ್ದರಾಮಯ್ಯನವರು ಬಡವರು, ದೀನ ದಲಿತರು ಹಾಗೂ ರೈತರ ಸಾಲ ಮನ್ನಾ ಮಾಡುವ ಮೂಲಕ ಹಿಂದುಳಿದ ವರ್ಗದವರ ಹಿತ ಕಾಯುವಲ್ಲಿ ಯಶಸ್ವಿಯಾಗಿದ್ದರು. ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಒಂದು ರೂ.ಗೆ ಅಕ್ಕಿ ಕೊಡುವ ಯೋಜನೆ ಜಾರಿಗೊಳಿಸಿ ಬಡವರ ಪಾಲಿನ ಅನ್ನದಾತರಾದರು. 5 ವರ್ಷ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಯಶಸ್ವಿಯಾಗಿ ಆಡಳಿತ ನಡೆಸಿ ದೊಡ್ಡ ಪ್ರಮಾಣದಲ್ಲಿ ಯಶಸ್ಸು ಸಾಧಿಸಿದ ಸಿದ್ದು ಅವರ ಜನೋಪಯೋಗಿ ಕಾರ್ಯಕ್ರಮಗಳು ಇಂದಿಗೂ ಮಾದರಿಯಾಗಿದ್ದು, ಅಹಿಂದ ವರ್ಗದವರ ಆಶಾಕಿರಣವಾಗಿ ಕೆಲಸ ಮಾಡಿದ ಸಿದ್ದರಾಮಯ್ಯನವರು ಶತಾಯುಷಿಗಳಾಗಿ ಬದುಕಿ ಬಾಳಲಿ ಎಂದು ಹಾರೈಸಿದ ಶ್ರೀಗಳು ಮತ್ತೊಮ್ಮೆ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದು ಉತ್ತಮ ಆಡಳಿತ ನೀಡುವಂತಾಗಲಿ ಎಂದರು.


ಪುರಸಭೆ ಮಾಜಿ ಅಧ್ಯಕ್ಷ ಎನ್. ಸೋಮು ಮಾತನಾಡಿ, ಬಡವರ ಪಾಲಿನ ಅನ್ನದಾತರೂ, ದೀನ ದಲಿತರ ಆಶಾಕಿರಣ ಸಿದ್ದರಾಮಯ್ಯನವರ 75ನೇ ವರ್ಷದ ಅಮೃತ ಮಹೋತ್ಸವ ಕಾರ್ಯಕ್ರಮ ಆ.3 ರಂದು ದಾವಣಗೆರೆಯಲ್ಲಿ ನಡೆಯುತ್ತಿದ್ದು, ಪೂರ್ವಭಾವಿಯಾಗಿ ಸ್ವಾಮೀಜಿಯವರಿಂದ ಪೋಸ್ಟರ್ ಬಿಡುಗಡೆ ಮಾಡಿಸಲಾಗಿದೆ. ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಎಲ್ಲಾ ಸಮಾಜದ ಮುಖಂಡರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಮುಖಂಡರಾದ ಪಿಎಸಿಸಿ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್, ನಾಗಣ್ಣ, ಶಿವು, ವೆಂಕಟೇಶ್, ರಘು ಇತರರಿದ್ದರು.

ಆಕಸ್ಮಿಕ ಬೆಂಕಿ: ಅಂಗಡಿ ಪದಾರ್ಥಗಳು ಭಸ್ಮ

ಹುಣಸೂರು, ಜು.24– ಆಕಸ್ಮಿಕ ಬೆಂಕಿ ತಗುಲಿ ಚಿಲ್ಲರೆ ಅಂಗಡಿಯಲ್ಲಿದ್ದ ಪದಾರ್ಥಗಳು ಸಂಪೂರ್ಣವಾಗಿ ಸುಟ್ಟು ಹೋಗಿರುವ ಘಟನೆ ತಾಲೂಕಿನ ಬೆಂಕಿಪುರದಲ್ಲಿ ನಡೆದಿದೆ.

ತಾಲೂಕಿನ ಬಿಳಿಕೆರೆ ಹೋಬಳಿಯ ಬೆಂಕಿಪುರ ಗ್ರಾಮದ ಚಿಕ್ಕನಾಯಕರ ಪತ್ನಿ ಲಕ್ಷ್ಮಮ್ಮರಿಗೆ ಸೇರಿದ ಚಿಲ್ಲರೆ ಅಂಗಡಿಗೆ ಶುಕ್ರವಾರ ರಾತ್ರಿ ಬೆಂಕಿ ಬಿದ್ದಿದ್ದು, ಅಂಗಡಿಯ ದಿನಸಿ ಪದಾರ್ಥ, ಸೆಲ್ಫ್, ಚಿಲ್ಲರೆ ಸಾಮಾನುಗಳು ಸುಟ್ಟು ಭಸ್ಮವಾಗಿದ್ದು, ಸುಮಾರು 1 ಲಕ್ಷ ರೂ. ನಷ್ಟ ಸಂಭವಿಸಿದೆ. ಇದರಿಂದ ಜೀವನೋಪಾಯಕ್ಕಾಗಿ ಚಿಲ್ಲರೆ ಅಂಗಡಿ ನಡೆಸುತ್ತಿದ್ದ ಲಕ್ಷ್ಮಮ್ಮನವರ ಕುಟುಂಬ ಅತಂತ್ರವಾಗಿದೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಗೂರಲ್ಲಿ ಸರಣಿಗಳ್ಳತನ



ಸರಗೂರು, ಜು.24– ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಸರಣಿಗಳ್ಳತನ ನಡೆದಿರುವ ಬಗ್ಗೆ ವರದಿಯಾಗಿದೆ.

ಪಟ್ಟಣದ ಸಂತೇಮಾಳದಲ್ಲಿರುವ ಸ್ವಾಮಿ ಅವರ ಮೊಬೈಲ್ ಅಂಗಡಿಯ ಶೆಟರ್ ಮುರಿದು ಶನಿವಾರ ರಾತ್ರಿ ಒಳನುಗ್ಗಿರುವ ಕಳ್ಳರು 40 ಸಾವಿರ ರೂ. ನಗದು ಸೇರಿದಂತೆ ಮೊಬೈಲ್‌ಗಳನ್ನು ದೋಚಿದ್ದಾರೆ ಎನ್ನಲಾಗಿದೆ. ಅಲ್ಲದೇ ಕಳೆದ 3 ದಿನಗಳ ಹಿಂದೆ ಪಟ್ಟಣದ ಖಾಸಗಿ ಶಾಲೆಯೊಂದಕ್ಕೆ ನುಗ್ಗಿರುವ ಕಳ್ಳರು ಸಿಸಿ ಕ್ಯಾಮರಾದ ಡಿವಿಆರ್‌ಗಳನ್ನು ಕದ್ದೊಯ್ದಿದ್ದಾರೆ.

ಕಳೆದ 2 ಹಿಂದೆ ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದ ಬಳಿಯ ಅಂಗವಿಕಲ ಪುಟ್ಟರಾಜು ಅವರಿಗೆ ಸೇರಿದ ಅಂಗಡಿಯಲ್ಲಿ ಕಳ್ಳತನ ನಡೆಸಿರುವ ದುಷ್ಕರ್ಮಿಗಳು ನಗದು ಸೇರಿದಂತೆ 25 ಸಾವಿರಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ದೋಚಿದ್ದು, ತಾಯಿಯೊಂದಿಗೆ ವಾಸವಿರುವ ಪುಟ್ಟರಾಜು ಅವರಿಗೆ ದಿಕ್ಕೆ ತೋಚದಂತಾಗಿದೆ. ಅಲ್ಲದೇ ವಾರದ ಮುನ್ನಾ 2 ಪೆಟ್ಟಿಗೆ ಅಂಗಡಿಗೆ ಕನ್ನ ಹಾಕಿರುವ ದುಷ್ಕರ್ಮಿಗಳು ಸಾವಿರಾರು ರೂ. ಬೆಲೆ ಬಾಳುವ ಪದಾರ್ಥಗಳನ್ನು ದೋಚಿದ್ದಾರೆ. ಈ ಎಲ್ಲಾ ಕಳ್ಳತನಗಳ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ಕಳ್ಳತನ ನಡೆಯುತ್ತಿದ್ದರೂ, ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ. ರಾತ್ರಿ ವೇಳೆ ಕುಟುಕರ ಹಾವಳಿ ಹೆಚ್ಚಾಗಿದ್ದು, ಕುಡಿದ ಅಮಲಿನಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹೀಗಾಗಿ ಪೊಲೀಸರು ರಾತ್ರಿ ವೇಳೆ ಪೊಲೀಸ್ ಗಸ್ತು ಹೆಚ್ಚು ಮಾಡುವ ಮೂಲಕ ಕುಟುಕರ ಹಾವಳಿ ತಪ್ಪಿಸಬೇಕು. ಅಲ್ಲದೇ ಕಳ್ಳತನ ಮಾಡಿರುವ ದುಷ್ಕರ್ಮಿಗಳನ್ನು ಬಂಧಿಸಬೇಕು. ಅಲ್ಲದೇ ಪಟ್ಟಣದಲ್ಲಿ ಪುಂಡರ ಹಾವಳಿ ಹೆಚ್ಚಾಗಿದ್ದು, ಶಾಲಾ ಕಾಲೇಜು ಪ್ರಾರಂಭ, ಮುಕ್ತಾಯದ ವೇಳೆ ಹೆಚ್ಚಿನ ಗಸ್ತು ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.


ಪಟ್ಟಣದಲ್ಲಿ ಕಳೆದ ಒಂದು ವಾರದಿಂದ ನಡೆದಿರುವ ಸರಣಿಗಳ್ಳತನವನ್ನು ಗಂಭಿರವಾಗಿ ಪರಿಗಣಿಸಿದ್ದು, ಖದೀಮರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗುವುದು. ಈಗಾಗಲೇ ಕಳ್ಳತನ ನಡೆದಿರುವ ಸ್ಥಳಗಳಿಗೆ ಶ್ವಾನ, ಬೆರಳಚ್ಚು ತಜ್ಞರೊಂದಿಗೆ ತೆರಳಿ ಪರಿಶೀಲನೆ ನಡೆಸಲಾಗಿದೆ. ರಾತ್ರಿ ವೇಳೆ ಗಸ್ತು ಹೆಚ್ಚಳ ಮಾಡಲಾಗುವುದು. ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳ ಎದುರು ಸಿಸಿ ಕ್ಯಾಮರಾಗಳನ್ನು ಅಳವಡಿಸಿಕೊಳ್ಳಬೇಕು. ಶೀಘ್ರ ಕಳ್ಳರನ್ನು ಬಂಧಿಸಲು ಕ್ರಮ ಕೈಗೊಳ್ಳಲಾಗುವುದು. ಅಪರಾಧ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ.
- ಶ್ರವಣದಾಸರೆಡ್ಡಿ, ಸರಗೂರು ಎಸ್‌ಐ.

ಭಾರೀ ಮಳೆಗೆ ಮನೆ ಕುಸಿತ



ಹಂಪಾಪುರ, ಜು.24– ಭಾರೀ ಮಳೆಗೆ ಮನೆ ಕುಸಿದಿರುವ ಘಟನೆ ಸರಗೂರು ತಾಲೂಕಿನ ಕೆ. ಬೆಳತ್ತೂರು ಗ್ರಾಪಂ ವ್ಯಾಪ್ತಿಯ ಶಂಖಹಳ್ಳಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ರಾಜನಾಯಕ ಎಂಬುವರಿಗೆ ಸೇರಿದ ಮನೆ ಕುಸಿದಿರುವುದು. ಕಳೆದ ಕೆಲ ದಿನಗಳಿಂದ ಸುರಿದ ಸತತ ಮಳೆಗೆ ಪತ್ನಿ ಮಹದೇವಮ್ಮ, ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದ ರಾಜನಾಯಕ ಅವರ ಸುಮಾರು 30 ವರ್ಷಗಳ ಹಳೆಯ ಮನೆ ಶಿಥಿಲಗೊಂಡಿತ್ತು. ಶನಿವಾರ ರಾತ್ರಿಯೂ ಭಾರೀ ಮಳೆಯಾಗಿದ್ದು, ಈ ವೇಳೆ ಮನೆ ಸಂಪೂರ್ಣವಾಗಿ ನೆಲಸಮವಾಗಿದೆ. ರಾಜನಾಯಕ ಕಡು ಬಡವರಾ ಗಿದ್ದು, ಇದ್ದ ಸೂರು ಕೂಡ ಮಳೆಯಿಂದಾಗಿ ಕುಸಿದು ಹೋಗಿ ಸಂತ್ರಸ್ತರಾಗಿದ್ದಾರೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ತಾಲೂಕಿನಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಅನೇಕ ಕುಟುಂಬಗಳು ಮನೆ ಕಳೆದುಕೊಂಡು ಸಂತ್ರಸ್ತರಾಗಿದ್ದಾರೆ. ಇದೀಗ ಮನೆ ಕಳೆದುಕೊಂಡಿರುವ ರಾಜನಾಯಕ ಸೇರಿದಂತೆ ತಾಲೂಕಿನ ಸಂತ್ರಸ್ತರಿಗೆ ಸರ್ಕಾರ ಕೂಡಲೇ ಮನೆ ನಿರ್ಮಿಸಿಕೊಡುವ ಮೂಲಕ ಅವರ ನೆರವಿಗೆ ನಿಲ್ಲಬೇಕು ಎಂದು ಗ್ರಾಮದ ಅಂಗಡಿ ಶಿವು ಮತ್ತಿತರರು ಆಗ್ರಹಿಸಿದ್ದಾರೆ.



ತಿ.ನರಸೀಪುರ ಪುರಸಭೆ ನೂತನ ಉಪಾಧ್ಯಕ್ಷೆ ನಾಗರತ್ನ ಮಾದೇಶ್ ಅವರು ಮೈಸೂರಿನಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಲೋಕೋಪಯೋಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಿದರು. ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ತುಂಬಲ ಪ್ರಕಾಶ್, ನಾಗರಾಜು, ಬಾದಾಮಿ ಮಂಜು, ಯುವ ಮುಖಂಡ ಅನೂಪ್ ಗೌಡ ಇತರರಿದ್ದರು.

ಜಾನುವಾರು ಕಳೆದುಕೊಂಡ ಸಂತ್ರಸ್ತೆಗೆ ಸಹಾಯಧನ ವಿತರಣೆ



ಹುಣಸೂರು ಜು.24– ಆಕಸ್ಮಿಕವಾಗಿ ಕೊಟ್ಟಿಗೆಗೆ ಬೆಂಕಿ ಬಿದ್ದು 3 ಜಾನುವಾರುಗಳನ್ನು ಕಳೆದುಕೊಂಡ ಸಂತ್ರಸ್ತೆ ಜಯಮ್ಮ ಅವರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ವೈಯುಕ್ತಿಕವಾಗಿ 25 ಸಾವಿರ ರೂ. ಸಹಾಯಧನ ನೀಡಿದರು.

ತಾಲೂಕಿನ ಮುಳ್ಳೂರು ಗ್ರಾಮದ ಲೇ.ಕಾಳಚಾರ್ ಅವರ ಪತ್ನಿ ಜಯಮ್ಮ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಅವರಿಗೆ ಸೇರಿದ ದನದ ಕೊಟ್ಟಿಗೆಗೆ ಜು.16 ರಂದು ರಾತ್ರಿ ಸುಮಾರು 10 ಗಂಟೆ ಸಮಯದಲ್ಲಿ ಆಕಸ್ಮಿಕ ಬೆಂಕಿ ಬಿದ್ದು 2 ಹಸುಗಳು 1 ಕರು ಸುಟ್ಟು ಹೋಗಿತ್ತು. ಈ ಹಿನ್ನಲೆಯಲ್ಲಿ ಶಾಸಕರು ಇಂದು ವೈಯಕ್ತಿಕ ಸಹಾಯಧನ ವಿತರಿಸಿದರು.

ಈ ವೇಳೆ ಮುಳ್ಳೂರು ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ತಾಪಂ ಮಾಜಿ ಸದಸ್ಯ ಗಣಪತಿ ಇಂದೂಲ್ಕರ್, ಮುಖಂಡರಾದ ಪಾಪಣ್ಣ ಸೇರಿದಂತೆ ಗ್ರಾಮದ ಮುಖಂಡರು, ಮಂಜುನಾಥ್ ಸ್ನೇಹಜೀವಿ ಬಳಗದ ಅಭಿಮಾನಿಗಳು ಹಾಜರಿದ್ದರು.

ಕೆ.ಎಂ.ಕೃಷ್ಣನಾಯಕರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಘೋಷಿಸಿದರೆ

ಬಿಜೆಪಿ, ಕಾಂಗ್ರೆಸ್‌ನ ಸಾಕಷ್ಟು ಕಾರ್ಯಕರ್ತರಿಂದ ಬೆಂಬಲ

ಜೆಡಿಎಸ್ ಮುಖಂಡ ಸಿ.ವಿ.ನಾಗರಾಜ್ ವಿಶ್ವಾಸ



ಹೆಚ್.ಡಿ.ಕೋಟೆ, ಜು.24– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಟೆ ವಿಧಾನಸಭಾ ಕ್ಷೇತ್ರದಿಂದ ಕೆ.ಎಂ.ಕೃಷ್ಣನಾಯಕರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಘೋಷಿಸಿದರೆ ಬಿಜೆಪಿ, ಕಾಂಗ್ರೆಸ್‌ನ ಸಾಕಷ್ಟು ಕಾರ್ಯಕರ್ತರು ಜೆಡಿಎಸ್‌ಗೆ ಬೆಂಬಲ ನೀಡಲಿದ್ದಾರೆ ಎಂದು ಜೆಡಿಎಸ್ ತಾಲೂಕು ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಚಿಕ್ಕಕೆರೆಯೂರು ಖಾಸಗಿ ಫಾರಂ ಹೌಸ್‌ನಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಇಷ್ಟು ವರ್ಷ ದುಡಿದರೂ, ಬಿಜೆಪಿ ಸಂಘಟಿಸಲು ಸಾಧ್ಯವಾಗದೆ ಬೇಸರಗೊಂಡಿರುವ ಸಾವಿರಾರು ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ. ಕೆ.ಎಂ.ಕೃಷ್ಣನಾಯಕ ಅವರನ್ನು ಮುಂದಿನ ವಿಧಾನಸಭೆ ಚುನಾವಣಾ ಅಭ್ಯರ್ಥಿಯಾಗಿ ಘೋಷಿಸಿದರೆ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಸಾವಿರಾರು ಕಾರ್ಯಕರ್ತರು, ಮುಖಂಡರು ಬೆಂಬಲ ಸೂಚಿಸುವುದಾಗಿ ಭರವಸೆ ನೀಡಿದ್ದು, ಈ ಬಗ್ಗೆ ಎರಡೂ ಪಕ್ಷದವರು ಈಗಾಗಲೇ ಮಾತುಕತೆ ನಡೆಸಿದ್ದಾರೆ ಎಂದರು.

ಜೆಡಿಎಸ್‌ನಲ್ಲಿ ಸಂಘಟನೆ ಕಡಿಮೆಯಾಗುತ್ತಾ ಬಂದಿದೆ. ಇದಕ್ಕೆ ಕೆಲ ಚುನಾವಣಾ ಆಕಾಂಕ್ಷಿಗಳ ಗುಂಪುಗಾರಿಕೆ ಕಾರಣ. ಇವರಿಂದ ಜೆಡಿಎಸ್ ಪಕ್ಷಕ್ಕೆ ಹಾಗೂ ತಾಲೂಕಿನ ಜನತೆಗೆ ಯಾವುದೇ ಕೊಡುಗೆ ಇಲ್ಲ. ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದ್ದು, ಮೊಟ್ಟ ಮೊದಲಿಗೆ ಕ್ಷೇತ್ರದಲ್ಲಿ ಜೆಡಿಎಸ್ ಕಚೇರಿ ಉದ್ಘಾಟಿಸಲಾಗಿದೆ. ಅದೇ ರೀತಿ ಇತ್ತೀಚೆಗೆ ಅಪ್ಪಾಜಿ ಕ್ಯಾಂಟೀನ್ ಅನ್ನು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಉದ್ಘಾಟಿಸಿದ್ದಾರೆ. ಈ ನಿಟ್ಟಿನಲ್ಲಿ ಕುಮಾರಸ್ವಾಮಿ ಅವರ ಮಾರ್ಗದರ್ಶನದ ಮೇರೆಗೆ ಕೆ.ಎಂ.ಕೃಷ್ಣಾಯಕ ಅವರ ನೇತೃತ್ವದಲ್ಲಿ ತಾಲೂಕಿನಲ್ಲಿ ಪಕ್ಷ ಸಂಘಟಿಸಲಾಗುವುದು ಎಂದರು.

ಈ ವೇಳೆ ಕಾಡಾ ಸದಸ್ಯ ಸಿಂಡೇನಹಳ್ಳಿ ಯತೀಶ್, ತಾಪಂ ಮಾಜಿ ಸದಸ್ಯ ಶಂಭೇಗೌಡ, ಮುಖಂಡ ವೈಕುಂಠ ನಾಯಕ, ಗ್ರಾಪಂ ಸದಸ್ಯರಾದ ಶಿವರಾಮೇಗೌಡ, ಮಾರುತಿ, ಗಿರೀಶ್, ಮಹೇಶ, ವಕೀಲರಾದ ಪ್ರಶಾಂತ್, ಜಿ.ಎನ್.ಪ್ರಸನ್ನ, ರವಿ, ರಮೇಶ, ಜಿತೇಂದ್ರ, ಕುಮಾರ್, ಶಿವಯ್ಯ, ಕಾಳಪ್ಪ.ಜಿ, ಕೆಂಪೇಗೌಡ, ಗೋವಿಂದೇಗೌಡ, ಎಂ.ರಾಜಣ್ಣ ಬಸವರಾಜು, ಜಿ.ರವಿ, ಪ್ರದೀಪ, ಡಿ.ಆರ್.ನಾಗರಾಜು, ಶಿವರಾಮೇಗೌಡ, ಎ.ಆರ್.ಹರೀಶ್, ವೆಂಕಟೇಶ, ನಾಗರಾಜು, ಸೋಮು, ಮಾಯಪ್ಪ, ನಾಗರಾಜಪ್ಪ, ನಿಂಗೇಗೌಡ, ರಾಜು, ಯೋಗೀಶ್, ಶಶಿ, ವೆಂಕಟೇಗೌಡ, ಪ್ರಸನ್ನ, ಜೈ ಶಂಕರ, ಕೃಷ್ಣ, ಮಹದೇವ್, ಚಂದ್ರಶೇಖರ, ಶಂಕರ, ದೇವದಾಸ್, ಮಲ್ಲಿಕಾರ್ಜುನ, ಶಿವಮಲ್ಲಪ್ಪ, ನಾಗರಾಜಪ್ಪ, ಗಿರೀಶ, ಶಿವುಸಪ್ಪ ಗಣೇಶ್, ಮಹದೇವಗೌಡ, ರಮೇಶ್, ಮಾದಪ್ಪ, ಡಿ.ನಾಗರಾಜು ಸೇರಿದಂತೆ ಬಿದರಹಳ್ಳಿ, ಸಾಗರೆ, ಆಗತ್ತೂರು, ಬಿ.ಮಟ್ಟಕೆರೆ, ಹೆಗ್ಗನೂರು, ಮುಳ್ಳೂರು, ಗುಜ್ಜಪ್ಪನಹುಂಡಿ, ಮಾದಾಪುರ, ಅಂತರಸಂತೆ, ಅಣ್ಣೂರು, ಸಿಂಡೇನಹಳ್ಳಿ, ಆಲನಹಳ್ಳಿ, ಕ್ಯಾತನಹಳ್ಳಿ, ಹೊಮ್ಮರಗಳ್ಳಿ, ಹಂಪಾಪುರ, ಏರ್‌ಗಳ್ಳಿ ಸೇರಿದಂತೆ ಇನ್ನಿತರ ಗ್ರಾಮಗಳಿಂದ ಸುಮಾರು 2 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಪಟ್ಟಣದ ಮಿನಿವಿಧಾನಸೌಧದ ಎದುರು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಉದ್ಘಾಟಿಸಿರುವ ನಮ್ಮ ಅಪ್ಪಾಜಿ ಕ್ಯಾಂಟೀನ್ ಸೋಮವಾರದಿಂದ ಸೇವೆಗೆ ಮುಕ್ತವಾಗಲಿದೆ. ತಾಲೂಕಿನ ಜನತೆ ಈ ಒಂದು ಒಳ್ಳೆಯ ಸೇವಾ ಕಾರ್ಯಕ್ಕೆ ಆಶೀರ್ವದಿಸಬೇಕು.
-ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಮುಖಂಡ

ಚಿರತೆ ದಾಳಿಗೆ ಕರು ಬಲಿ

ಸರಗೂರು, ಜು.24– ಚಿರತೆ ದಾಳಿಗೆ ಕರು ಬಲಿಯಾಗಿರುವ ಘಟನೆ ಪಟ್ಟಣದ 12ನೇ ವಾರ್ಡ್‌ನಲ್ಲಿ ಶನಿವಾರ ರಾತ್ರಿ ನಡೆದಿದೆ.

ಇಲ್ಲಿನ ನಿವಾಸಿ ನಾಗರಾಜು ಅವರಿಗೆ ಸೇರಿದ ಕರು ಬಲಿಯಾಗಿರುವುದು. ಎಂದಿನಂತೆ ರಾತ್ರಿ ಕೊಟ್ಟಿಗೆಯಲ್ಲಿ ಹಸು ಹಾಗೂ ಕರುವನ್ನು ಕಟ್ಟಿಹಾಕಿದ್ದರು. ರಾತ್ರಿ ಕೊಟ್ಟಿಗೆಗೆ ನುಗ್ಗಿರುವ ಚಿರತೆ ಕರುವಿನ ಮೇಲೆ ದಾಳಿ ನಡೆಸಿ ಬಲಿ ಪಡೆದಿದೆ. ಅಲ್ಲದೇ ಕರು ಎಳೆದೊಯ್ಯುವ ಪ್ರಯತ್ನಿಸಿದ್ದು, ಸಾಧ್ಯವಾಗದಿದ್ದಾಗ ಅರೆ ಬರೆ ತಿಂದು ಪರಾರಿಯಾಗಿದೆ. ಚಿರತೆ ದಾಳಿಯಿಂದ ಪಟ್ಟಣದ ಜನತೆ ಭಯಗೊಂಡಿದ್ದಾರೆ. ಹೀಗಾಗಿ ಕೂಡಲೇ ಬೋನಿಟ್ಟು ಚಿರತೆ ಸೆರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಸ್ತೆ ಬದಿ ಹಳ್ಳಕ್ಕೆ ಬಿದ್ದ ಬೈಕ್: ಸವಾರ ಸಾವು



ಹುಣಸೂರು, ಜು.24– ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ಬದಿಯ ಹಳ್ಳಕ್ಕೆ ಬಿದ್ದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬನ್ನಿಕುಪ್ಪೆ ಬಳಿ ಶನಿವಾರ ತಡರಾತ್ರಿ ನಡೆದಿದೆ.

ತಾಲೂಕಿನ ನರಸಿಂಹಸ್ವಾಮಿ ತಿಟ್ಟು ಬಡಾವಣೆ ನಿವಾಸಿ ಬೇನಡಿಕ್, ಪ್ರೇಮಮೇರಿ ದಂಪತಿ ಪುತ್ರ ಚೇತನ್‌ರಾಜನ್ (30) ಮೃತಪಟ್ಟವರು. ಮೈಸೂರಿನಲ್ಲಿ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಚೇತನ್ ರಾಜನ್ ಎಂದಿನಂತೆ ಕೆಲಸ ಮುಗಿಸಿಕೊಂಡು ತಮ್ಮ ಬೈಕಿ(ಕೆಎ.45, ಇಸಿ.7700)ನಲ್ಲಿ ರಾತ್ರಿ ಮೈಸೂರಿನಿಂದ ಹುಣಸೂರಿಗೆ ಬರುತ್ತಿದ್ದ ವೇಳೆ ಮೈಸೂರು–ಬಂಟ್ವಾಳ ಹೆದ್ದಾರಿಯ ಬನ್ನಿಕುಪ್ಪೆ ಬಳಿ ನಿಯಂತ್ರಣ ತಪ್ಪಿ ರಸ್ತೆ ಬಳಿಯ ಹಳ್ಳಕ್ಕೆ ಬಿದ್ದಿದ್ದಾರೆ. ಈ ವೇಳೆ ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಭಾನುವಾರ ಬೆಳಗ್ಗೆ ದಾರಿ ಹೋಕರು ನೀಡಿದ ಮಾಹಿತಿ ಮೇರೆಗೆ ಬಿಳಿಕೆರೆ ಠಾಣಾ ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಚೇತನ್ ರಾಜನ್ ನಿಯಂತ್ರಣ ತಪ್ಪಿ ಬಿದ್ದು ಸಾವನ್ನಪ್ಪಿದ್ದಾರೋ ಅಥವಾ ಹೆದ್ದಾರಿಯಲ್ಲಿ ಯಾವುದಾದರೂ ವಾಹನ ಡಿಕ್ಕಿ ಹೊಡೆದಿದೆಯೋ ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ಶವವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.